# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ ೧೨ ಸಂಚಿಕೆ ೫ ಫೆಬ್ರವರಿ ೪, ೧೯೯೦ ರೂ. ೧.೫೦

### ಪೂರ್ವ ಯೂರೋಪಿನ ಬದಲಾವಣೆಗಳ ಬಗ್ಗೆ ಪಾಲಿಟ್ ಬ್ಯೂರೊ

# ವಿಶ್ವ ಸಮಾಜವಾದಕ್ಕೊಂದು ಪ್ರಮುಖ ಹಿನ್ನಡೆ

ಪೂರ್ವ ಯುರೋಪಿನ ಸಮಾಜವಾದಿ ದೇಶಗಳ ಬೆಳವಣಿಗೆಗಳ ಬಗ್ಗೆ ಪತ್ರಿಕೆಗಳ ವರದಿಗಳು ಸಮಾಜವಾದದ ಹಿತೈಷಿಗಳಲ್ಲಿ ಆತಂಕ, ಗೊಂದಲ ಉಂಟುಮಾಡಿದೆ. ಇವು ಎಷ್ಟು ನಿಜ, ಏಕೆ ಎಂಬ ಪ್ರಶ್ನೆಗಳನ್ನು ಎತ್ತಿವೆ. ಕಳೆದ ಸಂಚಿಕೆಯಲ್ಲಿ ಈ ಬಗ್ಗೆ ಕಾಂ. ಎಂ. ಬಸವಪುನ್ನಯ್ಯನವರ ಲೇಖನ ಹಾಗೂ ಫಿಡೆಲ್ ಕ್ಯಾಸ್ಟ್ರೋರವರ ಭಾಷಣದ ಅಂಶಗಳನ್ನು ಓದಿರುವಿರಿ. ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಈ ನಡುವೆ ಜನವರಿ 12 ಹಾಗೂ 13 ರಂದು ಸಭೆ ಸೇರಿ ಈ ಬಗ್ಗೆ ಚರ್ಚಿಸಿ ಒಂದು ಹೇಳಿಕೆಯನ್ನು ಅಂಗೀಕರಿಸಿತು. ಅದನ್ನು ಈ ಮುಂದೆ ಕೊಡಲಾಗಿದೆ. ಈ ಬಗ್ಗೆ ವಿಶ್ಲೇಷಣೆ ನಡೆಸಲು ಸಮಗ್ರ ಅಧ್ಯಯನ ನಡೆಸಿ ಒಂದು ದಸ್ತಾವೇಜು ತಯಾರಿಸಿ ಏಪ್ರಿಲ್ 1990 ರಲ್ಲಿ ಕೇಂದ್ರ ಸಮಿತಿಯಲ್ಲಿ ಮಂಡಿಸಲು ಪಾಲಿಟ್‌ಬ್ಯೂರೋದ ಈ ಸಭೆ ನಿರ್ಧರಿಸಿತು.

ಪೂರ್ವ ಯುರೋಪಿನ ದೇಶಗಳ ಇತ್ತೀಚಿನ ಬೆಳವಣಿಗೆಗಳು ವಿಶ್ವಶಾಂತಿ, ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿ ಹೋರಾಟದಲ್ಲಿ ತೊಡಗಿರುವ ಎಲ್ಲಾ ಕಮ್ಯುನಿಸ್ಟರಿಗೆ ಮತ್ತು ಸಮಾಜವಾದದ ಹಿತಚಿಂತಕರಿಗೆ ಬಹಳ ಆತಂಕ ಮತ್ತು ತಲ್ಲಣ ಉಂಟುಮಾಡಿವೆ. ವಿಶ್ವ ಸಮಾಜವಾದಕ್ಕೆ ಇದೊಂದು ಹಿನ್ನಡೆ. ಇದು ಕ್ರಾಂತಿ ವಿರೋಧಿ ಆಕ್ರಮಣಗಳ ಹೊಸ ಸಾಧ್ಯತೆಗಳನ್ನು ಸೃಷ್ಟಿಸಿದೆ.

ಕಳೆದ ಎರಡು ವರ್ಷಗಳಲ್ಲಿ ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ವಿವಿಧ ಬೆಳವಣಿಗೆಗಳು, ಪ್ರಶ್ನೆಗಳು ಎದ್ದು ಬರುತ್ತಿದ್ದಂತೆಯೇ ಈ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಿದೆ. ಸೋವಿಯತ್ ಒಕ್ಕೂಟದ ಕೆಲವು ಸೈದ್ಧಾಂತಿಕ ಪ್ರಶ್ನೆಗಳು ಮತ್ತು ಬೆಳವಣಿಗೆಗಳ ಬಗ್ಗೆ ಮೇ ಮತ್ತು ಆಗಸ್ಟ್ 1988ರ ನಿರ್ಣಯಗಳು, ಚೀಣಾ, ಪೋಲೆಂಡ್ ಮತ್ತು ಹಂಗೆರಿಯ ಬೆಳವಣಿಗೆಗಳನ್ನು ಕುರಿತಂತೆ ಜುಲೈ ಮತ್ತು ಅಕ್ಟೋಬರ್ 1989ರ ನಿರ್ಣಯಗಳು ಪಕ್ಷದ ನಿಲುವುಗಳನ್ನು ನಿರೂಪಿಸಿವೆ.

ಸೋವಿಯತ್ ಒಕ್ಕೂಟ ಅತ್ಯಂತ ಮಹತ್ವದ ಪಾತ್ರವಹಿಸಿದ್ದ ಫ್ಯಾಸಿಸಂನ ಮೇಲಿನ ವಿಜಯದ ಫಲವಾಗಿ ಎರಡನೇ ಮಹಾಯುದ್ಧದ ನಂತರದ ಘಟ್ಟದಲ್ಲಿ ಸಮಾಜವಾದಿ ದೇಶಗಳ ಸಮುದಾಯ ಒಂದು ಬೃಹತ್ ಶಕ್ತಿಯಾಗಿ ಮೂಡಿಬಂತು. ವಿಶ್ವದ ಬೆಳವಣಿಗೆಗಳ ದಿಕ್ಕಿನ ಮೇಲೆ ಪ್ರಭಾವ ಬೀರಿದ ಶಕ್ತಿಯಿದು. ಮನುಷ್ಯನಿಂದಮನುಷ್ಯನ ಶೋಷಣೆಯ ಅಂತ್ಯ ಮಾಡಿದ, ಬಂಡವಾಳಶಾಹಿಯ ಸಾಮಾಜಿಕ ಅನಿಷ್ಟಗಳನ್ನೂ ನಿರ್ಮೂಲನ ಮಾಡಿದ ಒಂದು ಸಮಾಜದ ಸ್ಥಾಪನೆ ಮಾನವ ನಾಗರಿಕತೆಯ ಒಂದು ಮುನ್ನಡೆ. ಇದು ದಮನಕ್ಕೊಳಗಾದ ಕೋಟಿಗಟ್ಟಲೆ ಜನ ತಮ್ಮ ಮೇಲಿನ ವಸಾಹತು ಶಾಹಿ ನೊಗವನ್ನು ಕಿತ್ತೊಗೆಯಲು ಪ್ರೇರಣೆ ನೀಡಿತು. ಇವೆಲ್ಲಾ ಅಂತರಾಷ್ಟ್ರೀಯ ವರ್ಗ ಬಲಾಬಲವನ್ನು ತೀವ್ರವಾಗಿ ಬದಲಿಸಿದವು. ವಿಶ್ವ ಶಾಂತಿಗಾಗಿ ಸಮಾಜವಾದದ ಅವಿರತ ಪ್ರಯತ್ನಗಳಿಂದಾಗಿ ಕಳೆದ ನಲ್ವತ್ತು ವರ್ಷಗಳಲ್ಲಿ ಹಿಂದಿನ ಅವಧಿಗೆ ಹೋಲಿಸಿದರೆ ಶಾಂತಿ ನೆಲೆಯಾಗಿರುವುದನ್ನು ಕಂಡು ಸಾವಿರಾರು ಜನರು ಸಮಾಜವಾದದತ್ತ ಪ್ರೇರಿತರಾಗಿದ್ದಾರೆ. ಕಮ್ಯೂನಿಸ್ಟ್ ನೇತೃತ್ವದಲ್ಲಿ ಪೂರ್ವ ಯುರೋಪಿನ ದೇಶಗಳು ತಂದ ಮೂಲಭೂತ ಸಾಮಾಜಿಕ ಪರಿವರ್ತನೆ ಹಳೆಯ ಶೋಷಕ ವರ್ಗಗಳ ಆಳ್ವಿಕೆಯನ್ನೂ ಕೊನೆಗೊಳಿಸಿ ಸಮಾಜವಾದಿ ಮುನ್ನಡೆಯ ಅಡಿಗಲ್ಲು ಹಾಕಿದವು.

### ಏಕೆ ಈ ಹಿನ್ನಡೆ?

ಆದರೆ ಸಮಾಜವಾದ ಕಟ್ಟುವಲ್ಲಿ, ಸಮಾಜವಾದಿ ದೇಶಗಳ ನಿರ್ವಹಣೆಯಲ್ಲಿ ಬಹಳಷ್ಟು ವಿಕೃತಿಗಳಿದ್ದವೆಂಬುದು ರೊಮೆನಿಯಾದ ಕಳವಳಕಾರಿ ಬೆಳವಣಿಗೆಗಳೂ ಸೇರಿದಂತೆ ಪೂರ್ವ ಯುರೋಪಿನ ದೇಶಗಳ ಇತ್ತೀಚಿನ ಘಟನೆಗಳು ಬೆಳಕಿಗೆ ತಂದಿವೆ. ಸಮಾಜವಾದಿ ಪ್ರಜಾಪ್ರಭುತ್ವ ಬೂರ್ಜ್ವಾ ಪ್ರಜಾಪ್ರಭುತ್ವಕ್ಕೆ ಹೋಲಿಸಿದರೆ ಒಂದು ಮೇಲ್ಮಟ್ಟದ ಪ್ರಜಾಪ್ರಭುತ್ವ ಸ್ವರೂಪ. ಇದು ಎಲ್ಲಾ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಹೆಚ್ಚೆಚ್ಚು ಭಾಗವಹಿಸುವಂತೆ ಜನ ವಿಭಾಗಗಳನ್ನು ಸೆಳೆಯಬೇಕು. ಇದರಲ್ಲಿ ವಿಫಲತೆ ಮತ್ತು ಸಮಾಜವಾದಿ ಕಾನೂನು

ಪುಟ 8 ಕ್ಕೆ

### ಲೂಧಿಯಾನ ಸರ್ವಪಕ್ಷ ರ್‍ಯಾಲಿ

# ನಮಗೆ ಶಾಂತಿ ಬೇಕು : ಪಂಜಾಬಿಗಳ ಒಕ್ಕೊರಲಿನ ಕೂಗು

ರ್‍ಯಾಲಿಗೆ ಜನ ಸಾವಿರ ಗಟ್ಟಲೆಯಲ್ಲಿ ಬಂದರು - ಜನರ ಉತ್ಸಾಹ, ಧೃಡ ನಿರ್ಧಾರ 1986-87 ರ ಸರ್ವ ಪಕ್ಷ ರ್‍ಯಾಲಿಗಳನ್ನು ನೆನಪಿಗೆ ತರುವಂತಿದ್ದವು. ಹಲ್ವಾರಾ ವಿಮಾನ ನಿಲ್ದಾಣದಿಂದ ರ್‍ಯಾಲಿಯ ಜಾಗೆಯವರೆಗೆ ಜನ ಕಿಕ್ಕಿರಿದು ತುಂಬಿದ್ದರು. ಪ್ರಧಾನ ಮಂತ್ರಿ ಮತ್ತು ಸರ್ವ ಪಕ್ಷಗಳ ನಾಯಕರಿಗೆ ಅದ್ಭುತ ಅಭೂತಪೂರ್ವ ಸ್ವಾಗತ ನೀಡಿದರು. ರ್‍ಯಾಲಿಯಲ್ಲಿ ಭಾಗವಹಿಸದಿದ್ದರೂ ಎಸ್.ಎಸ್. ಮಾನ್ ಮತ್ತು ಅಕಾಲಿ ದಳ (ಮಾನ್ ಗುಂಪು) ದ ಇತರ ಪಾರ್ಲಿಮೆಂಟ್ ಸದಸ್ಯರು ವಿಮಾನ ನಿಲ್ದಾಣದಲ್ಲಿ ನಾಯಕರನ್ನು ಸ್ವಾಗತಿಸಿದರು. ಜನವರಿ 11ರಂದು ನಡೆದ ಈ ಸರ್ವಪಕ್ಷ ರ್‍ಯಾಲಿಯಲ್ಲಿ ಭಾಗವಹಿಸಿದ ಮಾತನಾಡಿದ ನಾಯಕರೆಂದರೆ ಪ್ರಧಾನ ಮಂತ್ರಿ, ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾ॥ ಹರಕಿಶನ್ ಸಿಂಗ್ ಸುರಜೀತ್, ಅವತಾರ್ ಸಿಂಗ್ ಮಲ್‌ಹೋತ್ರಾ (ಸಿ.ಪಿ.ಐ.) ವಾಜಪೇಯಿ (ಬಿ.ಜೆ.ಪಿ) ಬರ್ನಾಲಾ, ಬಾದಲ್, ದೇವಿಲಾಲ್, ಮುಫ್ತಿ ಮಹಮ್ಮದ್ ಸಯ್ಯಿದ್, ಐ.ಕೆ. ಗುಜ್ರಾಲ್ ಮುಂತಾದವರು. ರ್‍ಯಾಲಿಯ ಅಧ್ಯಕ್ಷ ಮಂಡಳಿಯಲ್ಲಿ ಪ್ರಮುಖ ಐದು ಪಕ್ಷಗಳ ಸಿ.ಪಿ.ಐ. (ಎಂ) ಸಿ.ಪಿ.ಐ., ಬಿಜೆ.ಪಿ, ಅಕಾಲಿದಳ (ಲೊಂಗೋವಾಲ್), ಜನತಾದಳ-ರಾಷ್ಟ್ರ ನಾಯಕರು ಭಾಗವಹಿಸಿದ್ದರು. ಆರ್.ಎಸ್.ಪಿ., ಫಾರ್ವರ್ಡ್ ಬ್ಲಾಕ್, ಎ.ಜಿ.ಪಿ. ಮುಂತಾದ ಪಕ್ಷಗಳ ನಾಯಕರೂ ಭಾಗವಹಿಸಿದರು. ಅಕಾಲಿದಳ (ಮಾನ್ ಗುಂಪು), ಕಾಂಗ್ರೆಸ್ (ಐ) ಅವರನ್ನು ಆಹ್ವಾನಿಸಿದ್ದಾಗ್ಯೂ ಯಾರೂ ಭಾಗವಹಿಸಲಿಲ್ಲ.

ರಾಷ್ಟ್ರೀಯ ರಂಗ ಸರ್ಕಾರ ಇರಲಿ ಅಥವಾ ಬಿಡಲಿ, ತಮಗೆ ಹಿಂದೂ ಸಿಖ್ ಐಕ್ಯತೆ ಕಾಪಾಡುವುದು ಮುಖ್ಯ ಎಂದು ಪ್ರಧಾನ ಮಂತ್ರಿ ಘೋಷಿಸಿದರು ಪಂಜಾಬಿನ ಜನತೆಯ ಮೇಲೆ ಮಾಡಿದ ಗಾಯ ಮಾಗುವ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ವಿವರಿಸಿದ ಪ್ರಧಾನ ಮಂತ್ರಿಗಳು ಅಮಾಯಕ ಜನರ ಕಗ್ಗೊಲೆ ನಿಲ್ಲಬೇಕು ಎಂದು ಒತ್ತಿ ಹೇಳಿದರು. ಸರ್ಕಾರ ಯಾರದ್ದೇ ಪ್ರಾಣ ತೆಗೆದುಕೊಳ್ಳುವುದಿಲ್ಲ. ಬೇರೆಯವರಾರು ಇತರರ ಪ್ರಾಣ ತೆಗೆದುಕೊಳ್ಳಲೂ ಬಿಡುವುದಿಲ್ಲ ಎಂದು ಸ್ಪಷ್ಟವಾಗಿ ಸಾರಿದರು.

ಕಾ॥ಸುರಜೀತ್ ಅವರು ಮಾತನಾಡಿ ಭಯೋತ್ಪಾದಕರನ್ನು ಪ್ರತ್ಯೇಕಿಸಿ ಶಾಂತಿ ತರಲು ಜನತೆ ಕ್ರಮ ತೆಗೆದುಕೊಳ್ಳಬೇಕೆಂದು ಕರೆ ನೀಡಿದರು. ಉಳಿದಿರುವ ಇರುಸು ಮುರುಸು ಹೋಗಲಾಡಿಸುವುದು ಮತ್ತು ಗಾಯ ಮಾಸುವ ಕೆಲಸದಲ್ಲಿ ತೊಡಗುವುದು, ಜನರನ್ನು ಆಣಿನೆರೆಸುವುದು ಮತ್ತು ಬಗೆಹರಿಯದೆ ಉಳಿದಿರುವ ಸಮಸ್ಯೆಗಳನ್ನು ಪರಿಹರಿಸಲು ಕ್ರಮಕೈಗೊಳ್ಳುವುದು - ಇವು ಮೂರು ಅಗತ್ಯವೆಂದರು. ಈ ಮೂರಕ್ಕೆ ಆಧಾರ ಆಗಲೇ ಇದೆ. ಆನಂದಪುರ ಸಾಹಿಬ್ ನಿರ್ಣಯ ಜಾರಿ ಬಗೆಗಿನ ಅಕಾಲಿ ದಳದ ಬೇಡಿಕೆಗಳನ್ನು ಖಂಡಿಸಿದ ಅವರು, ಇದು ಧರ್ಮದ ಆಧಾರದ ಮೇಲೆ ದೇಶದ ವಿಭಜನೆಗೆ ಅಡ್ಡಿತೆ ಇಡುತ್ತದೆ ಎಂದರು. ಎಲ್ಲಾ ಅಕಾಲಿಗಳು ಖಲಿಸ್ತಾನ ಮತ್ತು ಭಯೋತ್ಪಾದನೆಗೆ ತಮ್ಮ ಸ್ಪಷ್ಟ ವಿರೋಧ ವ್ಯಕ್ತಪಡಿಸಬೇಕೆಂದು ಮುಫ್ತಿ ಮಹಮ್ಮದ್ ಸಯ್ಯಿದ್ ಪಂಜಾಬಿನ ಸಮಸ್ಯೆ ಉಲ್ಬಣಗೊಳಿಸುತ್ತಿರುವ ವಿದೇಶಿ ಶಕ್ತಿಗಳನ್ನು ತರಾಟೆಗೆ ತೆಗೆದುಕೊಂಡರು. ಬರ್ನಾಲಾ ರಾಜೀವ ಲೋಂಗೋವಾಲ್ ಒಪ್ಪಂದ ಜಾರಿಗೆ ತರದೆ ಪಂಜಾಬಿನ ಸಮಸ್ಯೆಯನ್ನು ಕಾಂಗ್ರೆಸ್ (ಐ) ಉಲ್ಬಣಾವಸ್ಥೆಗೆ ತಂದಿದೆ ಎಂದರು. ಬಾದಲ್ ಅಮಾಯಕ ಜನರ ಹತ್ಯೆಯನ್ನು ಖಂಡಿಸಿದರೂ, ಆನಂದಪುರ ಸಾಹಿಬ್ ನಿರ್ಣಯವನ್ನು ಮನ್ನಿಸಬೇಕು ಮತ್ತು ಉಗ್ರಗಾಮಿಗಳ ಜತೆ ಮಾತುಕತೆ ನಡೆಸಬೇಕು ಎಂದರು. ಸಿಖ್-ವಿರೋಧಿ ದಂಗೆಗಳ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಬೇಕು ಎಂದರು.

ರ್‍ಯಾಲಿ ಪಂಜಾಬಿನಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ಸರ್ವಾನುಮತವತ್ತ ಕೆಲಸ ಮಾಡಬೇಕೆಂದೂ, ಎಲ್ಲ ರಕ್ತಪಾತ ಭಯೋತ್ಪಾದನೆ ನಿಲ್ಲಬೇಕೆಂದೂ, ಪ್ರಾಣ ಆಸ್ತಿ ಪಾಸ್ತಿ ಮಾನಮರ್ಯಾದೆಗಳನ್ನು ಕಾಪಾಡಲು ಮತ್ತು ಎಲ್ಲ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿ ಪಂಜಾಬಿಗೆ ನ್ಯಾಯ ಮತ್ತು ಶಾಂತಿ ಒದಗಿಸಬೇಕೆಂಬ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿತು.

## ಚುನಾವಣೆಗಳು ಏನನ್ನು ಸಾಧಿಸಬೇಕು?

ಪುನಃ ಚುನಾವಣೆಗಳಲ್ಲಿ ಭಾಗವಹಿಸುವುದು ಜನತೆಯ ಮುಂದಿನ ಪ್ರಥಮ ಕರ್ತವ್ಯವಾಗಿದೆ. ಸ್ವಾಭಾವಿಕವಾಗಿ ಎಲ್ಲಾ ರಾಜಕೀಯ ಪಕ್ಷಗಳೂ ಒಂದಲ್ಲೊಂದು ಪ್ರದೇಶದಲ್ಲಿ ಒಂದಲ್ಲೊಂದು ರೀತಿಯಲ್ಲಿ ಸಕ್ರಿಯವಾಗುತ್ತಿವೆ.

ದೇಶದ ಹಲವು ರಾಜ್ಯಗಳಲ್ಲಿ - ಒರಿಸ್ಸಾ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ್, ಗುಜರಾತ್, ಮಹಾರಾಷ್ಟ್ರ, ಹಿಮಾಚಲ ಪ್ರದೇಶ, ಮಣಿಪುರ ಮತ್ತು ಪಾಂಡಿಚೇರಿಗಳಲ್ಲಿ ವಿಧಾನ ಸಭೆಗೆ ಚುನಾವಣೆಗಳು ಈ ತಿಂಗಳು 27 ರಂದು ನಡೆಯಲಿವೆ. (ಮಣಿಪುರದಲ್ಲಿ ಫೆಬ್ರವರಿ 12 ಕ್ಕೆ ಚುನಾವಣೆಗಳು ನಡೆಯುತ್ತಿವೆ). ಕರ್ನಾಟಕ ರಾಜ್ಯದಲ್ಲಿ ಮಹಾನಗರ ಪಾಲಿಕೆಗಳು, ನಗರ ಸಭೆ ಪುರಸಭೆಗಳಿಗೆ ಹಾಗೂ ಕೆಲವು ಪುನರ್ರಚಿತ ಮಂಡಳ ಪಂಚಾಯತುಗಳಿಗೂ ಇದೇ ಫೆಬ್ರವರಿ 25 ರಂದು ನಡೆಯಲಿವೆ.

ಈ ಎಲ್ಲಾ ಚುನಾವಣೆಗಳಲ್ಲಿ ದೇಶದಲ್ಲೂ, ರಾಜ್ಯದಲ್ಲೂ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತನ್ನ ಶಕ್ತಿಗನುಗುಣವಾಗಿ, ಆದರೆ ತತ್ವಬದ್ಧ ಉದ್ದೇಶಗಳನ್ನು ಮುಂದಿಟ್ಟು ಭಾಗವಹಿಸುತ್ತಿದೆ. ಕಾಂಗ್ರೆಸ್(ಐ) ಪಕ್ಷವನ್ನು ಸೋಲಿಸುವುದು ಮತ್ತು ಬಿ.ಜೆ.ಪಿ. ಮುಸ್ಲಿಂ ಲೀಗ್ ಮತ್ತಿತರ ಮತೀಯ ದೃಷ್ಟಿಯ ರಾಜಕೀಯ ಪಕ್ಷಗಳ ಶಕ್ತಿ ಕಡಿಮೆ ಮಾಡುವುದು, ಅದೇ ವೇಳೆಯಲ್ಲಿ ಸಿ.ಪಿ.ಐ. (ಎಂ) ಮತ್ತು ಇತರ ಎಡ ಪಕ್ಷಗಳ ಸ್ಥಾನಗಳನ್ನು ವೃದ್ಧಿಸುವುದು ಈ ಚುನಾವಣೆಗಳಲ್ಲಿ ನಮ್ಮ ಪಕ್ಷ ಇಟ್ಟುಕೊಂಡಿರುವ ಉದ್ದೇಶಗಳು. ಈ ಉದ್ದೇಶಗಳನ್ನು ಸಾಧಿಸಲು ನಮ್ಮ ಪಕ್ಷ ದೇಶದ ಎಲ್ಲಾ ಜಾತ್ಯತೀತ ಪ್ರಜಾಪ್ರಭುತ್ವ ಪಕ್ಷಗಳ ಜತೆಗೆ ಸ್ಥಾನ ಹೊಂದಾಣಿಕೆ ಮಾಡಲು ಸಿದ್ಧವಾಗಿದೆ. ಆ ಪ್ರಯತ್ನ ಎಲ್ಲೆಡೆಗಳಲ್ಲಿ ನಮ್ಮ ಪಕ್ಷವು ಮಾತುಕತೆ ನಡೆಸುತ್ತ ಬಂದಿದೆ ಮತ್ತು ಈಗಲೂ ಮಾತುಕತೆಗಳನ್ನು ಮುಂದುವರೆಸುತ್ತಿದೆ.

### ಸಂಪಾದಕೀಯ

ಜಾತ್ಯತೀತ ಮತ್ತು ಪ್ರಗತಿಪರ ವ್ಯಕ್ತಿಗಳನ್ನು ಬೆಂಬಲಿಸಲೂ ನಾವು ಸಿದ್ಧರಾಗಿದ್ದೇವೆ.

ಇದೇ ಸಂದರ್ಭದಲ್ಲಿ ನಮ್ಮೆದುರು ಕೆಲವೊಂದು ತೊಡಕಿನ ಸಮಸ್ಯೆಗಳು ಬಂದು ನಿಲ್ಲುತ್ತವೆ. ಒಂದು ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಪಕ್ಷಗಳು ಚುನಾವಣೆಗಳಲ್ಲಿ ತೆಗೆದುಕೊಳ್ಳುತ್ತಿರುವ ಸಂದರ್ಭವಾದಿ ರಾಜಕೀಯ ನಿಲುಮೆ. ಎರಡು, ಬಿ.ಜೆ.ಪಿ. ಈಗ ಲೋಕಸಭೆಯಲ್ಲಿ ಒಂದು ಪ್ರಬಲ ವಿರೋಧ ಪಕ್ಷವಾಗಿದ್ದು ಮತೀಯ ರಾಜಕೀಯವನ್ನು ಪ್ರಚುರ ಪಡಿಸುತ್ತಿದ್ದರೂ ಅದೂ ಒಂದು ವಿರೋಧ ಪಕ್ಷವಾದ್ದರಿಂದ ಅದರೊಡನೆ ಸ್ಥಾನ ಹೊಂದಾಣಿಕೆ ಮಾಡಿದರೆ ತಪ್ಪೇನು ಎಂಬ ಭಾವನೆ - ಇದನ್ನು ಆಧರಿಸಿ ಬಿ.ಜೆ.ಪಿ.ಯ ಉತ್ಪ್ರೇಕ್ಷಿತ ಪ್ರಚಾರ ಮತ್ತು ನಿಲುಮೆ, ಇದರಿಂದಾಗಿ ಅಲ್ಪಸಂಖ್ಯಾತರ ಮಧ್ಯೆ ಅವಶ್ಯಕತೆಗಿಂತ ಅಧಿಕವಾಗಿರುವ ಭಯಭೀತಿ, ಭಯಭೀತಿಯನ್ನು ಚಾಣಾಕ್ಷವಾಗಿ ಉಪಯೋಗಿಸುವ ಕಾಂಗ್ರೆಸ್(ಐ) ಪಕ್ಷ, ಮೂರನೆಯದಾಗಿ, ವಿಪರೀತ ಹಣದ ದುರುಪಯೋಗ.

ಇವುಗಳನ್ನು ಎದುರಿಸಿ ನಮ್ಮ ಪಕ್ಷ ಮತ್ತು ಇತರ ಎಡಪಕ್ಷಗಳು ಜನರ ಮಧ್ಯೆ ಸರ್ವಶಕ್ತಿಯಿಂದ ದುಡಿಯಲೇಬೇಕು. ಜಯ ಸಿಗಬಹುದು ಅಥವಾ ಸೋಲಾಗಬಹುದು. ಇದೊಂದು ಪ್ರಕ್ರಿಯೆ ಇಂದಲ್ಲ ನಾಳೆ ಇದು ಜಯಪ್ರದವಾಗಲೇಬೇಕು. ಕಾರಣ ನಮ್ಮ ಪಕ್ಷ, ಎಡಪಕ್ಷಗಳು ಪ್ರತಿನಿಧಿಸುತ್ತಿರುವ ಉದ್ದೇಶಗಳು ಮತ್ತು ತತ್ವಗಳು ದೇಶದ ಸಮಗ್ರತೆಗೆ ಮತ್ತು ಮುನ್ನಡೆಗೆ ಇರುವ ಏಕೈಕ ಮಾರ್ಗ. ಇಂದು ಈ ಮಾರ್ಗ ದೇಶದ ಹೆಚ್ಚು ಮಂದಿಗೆ ಅನುಭವ ವೇದ್ಯವಾಗದಿದ್ದರೆ, ಮುಂದೆ ಅದು ವೇದ್ಯವಾಗುವುದು. ಘಟನೆಗಳೇ ಅದನ್ನು ಮನದಟ್ಟು ಮಾಡುವವು.

ರಾಮಜನ್ಮಭೂಮಿ - ಬಾಬರಿ ಮಸೀದಿ ಪ್ರಶ್ನೆಯ ವಿಷಯಕ್ಕೇನೇ ಅತ್ಯಂತ ವಿಪುಲ ಪ್ರಚಾರಕೊಟ್ಟು, ಹಲವೆಡೆ ನಿಜವಾಗಿ ಮತೀಯ ಗಲಭೆಗಳನ್ನು ನಡೆಸಿ ಬಿ.ಜೆ.ಪಿ. 1989 ರ ನವಂಬರ್‌ನಲ್ಲಿ ನಡೆದ ಲೋಕಸಭಾ ಚುನಾವಣೆಗಳಲ್ಲಿ ಬಹಳಷ್ಟು ಸೀಟುಗಳನ್ನು ಪಡೆಯಿತು. ಇದೀಗ ಅಷ್ಟೇ ನಿರ್ದಿಷ್ಟವಾಗಿ ಅದು ನಿಲುಮೆ ತೆಗೆದುಕೊಳ್ಳುವುದು ಸಾಧ್ಯವೇ? ತೆಗೆದುಕೊಂಡರೆ ಕೇಂದ್ರದಲ್ಲಿ ಜನತಾದಳದ ಸರಕಾರವು ಉಳಿಯುವುದೇ? ಇದೊಂದು ಕೇವಲ ಜಿಜ್ಞಾಸೆಯ ಪ್ರಶ್ನೆಯಲ್ಲ.

ಪುಟ 8 ಕ್ಕೆ

ಆಧಾರ: ಪಿ.ಡಿ.ಯಲ್ಲಿ ಪ್ರಕಟವಾದ ಇ.ಎಂ.ಎಸ್. ಹಾಗೂ ಸಿ.ಪಿ. ಚಂದ್ರಶೇಖರ್ ಲೇಖನಗಳು

### ಆರ್ಥಿಕ ಸಲಹಾ ಸಮಿತಿಯ ವರದಿ

# ಖಜಾನೆ ಖಾಲಿಯಾಗಿದೆಯೆ? ಮುಂದೇನು?

**ರಾಷ್ಟ್ರೀಯರಂಗ ಸರ್ಕಾರ ಅಧಿಕಾರ ವಹಿಸಿಕೊಂಡ ಕೂಡಲೇ ಆಳುವ ರಂಗದ ನಾಯಕರು ಹಿಂದಿನ ಸರ್ಕಾರ ಖಾಲಿ ಖಜಾನೆಯನ್ನು ಹೊಸ ಸರ್ಕಾರಕ್ಕೆ ಬಳುವಳಿ ಕೊಟ್ಟು ಹೋಗಿದೆ ಎಂದು ಹೇಳಲಾರಂಭಿಸಿದ್ದರು. ಹಿಂದಿನ ಸರ್ಕಾರದ ಪ್ರತಿನಿಧಿಗಳು ಇದು 'ಸುಳ್ಳು' 'ಅತಿಶಯೋಕ್ತಿ' ಎಂದಲ್ಲ ಪ್ರತಿಕ್ರಿಯಿಸಿದ್ದರು. ಈ ಹಿನ್ನೆಲೆಯಲ್ಲಿ ಸರ್ಕಾರ ಆರ್ಥಿಕ ಸಲಹಾ ಸಮಿತಿಗೆ ಪ್ರಸಕ್ತ ಆರ್ಥಿಕ ಪರಿಸ್ಥಿತಿ ಬಗ್ಗೆ ಸಮಗ್ರ ಪರಿಶೀಲನೆ ಮಾಡಿ ವರದಿ ಮಾಡುವಂತೆ ಕೇಳಿತ್ತು. ಪ್ರೊಫೆಸರ್ ಸುಖಮಯ ಚಕ್ರವರ್ತಿ ನಾಯಕತ್ವದ ಈ ಸಮಿತಿಯನ್ನು ಹಿಂದಿನ ಸರ್ಕಾರ ನೇಮಿಸಿತ್ತು. ಆದ್ದರಿಂದ ಇದರ ವರದಿ ಸಾಕಷ್ಟು ನಿಷ್ಪಕ್ಷಪಾತ ಎಂದು ಭಾವಿಸಬಹುದು. ಈಗ ಸಮಿತಿ ವರದಿ ಸಲ್ಲಿಸಿದ್ದು ಇದು ಎಷ್ಟು 'ಸಮತೋಲನದ' ವರದಿ ಎಂದರೆ ಎಲ್ಲರೂ ತಮ್ಮ ಅಭಿಪ್ರಾಯವನ್ನು ವರದಿ ಸಮರ್ಥಿಸಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ! ಕಾಂಗ್ರೆಸ್ಸಿಗರು 'ಖಜಾನೆ ಖಾಲಿಯಾಗಿದೆ' ಎಂಬ ರಾಷ್ಟ್ರೀಯರಂಗದ ಪ್ರಚಾರವನ್ನು ವರದಿ ಅಲ್ಲಗಳೆದಿದೆ ಎಂದರೆ, ಆಳುವ ರಂಗದ ನಾಯಕರ ಆರ್ಥಿಕ ದುಸ್ಥಿತಿಯ ಭೀಕರ ಚಿತ್ರವನ್ನು ವರದಿ ಖಚಿತಪಡಿಸಿದೆ ಎಂದಿದ್ದಾರೆ. ವರದಿ ನಿಜವಾಗಿ ಏನು ಹೇಳುತ್ತದೆ?**

'ಖಜಾನೆ ಖಾಲಿಯಾಗಿದೆ' ಎಂಬ ಮಾತನ್ನು ವರದಿ ಅಲ್ಲಗಳೆಯುವ ಅಥವಾ ಪುಷ್ಟೀಕರಿಸುವ ಪ್ರಶ್ನೆಯೂ ಉದ್ಭವಿಸುವುದಿಲ್ಲ. ಯಾಕೆಂದರೆ ನೇರ ಅರ್ಥದಲ್ಲಿ ಒಂದು ಸರ್ಕಾರಕ್ಕೆ ಎರಡು 'ಸವಲತ್ತು'ಗಳು ಇರುವವರೆಗೆ ಅದರ ಖಜಾನೆ ಖಾಲಿಯಾಗುವುದು ಸಾಧ್ಯವೇ ಇಲ್ಲ! ಆ ಸವಲತ್ತುಗಳಾದರೂ ಏನು?

- ಒಂದನೆಯದಾಗಿ ನೋಟುಗಳನ್ನು ಮುದ್ರಿಸುವ ಪ್ರಿಂಟಿಂಗ್‌ಪ್ರೆಸ್.

-ಎರಡನೆಯದಾಗಿ ಸಾಲ ಕೊಡುವ ಹೊರ ಮಾರುಕಟ್ಟೆಗಳು, ಆರ್ಥಿಕ ಸಂಸ್ಥೆಗಳು.

ಆದರೆ ಒಂದು ಸರ್ಕಾರ ಖಜಾನೆ ಖಾಲಿಯಾಗದಂತೆ ಈ ಎರಡು ಅಂಶಗಳನ್ನು ಮಾತ್ರ ಅವಲಂಬಿಸಿದರೆ ಏನಾಗುತ್ತದೆ? ಆ ದೇಶ ಅಂತರಿಕ ಮತ್ತು ವಿದೇಶೀ ಸಾಲದ ಜಾಲದಲ್ಲಿ ಸಿಕ್ಕಿಕೊಳ್ಳುತ್ತದೆ. ಕಳೆದ 10 ವರ್ಷಗಳ ಆರ್ಥಿಕ ನಿರ್ವಹಣೆ ಬಗ್ಗೆ ಸಮಿತಿ ಪರಿಶೀಲನೆ ಮಾಡಿ ಸರ್ಕಾರ ಇದೇ ಕೆಲಸವನ್ನು ಮಾಡಿದೆ ಎಂಬ ನಿರ್ಧಾರಕ್ಕೆ ಬಂದಿದೆ. ದೇಶದ ಆರ್ಥಿಕತೆ ಅಂತರಿಕ ಮತ್ತು ವಿದೇಶಿ ಸಾಲ ಜಾಲದಲ್ಲಿ ಸಿಕ್ಕಿಹಾಕಿಕೊಂಡಿದೆ ಎನ್ನುವುದು 'ಖಜಾನೆ ಖಾಲಿಯಾಗಿದೆ' ಎಂದು ಅರ್ಥಶಾಸ್ತ್ರದ ಪರಿಭಾಷೆಯಲ್ಲಿ ಹೇಳಿದಂತೆ. ವರದಿ ಏನು ಹೇಳಿದೆ ಎಂದು ವಿವರವಾಗಿ ತಿಳಿದುಕೊಳ್ಳುವ ಮೊದಲು ಈ 10 ವರ್ಷಗಳ ಅವಧಿ ಇಂದಿರಾಗಾಂಧಿಯ ಎರಡನೆ ಸರ್ಕಾರ ಮತ್ತು ರಾಜೀವ್ ಸರ್ಕಾರದ ಅವಧಿ ಎಂದು ನೆನಪಿನಲ್ಲಿಡಬೇಕು. ಆದರೆ ಇಂದಿನ ಈ ಆರ್ಥಿಕ ದುಸ್ಥಿತಿ ಈಗ ತಿರುಗು ಮುರುಗಾಗಿರುವ ರಾಜಕೀಯ ವಾಗ್ವಿವಾದದ ವಿಷಯವಲ್ಲ. ಇದನ್ನು ಸರಿಪಡಿಸಲು ಹೊಸ ನೀತಿಯ ಅನ್ವಯದ ಕಾರ್ಯಾಚರಣೆಗೆ ಎಡೆಕೊಡಬೇಕು.

## ವರದಿ ಏನು ಹೇಳುತ್ತದೆ?

ವರದಿಯ ಮುಖ್ಯ ನಿರ್ಧಾರವನ್ನು ಅದರ ಮಾತುಗಳಲ್ಲೇ ಈ ರೀತಿ ಹೇಳಬಹುದು.

"ಬೆಳವಣಿಗೆಯ ಮಾದರಿ ಮತ್ತು ಅದಕ್ಕೆ ಹಣಕಾಸು ಒದಗಿಸಿದ ರೀತಿ, ಅಂತರಿಕ ಮತ್ತು ವಿದೇಶೀ ಮೂಲಗಳಿಂದ ಹೇಗಿತ್ತೆಂದರೆ ದಶಕದ ಕೊನೆಯ ಹೊತ್ತಿಗೆ, ಬೆಳವಣಿಗೆಗೆ ಅನುಸರಿಸಿದ ಕಾರ್ಯ ವಿಧಾನ (ಅದರಲ್ಲೂ ಕಳೆದ 5 ವರ್ಷಗಳಲ್ಲಿ ಅನುಸರಿಸಿದ್ದು)ದಲ್ಲಿ ಗಣನೀಯ ಬದಲಾವಣೆ ಅಗತ್ಯವೆಂದು ತೋರುತ್ತದೆ. ಸ್ವಾವಲಂಬನೆ ಮತ್ತು ಸಮಾನತೆಯ ಆಧಾರದ ಮೇಲೆ ಬೆಳವಣಿಗೆ ಸರ್ಕಾರದ ನೀತಿಯ ಮುಖ್ಯಭಾಗವಾಗಬೇಕಾದರೆ. ಏಕೆಂದರೆ ಬೆಳವಣಿಗೆಯ ಕಾರ್ಯವಿಧಾನದಲ್ಲಿ ಹುದುಗಿದ್ದ ವೈರುಧ್ಯ ಗಳು ಕಣ್ಣಿಗೆ ಹೊಡೆಯುವಂತೆ ಕಾಣಿಸಿ ಕೊಳ್ಳಲಾರಂಭಿಸಿವೆ. ಈ ವೈರುಧ್ಯಗಳು ಅದರಷ್ಟಕ್ಕೇ ಮಾಯವಾಗಲು ನಿರಾಕರಿಸುತ್ತಿವೆ.... ಇನ್ನು ಹೆಚ್ಚಿನ ಹಣದುಬ್ಬರ ಸೃಷ್ಟಿಸದೆ ಮತ್ತು ಆರ್ಥಿಕತೆಯ ಸಮ ತೋಲನ ಕಳೆದುಕೊಳ್ಳದೆ ಇದೇ ರೀತಿ ಬೆಳವಣಿಗೆ ಮುಂದುವರಿಯಲು ಸಾಧ್ಯ ವಿಲ್ಲ...." (ಆರ್ಥಿಕ ಸಲಹಾ ಸಮಿತಿಯ ವರದಿ ಮುನ್ನುಡಿಯಿಂದ)

*ಈಗಿನ ದುಸ್ಥಿತಿಯ ನಿಜ ಚಿತ್ರಣ ನೀಡಿದರೂ ಇದರಿಂದ ಹೊರಬರುವ ವಿಧಾನಗಳ ಬಗ್ಗೆ ಏನಾದರೂ ಸಲಹೆಗಳನ್ನು ಸಮಿತಿ ನೀಡಿದೆಯೇ?*

## ವರದಿ ನೀಡುವ ಒಟ್ಟಾರೆ ಆರ್ಥಿಕ ಚಿತ್ರಣವೇನು?

★ ಒಟ್ಟು ಆರ್ಥಿಕ ಉತ್ಪನ್ನ ಶೇಕಡಾ 3ರ ದರದಲ್ಲಿ ಇತ್ತೀಚೆಗೆ ಏರುತ್ತಿದ್ದರೂ, ಬೆಳವಣಿಗೆಯಲ್ಲಿ ಬೇರೆ ಬೇರೆ ಆರ್ಥಿಕ ರಂಗಗಳ ನಡುವಣ ವಿಷಮತೆ ಗಂಭೀರವಾದದ್ದು.

★ ಕೃಷಿಯಲ್ಲಿ ಬೆಳವಣಿಗೆ ದರ ಕೇವಲ 2 ಆಗಿದ್ದು, ವರ್ಷದಿಂದ ವರ್ಷಕ್ಕೆ ವಿಪರೀತ ಏರುಪೇರು ಇನ್ನೂ ಕೃಷಿ ಹವಾಮಾನದ ಅನಿಶ್ಚಿತತೆಯ ಮೇಲೆ ಅವಲಂಬಿಸಿರುವುದು ತೋರಿಸುತ್ತದೆ. ಬೇರೆ ಬೇರೆ ಪ್ರದೇಶಗಳಲ್ಲಿ ಕೃಷಿ ಬೆಳವಣಿಗೆಯಲ್ಲಿ ವೈಷಮ್ಯತೆ ಸಹ ಕಡಿಮೆ ಆಗಿಲ್ಲ. ಕಡಿಮೆ ಕೃಷಿ ಬೆಳವಣಿಗೆಯ ದರ ಮತ್ತು ವೈಷಮ್ಯತೆ ಭಾರತ ಆರ್ಥಿಕತೆಯ ಅತಿದೊಡ್ಡ ಶಾಪ.

★ ಕೈಗಾರಿಕೆಯಲ್ಲಿ ಒಟ್ಟಾರೆ ಬೆಳವಣಿಗೆ ದರ ಪರವಾಗಿಲ್ಲವಾದರೂ, ಹೆಚ್ಚಿನ ಬೆಳವಣಿಗೆ ಸೇವಾ ವಿಭಾಗದಲ್ಲಿತ್ತು. ಉತ್ಪಾದನೆಯ ಹೆಚ್ಚಳ ಬಹಳ ಕಡಿಮೆ. ಅದರಲ್ಲೂ ಕೈಗಾರಿಕಾ ಉತ್ಪಾದನ ಹೆಚ್ಚಳ ಕೆಲವೇ ಕ್ಷೇತ್ರಗಳಲ್ಲಿ ಸೀಮಿತವಾಗಿದೆ. ಈ ಕ್ಷೇತ್ರಗಳು ಹೆಚ್ಚಿನ ಆಮದು ಮೇಲೆ ಆಧಾರಿತ, ಹೆಚ್ಚು ಶಕ್ತಿ ಉಪಯೋಗಿಸುವ ದುಬಾರಿ ವಸ್ತುಗಳನ್ನು ಉತ್ಪಾದಿಸುವಂತಹವು. ಶಕ್ತಿ ಉತ್ಪಾದನೆ ಮತ್ತು ಸಾಗಾಣಿಕೆ ಕ್ಷೇತ್ರಗಳಲ್ಲಿ ಬೆಳವಣಿಗೆ ಸಾಕಷ್ಟಿದ್ದರೂ, ಇದು ಈಗಾಗಲೇ ಸ್ಥಾಪಿತ ಸಾಮರ್ಥ್ಯದ ಹೆಚ್ಚಿನ ಉಪಯೋಗದ ಮೇಲೆ ಆಧಾರಿತ ವಾದದ್ದು. ನಿಜವಾದ ಸಾಮರ್ಥ್ಯದ ಹೆಚ್ಚಳ ವಲ್ಲ. ಅಂದರೆ ಸದ್ಯದಲ್ಲೇ ಸಾಮರ್ಥ್ಯ ಹೆಚ್ಚಿಸಲು ಹೆಚ್ಚಿನ ಬಂಡವಾಳ ತೊಡಗಿಸುವಿಕೆ ಬೇಕಾಗುತ್ತದೆ.

★ಒಟ್ಟು ಕೊರತೆ ಸರಾಸರಿ ಒಟ್ಟಾರೆ ಉತ್ಪನ್ನದ ಶೇಕಡಾ 2 ರಷ್ಟಿದ್ದು ರೆವಿನ್ಯೂ ಕೊರತೆ ಒಟ್ಟಾರೆ ಉತ್ಪನ್ನದ ಶೇಕಡಾ 3 ರಷ್ಟು ಆಗುವಷ್ಟು ವಿಪರೀತ ಏರುತ್ತಿದೆ. ರೆವಿನ್ಯೂ ಖರ್ಚು ಆದಾಯ ಮೂಲಗಳಿಗಿಂತ ಹೆಚ್ಚಿನ ದರದಲ್ಲಿ ಏರುತ್ತಿದ್ದು. ಹೆಚ್ಚು ಹೆಚ್ಚು ಸಾಲದ ಮೇಲೆ ಅವಲಂಬಿತವಾಗಿದೆ. ರೆವಿನ್ಯೂ ಕೊರತೆ 10,801 ಕೋಟಿ ರೂ.ದಿಂದ (1980-81ರಲ್ಲಿ) 73,182 ಕೋಟಿ ರೂ.ಗೆ (1989-90ರಲ್ಲಿ) ಏರಿದೆ.

★ ಸಾಲದ ಮೇಲೆ ಬಡ್ಡಿ ಪಾವತಿ 1980-81 ರಲ್ಲಿ, ಒಟ್ಟು ಖರ್ಚಿನ ಶೇಕಡಾ 11.6 ರಿಂದ 1989-90ರಲ್ಲಿ, ಶೇಕಡಾ 19.2 ಕ್ಕೇರಿದೆ. ಒಟ್ಟಾರೆ ಬಡ್ಡಿ ಪಾವತಿ (ತೆರಬೇಕಾದ ಬಡ್ಡಿಯಿಂದ ಬರಬೇಕಾದ ಬಡ್ಡಿ ಕಳೆದಾಗ ಸಿಗುವ ಮೊತ್ತ) 1980-81ರಲ್ಲಿ, ಶೇಕಡಾ 3.6ರಿಂದ ಶೇಕಡಾ 10.1 ಕ್ಕೇರಿದೆ.

★ ಆರ್ಥಿಕತೆ ಅಂತರಿಕ ಸಾಲ ಕೂಪದಲ್ಲಿ ಸಿಕ್ಕಿಹಾಕಿಕೊಂಡಿದೆ. ಅಂತರಿಕ ಸಾಲ 30,864 ಕೋಟಿ ರೂ. ದಿಂದ (1980-81ರಲ್ಲಿ) 1,29,856ಕೋಟಿ ರೂ.ಗೆ (1989-90)ಕ್ಕೇರಿದೆ. ಬಡ್ಡಿ ಮರುಪಾವತಿ 2253 ಕೋಟಿ ರೂ ದಿಂದ (1980-81ರಲ್ಲಿ) 15,674 ಕೋಟಿ ರೂ.ಗೆ (1989-90ರಲ್ಲಿ) ಕ್ಕೇರಿದೆ.

★ ಆರ್ಥಿಕತೆ ವಿದೇಶಿ ಸಾಲ ಕೂಪದಲ್ಲಿ ಸಿಕ್ಕಿ ಹಾಕಿಕೊಡಿದೆ. ವಿದೇಶಿ ಸಾಲ 18,400 ಕೋಟಿಯಿಂದ (1980-81ರಲ್ಲಿ) 68,831ಕೋಟಿಗೆ (1988-89) ಏರಿದೆ. ಸಾಲ ಮರುಪಾವತಿ 11,000ಕೋಟಿ ರೂ.ನಿಂದ (1980-81ರಲ್ಲಿ) 70,000 ಕೋಟಿ ರೂ.ಗೆ (1988-89ರಲ್ಲಿ) ಏರಿದೆ.

ಇಂತಹ ದುಸ್ಥಿತಿಯ ನಿಜ ಚಿತ್ರಣ ನೀಡುವ ಸಮಿತಿ ಈಗಿನ ಪರಿಸ್ಥಿತಿಯ ಗಂಭೀರತೆ ಮತ್ತು ಇದರಿಂದ ಹೊರ ಬರುವ ವಿಧಾನಗಳ ಬಗ್ಗೆ ಏನಾದರೂ ಸಲಹೆಗಳನ್ನು ನೀಡಿದಯೇ? ಇದರ ಬಗ್ಗೆ ವರದಿ ಚರ್ಚಿಸಿದರೂ ಈ ಬಗ್ಗೆ ವರದಿ ನಿರಾಶಾದಾಯಕವಾಗಿದೆ.

## ಪರಿಸ್ಥಿತಿಯ ಗಂಭೀರತೆ ಬಗ್ಗೆ ನಿರ್ಲಕ್ಷ್ಯ

ವಿದೇಶಿ ಸಾಲದ ಮೊತ್ತ ದೊಡ್ಡದಿದ್ದರೂ ಒಟ್ಟು ಉತ್ಪಾದನೆಯ ಶೇಕಡಾವಾರಾಗಿ ಸುಮಾರು 17. ಸಾಲದ ಕೂಪಕ್ಕೆ ಸಿಕ್ಕಿದ ದೇಶಗಳಷ್ಟು ನಮ್ಮ ಸಾಲದ ಪರಿಸ್ಥಿತಿ ತೀವ್ರವಾಗಿಲ್ಲ. ಅಲ್ಲಿ ಈ ಶೇಕಡಾ 60 ರಷ್ಟಿದ್ದರೆ, ಭಾರತದಲ್ಲಿ ಶೇಕಡಾ 20 ಇದೆ. 80 ದಶಕದಲ್ಲಿ ಸಾಲ ಏರಿದ ರೀತಿಯನ್ನು ಪರಿಶೀಲಿಸಿದರೆ, ಈಗಿನ ನೀತಿ ಮುಂದುವರಿದರೆ ಆ ಮಟ್ಟವನ್ನು ಮುಟ್ಟುವ ದಿನ ದೂರವಿಲ್ಲ ಎಂದು ಕಂಡು ಬರುತ್ತದೆ.

### ಆದರೆ ವರದಿ ತನ್ನ ಪರಿಹಾರಗಳನ್ನು ಯಾವ ಆಧಾರದ ಮೇಲೆ ಸಲಹೆ ಮಾಡುತ್ತದೆ?

ಈಗಿನ ಒಟ್ಟಾರೆ ಉತ್ಪಾದನೆಯ ಶೇಕಡಾವಾರು ತೆರಿಗೆಯ ಆಧಾರದ ಮೇಲೆ ಆರ್ಥಿಕ ಮತ್ತು ವಿದೇಶೀ ಸಾಲದ ಪರಿಸ್ಥಿತಿ ಇನ್ನೂ ದುರ್ಭರವಾಗದಿರಬೇಕಾದರೆ ಈಗಿನ ಬೆಳವಣಿಗೆಯ ದರ ಇಟ್ಟುಕೊಳ್ಳುವುದು ಕಷ್ಟ. ಬೆಳವಣಿಗೆಯ ದರ ಕಡಿಮೆಯಾಗುತ್ತದೆ.

★ ಸರ್ಕಾರದ ಖರ್ಚು ಮತ್ತು ಹಣ ತೊಡಗಿಸುವ ರೀತಿಯಿಂದ ಉಂಟಾದ ಆದಾಯ ವ್ಯತ್ಯಾಸದಿಂದಾಗಿ, ಆಮದಿನ ಮೇಲೆ ಅವಲಂಬಿಸದ ಶ್ರಮ-ಪ್ರಧಾನ ಸರಕುಗಳಿಗೆ ಮಾರುಕಟ್ಟೆ ಇಲ್ಲ.

★ ಬೆಳವಣಿಗೆಯ ದರದಲ್ಲಿ ಕಡಿತ, ಸರ್ಕಾರದ ಖರ್ಚು ಮತ್ತು ಹಣ ತೊಡಗಿಸುವ ಮಾದರಿಯಲ್ಲಿ, ಮತ್ತು ಇನ್ನೂ ಹೆಚ್ಚಿನ ರಫ್ತು ಪ್ರಯತ್ನದಿಂದ ಈಗಿನ ಆರ್ಥಿಕ ದುಸ್ಥಿತಿಯಿಂದ ಹೊರಬರಲು ಸಾಧ್ಯ.

ಈ ಮೇಲಿನ ಆಧಾರದ ಮೇಲೆ ಸಮಿತಿ, ಸಮೀಪ ಮತ್ತು ಮಧ್ಯಮ ಅವಧಿಯ ಕಾರ್ಯವಿಧಾನ ರೂಪಿಸಲು ಸಲಹೆ ಮಾಡಿದೆ.

ಕೃಷಿ ರಂಗಕ್ಕೆ ಸಂಪನ್ಮೂಲಗಳನ್ನು ಒದಗಿಸುವುದು ಮಧ್ಯಮ ಅವಧಿಯ ವರದಿ ಸಲಹೆ ಮಾಡಿದ ಕಾರ್ಯವಿಧಾನಗಳಲ್ಲಿ ಪ್ರಮುಖವಾದದ್ದು. ಇದರಿಂದ ಬೆಳವಣಿಗೆಯ ವೈಷಮ್ಯತೆಯಲ್ಲಿ ಕಡಿತ, ಉದ್ಯೋಗದಲ್ಲಿ ಹೆಚ್ಚಳ, ಆಮದು ಆಧರಿಸದ ಶ್ರಮ ಪ್ರಧಾನ ಸರಕುಗಳಿಗೆ ಬೇಡಿಕೆ ಹೆಚ್ಚಿ ಆರ್ಥಿಕ ಸ್ಥಿತಿ ಸುಧಾರಿಸುವುದು ಎಂದು ಈ ಸಲಹೆಯ ಅಭಿಪ್ರಾಯ. ಸಮೀಪ ಅವಧಿಗಾಗಿ ಬೆಳವಣಿಗೆಗೆ ಸಂಬಂಧ ಪಡದ ಖರ್ಚಿನಲ್ಲಿ ಕಡಿತ, ರಕ್ಷಣಾ ವೆಚ್ಚ ಕಡಿತ ಸಬ್ಸಿಡಿಯ ಹೆಚ್ಚಳದ ಮೇಲೆ ನಿಯಂತ್ರಣ, ತೆರಿಗೆ ವಸೂಲಿಯಲ್ಲಿ ಮುತುವರ್ಜಿ ಈ ಕ್ರಮಗಳನ್ನು ಸಮಿತಿ ಸಲಹೆ ಮಾಡಿದೆ.

ಇವೆರಡೂ ಸಲಹೆಗಳು ಆರ್ಥಿಕ ಬಿಕ್ಕಟ್ಟು ಮತ್ತು ಸಮತೋಲನದ ಸಮಸ್ಯೆಯನ್ನು ಬಗೆಹರಿಸುವುದಿಲ್ಲ. ಇದು ಸಾಲದೆ, ಆಮದಿನಲ್ಲಿ ನಿಯಂತ್ರಣ, ಕಡಿತ ಬೇಕಾಗಬಹುದು ಎಂದು ವರದಿ ಸಹ ಒಪ್ಪಿಕೊಂಡಿದೆ.

ಹಾಗಾದರೆ ನಿಜವಾದ ಪರಿಹಾರ ಏನು?

## ಕಟು ಕ್ರಮಗಳು

ಈಗಿನ ಆರ್ಥಿಕ ದುಸ್ಥಿತಿಯಲ್ಲಿ ಈವೊಂದು ಕ್ರಮಗಳು ಕೆಲಸ ಮಾಡಲಾರವು. ಕಡು ಕ್ರಮಗಳ ಅಗತ್ಯವಿದೆ.

ಅನಗತ್ಯ ಆಮದುಗಳ ಕಡಿತ (ನೇರವಾಗಿ ಮತ್ತು ಆಮದು ಕರಗಳ ಮೂಲಕ) ತೆರಿಗೆಗಳ ಮೂಲಕ ಹೆಚ್ಚಿನ ಸಂಪನ್ಮೂಲ ಕ್ರೋಢೀಕರಣ ತುರ್ತಿನ ಕ್ರಮಗಳು. ಆಮದು ನಿಯಂತ್ರಣ, ಮತ್ತು ಸ್ಥಳೀಯ ಉತ್ಪಾದನೆಯ ಮೇಲೆ ನಿಯಂತ್ರಣದ ಮೂಲಕ ದುಬಾರಿ ಬಳಕೆ ವಸ್ತುಗಳ ಉತ್ಪಾದನೆಯ ಮೇಲೆ ನಿಯಂತ್ರಣದಿಂದ ಉಳಿದ ಅಗತ್ಯ ವಸ್ತುಗಳಿಗೆ ಬೇಕಾದ ಸಂಪನ್ಮೂಲಗಳನ್ನು ಒದಗಿಸುವುದು ಸಾಧ್ಯವಾಗುತ್ತದೆ.

ಸಮಿತಿ ಸಲಹೆ ಮಾಡುವ ಹಣ ಹೂಡುವಿಕೆಯಲ್ಲಿ, ಹೆಚ್ಚಳದ ಬದಲು ಬೇರೆ ರಂಗಗಳ ಮಧ್ಯ ಪುನರ್ವಿಂಗಡಣೆ, ತೆರಿಗೆಗಳ ಮೂಲಕ ಸಾರ್ವಜನಿಕ ವ್ಯಯದಲ್ಲಿ, ಹೆಚ್ಚಳದ ಬದಲು ಕಡಿತ, ಆಮದಿನ ಮೇಲೆ ನಿಯಂತ್ರಣಕ್ಕಿಂತ ರಫ್ತಿನಲ್ಲಿ ಹೆಚ್ಚಳ, ಬೆಳವಣಿಗೆಯ ದರದಲ್ಲಿ ಕಡಿತ ಈ ಕ್ರಮಗಳು ಹಿಂದಿನ ಸರ್ಕಾರ ಅನುಸರಿಸಿದ್ದ ಉದಾರ ಆರ್ಥಿಕ ನೀತಿಗಿಂತ ಬಹಳ ಬೇರೆಯದ್ದೇನಲ್ಲ. ಕೃಷಿಗೆ ಹೆಚ್ಚಿನ ವಿನಿಯೋಗ ಮತ್ತು ಆಮದಿನ ಮೇಲೆ ಕೆಲವು ನಿರ್ಬಂಧಗಳಷ್ಟೇ ಹೊಸಕ್ರಮಗಳು.ಈ ಕ್ರಮಗಳು ಅಷ್ಟಕ್ಕೆ ಇಂದಿನ ಆರ್ಥಿಕ ದುಸ್ಥಿತಿಗೆ ಉತ್ತರವಾಗಲಾರವು.

ಯೋಜಿತ ಬೆಳವಣಿಗೆಗೆ ಸಂಪನ್ಮೂಲ ಒದಗಿಸಲು ನಾಲ್ಕು ಮೂಲಗಳಿವೆ ಬಜೆಟ್‌ನಲ್ಲಿ ಹೆಚ್ಚುವರಿ, ಸಾರ್ವಜನಿಕ ಘಟಕದ ಲಾಭ, ಸಾಲ, ಕೊರತೆ. ಇದರಲ್ಲಿ ಮೊದಲ ಎರಡು ಕ್ರಮಗಳಿಂದ ಹಣ ಒದಗಿಸುವ ವಿಧಾನವನ್ನು ಹೆಚ್ಚು ಕಡಿಮೆ ನಿಲ್ಲಿಸಲಾಗಿದೆ. ಅದನ್ನು ಪುನರಾರಂಭಿಸಬೇಕು. ಒಂದು ಕೊನೆಯ ಎರಡು ಕ್ರಮಗಳ ಮೇಲೆ ಅವಲಂಬಿಸುವುದು ನಿಲ್ಲಬೇಕು.

ಗಳು. ಆಮದು ನಿಯಂತ್ರಣ, ಸ್ಥಳೀಯ ಉತ್ಪಾದನೆಯ ನಿಯಂತ್ರಣದ ಮೂಲಕ ದುಬಾ ವಸ್ತುಗಳ ಉತ್ಪಾದನೆಯ ನಿಯಂತ್ರಣದಿಂದ ಉಳಿದ ಅಗ ಗಳಿಗೆ ಬೇಕಾದ ಸಂಪನ್ಮೂ ಒದಗಿಸುವುದು ಸಾಧ್ಯವಾಗುತ್ತದೆ.
ಸಮಿತಿ ಸಲಹೆ ಮಾಡುವ ಹೂಡುವಿಕೆಯಲ್ಲಿ, ಹೆಚ್ಚಳದ ಬೇರೆ ರಂಗಗಳ ಮಧ್ಯ ಪುನರ್ವಿ ತೆರಿಗೆಗಳ ಮೂಲಕ ಸಾರ್ವಜನಿಕ ದಲ್ಲಿ, ಹೆಚ್ಚಳದ ಬದಲು ಕಡಿತ ದಿನ ಮೇಲೆ ನಿಯಂತ್ರಣಕ್ಕಿಂತ ಹೆಚ್ಚಳ, ಬೆಳವಣಿಗೆಯ ದರದಲ್ಲಿ ಈ ಕ್ರಮಗಳು ಹಿಂದಿನ ಸರ್ಕಾ

ಸರಿಸಿದ್ದ ಉದಾರ ಆರ್ಥಿಕ ಬಹಳ ಬೇರೆಯದ್ದೇನಲ್ಲ. ಕೃಷಿಗೆ ವಿನಿಯೋಗ ಮತ್ತು ಆಮದಿನ ಕೆಲವು ನಿರ್ಬಂಧಗಳಷ್ಟೇ ಗಳು.ಈ ಕ್ರಮಗಳು ಅಷ್ಟಕ್ಕೆ ಆರ್ಥಿಕ ದುಸ್ಥಿತಿಗೆ ಉತ್ತರವಾಗಲಾ
ಯೋಜಿತ ಬೆಳವಣಿಗೆಗೆ ಸ ಒದಗಿಸಲು ನಾಲ್ಕು ಮ ಬಜೆಟ್‌ನಲ್ಲಿ ಹೆಚ್ಚುವರಿ, ಸಾ ಘಟಕದ ಲಾಭ, ಸಾಲ, ಕೊರತೆ. ಮೊದಲ ಎರಡು ಕ್ರಮಗಳಿಂದ ಒದಗಿಸುವ ವಿಧಾನವನ್ನು ಹೆಚ್ಚು ನಿಲ್ಲಿಸಲಾಗಿದೆ. ಅದನ್ನು ಪುನ ಬೇಕು. ಒಂದು ಕೊನೆಯ ಕ್ರಮಗಳ ಮೇಲೆ ಅವಲಂ ನಿಲ್ಲಬೇಕು.

'ಐಕ್ಯರಂಗ'
ಪ್ರಸಾರ ಹೆಚ್ಚಿ



# ಸಮರ್ಪಕ ನೀರಾವರಿ ಸೌಲಭ್ಯಕ್ಕೆ ಪ್ರಾಂತ ರೈತ ಸಂಘ ಒತ್ತಾಯ

ತುಂಗಭದ್ರಾ ಎಡದಂಡೆ ಕಾಲುವೆ ನೀರಿನ ವಿತರಣೆಯ ಪ್ರಶ್ನೆಯನ್ನುಕುರಿತು ಅಧ್ಯಯನ ಮಾಡಲು ರಾಜ್ಯ ಸರ್ಕಾರ ತಜ್ಞರ ಸಮಿತಿ, ರೈತ ಪ್ರತಿನಿಧಿ ಗಳನ್ನೊಳಗೊಂಡು ಸಮಿತಿಯೊಂದನ್ನು ರಚಿಸುವ ತೀರ್ಮಾನ ಮಾಡಿರುವುದನ್ನು ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸ್ವಾಗತಿಸಿದೆ.

ಈ ಹಿನ್ನೆಲೆಯಿಲ್ಲಿ ಕೆಲವು ಪ್ರಮುಖ ವಿಷಯುಗಳ ಕುರಿತು ಸಚಿವರ ಗಮನಕ್ಕೆ ತರಲು ರೈತ ಸಂಘ ಬಯಸಿದೆ.

ಜಿಲ್ಲೆಯ ಗಂಗಾವತಿ, ಸಿಂಧನೂರು ಮಾನ್ವಿ, ರಾಯಚೂರು, ದೇವದುರ್ಗಾ, ಲಿಂಗಸುಗೂರು, ಕುಷ್ಟಗಿ,ಯಲಬುರ್ಗಾ, ಕೊಪ್ಪಳ, ತಾಲ್ಲೂಕಿನ ನೀರಾವರಿ ವ್ಯವಸಾಯ ಟಿ.ಬಿ.ಸಿಯ ಮೇಲೆ ಅವಲಂಬಿನೆಯಾಗಿದೆ. 100 ಅಕ್ಕಿ ಗಿರಣಿಗಳು, 30 ಸಾವಿರ ಕಾರ್ಮಿಕ ಕುಟುಂಬಗಳು ಉದ್ಯೋಗ ಅವಲಂಬಿಗಳಾಗಿದ್ದಾರೆ.

ನೀರಿನ ವಿತರಣೆಯಲ್ಲಿ ಅಸಮರ್ಪಕತೆ, ತಾರತಮ್ಯದಿಂದ ರೈತರಲ್ಲಿ ಅಧಿಕಾರಿಗಳ ಕುರಿತು ಅಸಮಾಧಾನ. ಅವಿಶ್ವಾಸ ಮೂಡಿ ಹಲವು ಬಾರಿ ಘರ್ಷಣೆಗಳು ಸಂಭವಿಸಿವೆ. ಕವಳೆ ಬೆಳೆಗಾರರ ಕುರಿತು ಎದ್ದಿರುವ ಕೆಲವು ಸಂದೇಹಗಳನ್ನು ಬಗೆಹರಿಸಿ ದಕ್ಷತೆಯಿಂದ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುವ ಅಧಿಕಾರಿಗಳನ್ನು ನೇಮಿಸಲು ರೈತಸಂಘ ವಿನಂತಿಸುತ್ತದೆ. ಆಯಾ ಸಮಯಕ್ಕೆ ದೊರಕುವ ನೀರಿನ ಕುರಿತು ಸ್ಪಷ್ಟನೆ, ಗೇಜ್ ಪ್ಲೇಟ್ ಸರಿಪಡಿಸುವುದು ಮುಖ್ಯ ಕಾಲುವೆಯಿಂದ ಉಪ ಕಾಲುವೆಗಳಿಗೆ ಕ್ರಮಬದ್ಧವಾಗಿ ನೀರು ಬಿಡುವ ಏರ್ಪಾಡು ಮಾಡುವುದು.

ಈ ಸಮಿತಿಗೆ ತಜ್ಞರ ಜೊತೆಗೆ ಜಿಲ್ಲೆಯ ಸಂಸತ್ ಸದಸ್ಯರು, ಶಾಸಕರು, ಜಿಲ್ಲಾ ಪರಿಷತ್ ಸದಸ್ಯರು ರೈತ ಸಂಘಗಳ ಪ್ರತಿನಿಧಿಗಳನ್ನು ಒಳಗೊಳಬೇಕೆಂದು ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾ|| ಪಿ. ರಾಮಚಂದ್ರರಾವ್ ಪ್ರ. ಕಾರ್ಯದರ್ಶಿ ಕಾ|| ಚಂದ್ರಶೇಖರ ಬಾಳೆಯವರು ಒತ್ತಾಯಿಸಿದ್ದಾರೆ.

## ಇ.ಎಂ.ಎಸ್. ಪ್ರಶ್ನೋತ್ತರ

ಇ.ಎಂ.ಎಸ್. ಕರ್ನಾಟಕದ ಓದುಗರ ಪ್ರಶ್ನೆಗಳಿಗೆ ಸಿ.ಪಿ.ಐ. (ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ.ಎಸ್. ನಂಬೂದರಿಪಾಡ್ ಉತ್ತರಿಸುವರೆಂದು ಈ ಹಿಂದೆ ಪ್ರಕಟಸಿದ್ದೆವು. ಪತ್ರಿಕೆಯ ಅನಿಯಮಿತತೆಯಿಂದಾಗಿ ಇದು ಜಾರಿಗೆ ಬರಲಿಲ್ಲ. ಈಗ ಅದನ್ನು ಮತ್ತೆ ಆರಂಭಿಸಲಿದ್ದೇವೆ. ಓದುಗರು ತಮ್ಮ ಪ್ರಶ್ನೆಗಳನ್ನು 'ಐಕ್ಯರಂಗ'ಕ್ಕೆ ಕಳುಹಿಸಬೇಕಾಗಿ ಕೋರುತ್ತೇವೆ.

# ಎ.ಸಿ.ಸಿ. ಬ್ಯಾಬ್ ಕಾಕ್ ಪುನರುಜ್ಜೀವನ ಕ್ರಮವನ್ನು ಪೂರ್ಣವಾಗಿ ಜಾರಿಗೊಳಿಸಲು ಒತ್ತಾಯ

ಎ.ಬಿ.ಎಲ್. ಮತ್ತು ಬ್ಯಾಬ್‌ಕೋಕ್‌ನ ಘಟಕಗಳು 1986 ರಲ್ಲಿ ಕೆಲಸ ನಿಲ್ಲಿಸಿ ಮತ್ತೆ ಜೂನ್ 1988 ರಲ್ಲಿ ಪುನರಾರಂಭವಾಗುವಾಗ ಕೇಂದ್ರಸರ್ಕಾ ಮತ್ತು ಹಣಕಾಸು ಸಂಸ್ಥೆಗಳು ಅದನ್ನು ಪುನರುಜ್ಜೀವನಗೊಳಿಸುವ ಯೋಜನೆಯನ್ನು ರೂಪಿಸಿದ್ದರು. ಇದರ ಪ್ರಕಾರ 1989 ರ ಅಂತ್ಯದೊಳಗೆ 1200 ಮೆಗಾವಾಟ್ ಹಾಗೂ ನಂತರ ಪ್ರತಿವರ್ಷ 400 ಮೆಗಾವಾಟ್ ಆರ್ಡರ್‌ಗಳನ್ನು ಒದಗಿಸುವುದಾಗಿ ಹೇಳಲಾಗಿತ್ತು. ಆದರೆ ಸರಕಾರ ಇದುವರೆಗೆ ತನ್ನ ಈ ಭರವಸೆ ಪಾಲಿಸಿಲ್ಲ. ಕೇವಲ 400 ಮೆಗಾವಾಟ್ ಆರ್ಡರ್ ದೊರೆತಿದೆ. ಇದು ಈ ಉದ್ದಿಮೆಯನ್ನು ಪುನರುಜ್ಜೀವನಗೊಳಿಸುವ ಕ್ರಮಗಳನ್ನು ನಿಷ್ಫಲಗೊಳಿಸುತ್ತವೆಯೆಂದು ಎಂ.ಬಿ.ಎಲ್. ಮತ್ತು ಬ್ಯಾಬ್‌ಕಾಕ್ ಸಂಘಗಳ (ಸಿ.ಪಿ.ಐ.ಯು) ಸಂಯೋಜಕ ಸಮಿತಿಯ ನಿಯೋಗವೊಂದು ಕೇಂದ್ರ ವಿದ್ಯುತ್ ಮಂತ್ರಿ ಆರಿಫ್ ಮಹ್ಮದ್ ಖಾನ್‌ರನ್ನು ಭೇಟಿಯಾಗಿ ತಿಳಿಸಿದೆ. ಕಾಂ.ಎಂ.ಘಂದೆ ನೇತೃತ್ವದ ಈ ನಿಯೋಗದಲ್ಲಿ ಸಿ.ಐ.ಟಿ.ಯು. ಉಪಾಧ್ಯಕ್ಷ ಕಾಂ. ಮಹ್ಮದ್ ಇಸ್ಮಾಯಿಲ್ ಅವರಲ್ಲದೆ ಶಹಾಬಾದ್, ದುರ್ಗಾಪುರ ಹಾಗೂ ಕಲ್ಕತ್ತಾ ಘಟಕಗಳನ್ನು ಪ್ರತಿನಿಧಿಸಿದ ಕಾಂ.ಎ.ಬಿ.ಕನಾರ್.ಎ.ಬಿ.ದಾಸ್. ಬಿ.ಪಿ. ಚಕ್ರವರ್ತಿ, ಎ.ಕೆ. ಭಟ್ಟಾಚಾರ್ಜಿ, ಬಿ. ಭಟ್ಟಾ ಚಾರ್ಜಿ, ಬಿ. ಬ್ಯಾನರ್ಜಿ ಹಾಗೂ ಶಾಂತಕುಮಾರ್ ಇವರುಗಳಿದ್ದರು.

,ದೇಶದ ಒಳಿತಿಗಾಗಿ ಈ ಕಂಪನಿಯನ್ನು ರಾಷ್ಟ್ರೀಕರಿಸಬೇಕೆಂದು ನಿಯೋಗ ಮಂತ್ರಿಗಳನ್ನು ಒತ್ತಾಯಿಸಿತು.

ನಿಯೋಗ ಎ.ಸಿ.ಸಿ. ಬ್ಯಾಬ್‌ಕೋಕ್‌ನ ಅಧ್ಯಕ್ಷರನ್ನು ಭೇಟಿಯಾಗಿ ಪುನರುಜ್ಜೀವನ ಕ್ರಮಗಳನ್ನು ಜ್ಯಾರಿಗೊಳಿಸಲು. ಸರ್ಕಾರ ದೀರ್ಘಕಾಲದ ದೂರುಗಳನ್ನು ಪರಿಹರಿಸಲು. ಮೂಲಕ ಕಂಪನಿಯಲ್ಲಿ ಸಹಕಾರ, ಸಾಮರಸ್ಯ ವಾತಾವರಣ ನಿರ್ಮಿಸಬೇಕೆಂದು ಒತ್ತಾಯಿಸಿತು.

# ಬೀಡಿ ಕಾರ್ಮಿಕರ ಸಮಾವೇಶ

ಬೀಡಿ ಕೈಗಾರಿಕೆಯಲ್ಲಿ ಸ್ಥಗಿತವಾಗಲು ರಾಜ್ಯ ಸರ್ಕಾರದ ಆರ್ಥಿಕ ಧೋರಣೆಯೇ ಕಾರಣ ಇದನ್ನು ಕಾರ್ಮಿಕ ವರ್ಗ ದಿಟ್ಟವಾಗಿ ಎದುರಿಸಿ ಹೋರಾಡಲು ಸಿದ್ಧರಾಗಬೇಕೆಂದು ದ.ಕ. ಜಿಲ್ಲಾ ಬೀಡಿ ಫೆಡರೇಷನ್ ಕಾರ್ಯದರ್ಶಿ ಕಾ|| ಯು.ಬಿ. ಲೋಕಯ್ಯನವರು ಬೀಡಿ ಕಾರ್ಮಿಕರಿಗೆ ಕರೆ ನೀಡಿದರು. ಅವರು ಜನವರಿ 18 ರಂದು ವಾಮಂಜೂರು, ಮಳಲಿ, ಕಪ್ಪೆಪದವು ಪ್ರದೇಶಗಳ ಸುಮಾರು 250 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಫೆಬ್ರವರಿ 2 ರಂದು ಜಿಲ್ಲೆಯ ಬೀಡಿ ಮಜೂರರ ಪ್ರದರ್ಶನ ಯಶಸ್ವಿಗೊಳಿಸಲು ಕರೆ ನೀಡಿದರು. ಮಂಗಳೂರು ಕಾರ್ಯದರ್ಶಿ ಜೆ. ವೀರಪ್ಪ ಕುಪ್ಪೆ ಪದವು ಕಾರ್ಯದರ್ಶಿ ವಾಸುದೇವ ಆಚಾರಿಯವರು ಮಾತನಾಡಿ ಕಾರ್ಮಿಕರ ಸೌಲತ್ತುಗಳನ್ನು ಕಸಿದುಕೊಳ್ಳುವ ಕಾನೂನುಗಳನ್ನು ಸೋಲಿಸಲು ಜಾಗೃತರಾಗಿರೆಂದು ವಿನಂತಿಸಿದರು. ಸದಾಶಿವದಾಸ್, ಗಂಗಯ್ಯ ಅಮೀನ್, ಹೊನ್ನಯ್ಯ ಸಭೆಯಲ್ಲಿ ಮಾತನಾಡಿದರು.

## ಬಂಟ್ವಾಳ

ಬೀಡಿ ಕಾರ್ಮಿಕರಿಗೆ ಕೆಲಸ ಕಡಿತಗೊಳಿಸಿ ಅರೆ ಉಪವಾಸ ಬೀಳುವ ಪರಿಸ್ಥಿತಿ ನಿರ್ಮಾಣ ಮಾಡಿರುವ ಬೀಡಿ ಮಾಲೀಕರ ವಿರುದ್ಧ ರಾಜ್ಯ ಸರ್ಕಾರ ಮಧ್ಯ ಪ್ರವೇಶ ಮಾಡಿ ಕಾರ್ಮಿಕರ ಹಿತ ಕಾಪಾಡಬೇಕೆಂದು ಬಂಟ್ವಾಳ ತಾಲೋಕು ಬೀಡಿ ಕೆಲಸ ಕೆಲಸಗಾರರ ಸಂಘ ಒತ್ತಾಯಿಸಿದೆ. ಕೆಲಸವಿಲ್ಲದ ದಿನ.ಪರಿಹಾರವನ್ನು ಒದಗಿಸಬೇಕೆಂದು ತನ್ನ ತಂತಿ ಸಂದೇಶದಲ್ಲಿ ಅದು ಒತ್ತಾಯಿಸಿದೆ.ಪಾಣೆ ಮಂಗಳೂರು ಫಿರ್ಕಾ ಬೀಡಿ ಯೂನಿಯನ್ ಕಾರ್ಯದರ್ಶಿ ಕಾ|| ಬಿ. ನಾರಾಯಣರವರು ಸಹ ತಂತಿ ಸಂದೇಶ ಕಳುಹಿಸಿ ಆ ದಿನದ ಕೆಲಸಕ್ಕೆ ಒತ್ತಾಯಿಸಿದ್ದಾರೆ.

# ಬೀಡಿ ಕಾರ್ಮಿಕ ಮುಷ್ಕರ ಅಂತ್ಯ

ಧಾರವಾಡ ಕುಮಾರ ಬೀಡಿ ಕಾರ್ಮಿಕರು ಸಿ.ಐ.ಟಿ.ಯು ನೇತೃತ್ವದಲ್ಲಿ ಸಂಘಟಿತರಾಗಿ ತಮ್ಮ ನ್ಯಾಯಸಮ್ಮತ ಸೌಲಭ್ಯಗಳನ್ನು ನೀಡಬೇಕೆಂದು ಆಡಳಿತ ವರ್ಗವನ್ನು ಒತ್ತಾಯಿಸಿದ ಕಾರಣ ನೀಡಿ ಕೆಲಸ ಸ್ಥಗಿತ ಗೊಳಿಸಿದ ಆಡಳಿತ ವರ್ಗದ ನೀತಿಯನ್ನು ಪ್ರತಿಭಟಿಸಿ ಡಿಸಂಬರ್ 16 ರಿಂದ ಹೋರಾಟದಲ್ಲಿದ್ದ ಕಾರ್ಮಿಕರನ್ನು ಜನವರಿ 6 ರಂದು ಧಾರವಾಡ ಉಪನಗರದ ಪೋಲೀಸ್ ಠಾಣೆಗೆ ಅಧಿಕಾರಿ ಮಾತುಕತೆಗೆ ಕರೆಸಿ ಮಾತುಕತೆ ನಡೆಯಿತು! ಈ ಪ್ರಕಾರವಾಗಿ 4 ಸಾವಿರ ರೂ ಪರಿಹಾರವನ್ನು ಕಂತುಗಳಲ್ಲಿ ಎಲ್ಲಾ ಕಾರ್ಮಿಕರಿಗೆ ಹಂಚುವುದಾಗಿ ಹಾಗೂ ಇತರೆ ಸೌಲಭ್ಯ ಕುರಿತು ಮತ್ತೊಂದು ಸುತ್ತಿನ ಮಾತುಕತೆ ನಡೆಸುವುದಾಗಿ ಆಡಳಿತ ವರ್ಗ ಆಶ್ವಾಸನೆ ನೀಡಿದ್ದರಿಂದ ಮುಷ್ಕರ ಹಿಂತೆಗೆದು ಕೊಳ್ಳಲಾಯಿತು.ಸಿ.ಐ.ಟಿ.ಯ. ರಾಜ್ಯಕಾರ್ಯದರ್ಶಿಗಳಲೊಬ್ಬರಾದ ಕಾ||ಎಂ.ಬಿ. ಕಟ್ಟಿಯವರು ಈ ಹೋರಾಟದ ನೇತೃತ್ವ ವಹಿಸಿದ್ದರು.

# ಎಸ್.ಎಫ್.ಐ. ಮಂಗಳೂರು ತಾ|| ಸಮ್ಮೇಳನ

ದೇಶದ ಜನತೆ ಜನವಿರೋಧಿ ಕಾಂಗ್ರೆ ರ್ಕಾರವನ್ನು ಕಿತ್ತೆಸೆದು ರಾಷ್ಟ್ರೀಯ ರಂಗ ರ್ಕಾರವೊಂದನ್ನು ತಂದಿದೆ. ಇದರಲ್ಲಿ ದ್ಯಾರ್ಥಿ ಯುವ ಜನರ ಪಾತ್ರ ಕೂಡ ಮನಾರ್ಹವಾದದ್ದು. ಜನತೆಯ ನಿರೀಕ್ಷೆ ಾಗೂ ಯುವ ಜನತೆಯ ಜ್ವಲಂತ ಮಸ್ಯೆಗಳಾದ ನಿರುದ್ಯೋಗ, ಅನಕ್ಷರತೆ ಡತನದ ನಿವಾಹರಣೆಯತ್ತ ನೂತನ ರ್ಕಾರ ಗಮನ ಹರಿಸುವಂತೆ ಅದರ ರ್ಯಾಕರ್ಯವೈಖರಿಗಳು ಬೆಳೆದು ಬರಲು ದ್ಯಾರ್ಥಿ ಸಮುದಾಯ ಜಾಗೃತರಾಗಿ ೋರಾಡಬೇಕಾದ ಅಗತ್ಯವಿದೆ ಎಂದು ಾಸುದೇವ ಉಚ್ಚಿಲ್ ಕರೆ ನೀಡಿದರು. ವರು ಮಂಗಳೂರು ತಾಲೋಕು ್.ಎಫ್.ಐ. ಸಮ್ಮೇಳನವನ್ನು ಜನವರಿ ರಂದು ಉದ್ಘಾಟಿಸಿ ಮಾತನಾಡು ದ್ದರು.

ಸಂಘಟನೆ ಕಾರ್ಯದರ್ಶಿ ಎಸ್. ರಾಜ್‌ಕುಮಾರ್ ವರದಿ ಮಂಡಿಸಿದರು. ನೂತನ ಸಮಿತಿಗೆ ಕಾ|| ಹಂಝ ಎಂ (ಅಧ್ಯಕ್ಷ) ಕರುಣಾಕರನ್ (ಉಪಾಧ್ಯಕ್ಷ) ರಾಮ್‌ದಾಸ್ (ಕಾರ್ಯದರ್ಶಿ) ಸುರೇಶ್ (ಜೊತೆ ಕಾರ್ಯದರ್ಶಿ) ಯನ್ನೊಳಗೊಂಡ 15 ಜನರ ಕಾರ್ಯಕಾರಿಸಮಿತಿ ಆರಿಸಲಾಯಿತು.

ದ.ಕ. ಜಿಲ್ಲಾ ಸಮಿತಿ ಸಹಕಾರ್ಯದರ್ಶಿ ವಸಂತ ಆಚಾರಿಯವರು ಸಮಾರೋಪ ಭಾಷಣ ಮಾಡಿ ಪ್ರತ್ಯೇಕತಾಭಾವನೆ ಜಾತೀಯ ಭಾವನೆಯಿಂದ ಮುಕ್ತವಾದ ಪ್ರಗತಿಪರ ಪ್ರಜಾಸತ್ತಾತ್ಮಕ ಚಿಂತನೆ ಮಾಡುವ ಎಸ್.ಎಫ್.ಐ. ಸಂಘಟನೆ ಅಡಿಯಲ್ಲಿ ವಿದ್ಯಾರ್ಥಿಗಳನ್ನು ಸಂಘಟಸಲು ಮುಂದಾಗಬೇಕೆಂದು ಅವರು ಕರೆ ನೀಡಿದರು. ಆನಂದ್ ಸ್ವಾಗತಿಸಿ ರಾಮದಾಸ್ ವಂದಿಸಿದರು.

# ಯು.ಬಿ. ದಿನಕೂಲಿ ಕಾರ್ಮಿಕರು ಹೋರಾಟದಲ್ಲಿ

ಯುನೈಟೆಡ್ ಬ್ರುವರೀಸ್ ಕಾರ್ಖಾನೆಯ ಸುಮಾರು ಜನ ಕೂಲಿ ಕಾರ್ಮಿಕರು ಸಿ.ಐ.ಟಿ.ಯು. ಸಂಘ ಸ್ಥಾಪಿಸಿದರೆಂಬ ಕಾರಣಕ್ಕೆ ವಿವಿಧ ರೀತಿಯ ಕಿರುಕುಳ ನೀಡಿ ಅವರನ್ನು ಬೀದಿಪಾಲಾಗುವಂತೆ ಮಾಡಿದೆ. ಪೋಲೀಸರನ್ನು ಹಾಗೂ ನ್ಯಾಯ ಬಾಹಿರ ಕಾನೂನುಗಳನ್ನು ಬಳಸಿ. ನ್ಯಾಯಾಲಾಯಕ್ಕೆ ಹಾಜರಾಗದೇ ವಂಚಿಸಿ ಕಾರ್ಮಿಕರ ಸಂಘಟನೆಯನ್ನು ಬಗ್ಗು ಬಡಿಯುವ ಎಲ್ಲಾ ಕ್ರಮಗಳನ್ನು ನಡೆಸಿದೆ. ಕಾರ್ಖಾನೆ ಮುಂದೆ ಟೆಂಟ್ ಹಾಕಿ ಧರಣಿ ನಡೆಸಲು ಅನುಮತಿ ಸಹ ನೀಡದಂತೆ ಮಾಡಿರುವ ಯು.ಬಿ. ಆಡಳಿತ ವರ್ಗವನ್ನು ಖಂಡಿಸಲು ಹಾಗೂ ಕಾರ್ಮಿಕ ವಿರೋಧಿ ನೀತಿ. ಪೋಲೀಸರ ದಬ್ಬಾಳಿಕೆಯನ್ನು ಪ್ರತಿಭಟಿಸಿ ಹೋರಾಡಬೇಕೆಂದು ಯು.ಬಿ. ಕಾರ್ಮಿಕ ನಾಯಕ ಹಾಗೂ ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾ|| ಕೆ.ಎಸ್. ಸುಬ್ರಮಣ್ಯಂ ಕರೆ ನೀಡಿದ್ದಾರೆ.

# ವಸತಿ ಹೀನರ ಹೋರಾಟಕ್ಕೆ ಜಯ

ಬೆಳಗಾಂ ಜಿಲ್ಲೆ ರಾಮದುರ್ಗದ ವಸತಿ ರಹಿತರ ಸಂಘದ ನೇತೃತ್ವದಲ್ಲಿ ರಾಮದುರ್ಗದ ಸುಮಾರು 400 ಕುಟುಂಬಗಳಿಗೆ ಹಕ್ಕು-ಪತ್ರ , ರೇಷನ್ ಕಾರ್ಡ್, ಬೀದಿ ದೀಪ, ನೀರು ಮುಂತಾದ ನಾಗರೀಕ ಸೌಲಭ್ಯಕ್ಕೆ ಒತ್ತಾಯಿಸಿ ನಡೆದ ಸತ್ಯಾಗ್ರಹಕ್ಕೆ ಜಯ ದೊರೆತಿದೆ.

ಸಂಘದ ವತಿಯಿಂದ ನವಂಬರ್ 2ರಂದು ಬೃಹತ್ ಮೆರವಣಿಗೆಯೊಂದು ಹೊರಟು ತಹಸೀಲ್ದಾರ್ ಕಛೇರಿಗೆ ತೆರಳಿ ಡಿಸಂಬರ್ 10ರೊಳಗೆ ಎಲ್ಲಾ ನಾಗರೀಕರಿಗೂ ರೇಷನ್ ಕಾರ್ಡ್ ಹಾಗೂ ಪೌರಸೌಲಭ್ಯ ನೀಡಬೇಕೆಂದು ಒತ್ತಾಯಿಸಲಾಗಿತ್ತು. ಈ ಕುರಿತು ಯಾವುದೇ ಕ್ರಮ ಜರುಗಿಸದಿರುವುದನ್ನು ಪ್ರತಿಭಟಿಸಿ ಡಿಸಂಬರ್ 18ರಿಂದ ತಹಸೀಲ್ದಾರ್ ಕಛೇರಿ ಎದುರು ಸರದಿ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಯಿತು. ಇಡೀ ರಾಮದುರ್ಗದ ಜನರ ಗಮನ ಸೆಳೆದು ಚಳುವಳಿ ವಿಸ್ತಾರಗೊಳ್ಳಲಾರಂಭಿಸಿ-ನೂರಾರು ಜನರು ಸತ್ಯಾಗ್ರಹ ಶಿಬಿರಕ್ಕೆ ಭೇಟಿ ನೀಡುವುದರ ಮೂಲಕ ಹೋರಾಟಕ್ಕೆ ಹೊಸ ಸ್ಫೂರ್ತಿ ಉತ್ಸಾಹ ತುಂಬಿದರು.

ಸರದಿ ಉಪವಾಸ 5 ದಿನ ಪ್ರವೇಶಿಸಿದರೂ ಅಧಿಕಾರಿಗಳು ಗಮನಹರಿಸದಿರುವುದನ್ನು ಪ್ರತಿಭಟಿಸಿ ಸಂಘದ ಮುಖಂಡ ಕಾ|| ವಿ.ಪಿ.ಕುಲಕರ್ಣಿಯವರು ಅಮರಣಾಂತ ಉಪವಾಸ ಕೈಗೊಂಡರು. ಪರಿಸ್ಥಿತಿ ತಮ್ಮ ಕೈಮೀರಿ ಹೋಗುವ ಸೂಚನೆ ಅರಿತ ಅಧಿಕಾರಿಗಳು ಕೂಡಲೇ ಸತ್ಯಾಗ್ರಹ ಶಿಬಿರಕ್ಕೆ ಧಾವಸಿ ಮಾತುಕತೆ ನಡೆಸಿ ಪಡಿತರ ಕಾರ್ಡ್ ಕೂಡಲೇ ಕೊಡುವುದಾಗಿ ಒಪ್ಪಿ ಈ ಸಂಬಂಧ ಆಜ್ಞೆ ಮಾಡಿದರು. ಹಕ್ಕು ಪತ್ರ ನೀಡುವ ಕುರಿತು ಸರ್ಕಾರಕ್ಕೆ ಬರೆದಿರುವುದಾಗಿ ತಿಳಿಸಿದರು.

ಸತ್ಯಾಗ್ರಹದ ಸಂದರ್ಭದಲ್ಲಿ ರಾಮದುರ್ಗದ ಜನತೆ ತೋರಿದ ಉತ್ಸಾಹ ಭರಿತ ಬೆಂಬಲಕ್ಕೆ ಕಾ|| ಕುಲಕರ್ಣಿ ಜನತೆಯನ್ನು ಅಭಿನಂದಿಸಿದ್ದಾರೆ. ಚಳುವಳಿಯ ನೇತೃತ್ವವನ್ನು ಕಾ|| ವಿ.ಪಿ. ಕುಲಕರ್ಣಿ, ಭೀಮಪ್ಪ, ತುಕುಮಸಾಬ, ಫಕರು ಸಾಬ, ಅಲ್ಲಾಬಕ್ಷು, ಪಡೆಯಪ್ಪ ಮುಂತಾದವರು ವಹಿಸಿದ್ದರು.

# ಶೈಕ್ಷಣಿಕ ಅವ್ಯವಸ್ಥೆ ವಿರುದ್ಧ ಹೋರಾಡಲು ಎಸ್.ಎಫ್.ಐ. ನಿರ್ಧಾರ

ಚಿತ್ರದುರ್ಗ ಜಿಲ್ಲೆಯ ಶಾಲಾ-ಕಾಲೇಜುಗಳಲ್ಲಿ ಅಧ್ಯಾಪಕರ ಕೊರತೆ, ಗ್ರಂಥಾಲಯ, ಕಟ್ಟಡ, ಪೀಠೋಪಕರಣ, ವಾಚನಾಲಯ, ಐ.ಟಿ.ಐ. ವಿದ್ಯಾರ್ಥಿ ಸಮಸ್ಯೆ ಮುಂತಾದ ಬೇಡಿಕೆಗಳ ಕುರಿತು ಹೋರಾಟ ರೂಪಿಸಲು ಜನವರಿ 15ರಂದು ಚಿತ್ರದುರ್ಗದಲ್ಲಿ ನಡೆದ ಎಸ್.ಎಫ್.ಐ. ಸಭೆ ನಿರ್ಧರಿಸಿತು.

ಮೊದಲ ಹಂತವಾಗಿ ಶಿಕ್ಷಣ ಮಂತ್ರಿಗಳಿಗೆ ಜಿಲ್ಲೆಯ ಬೇಡಿಕೆಗಳಕುರಿತು ನಿಯೋಗ ... ಸಹಕಾರ್ಯದರ್ಶಿ ಕಾ|| ಎಸ್. ...ಹಿರೇಮಠ್, ದ.ಕ. ಜಿಲ್ಲಾ ಕಾರ್ಯ... ಕೃಷ್ಣಶೆಟ್ಟಿ... ಸಂಘಟನೆಯ ಕಾರ್ಯಕ್ರಮ. ಧ್ಯೇಯ ಧೋರಣೆ ಕುರಿತು ಉಪನ್ಯಾಸ ನೀಡಿದರು.

ಸಂಘಟನೆಯ ಜಿಲ್ಲಾ ಸಂಚಾಲಕ ಮರಿಯಪ್ಪ ವರದಿ ಮುಂದಿರಿಸಿದರು. ಶಿವಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಸಹಸಂಚಾಲಕ ಮಹಾಂತೇಶ್ ನಿರ್ಣಯ ಮಂಡಿಸಿದರು. ಯುವ ನಾಯಕ ಎ.ಜಿ. ಗಂಗಾಧರ, ಕಾರ್ಮಿಕ ಮುಖಂಡರಾದ ಕಾ|| ನಿತ್ಯಾನಂದ ಸ್ವಾಮಿ ಶುಭ ಕೋರಿದರು. ನೂತನ ಸಮಿತಿಗೆ ಮರಿಯಪ್ಪ (ಸಂಚಾಲಕ) ಮಹಾಂತೇಶ್, ಶಿವಪ್ರಕಾಶ್ ಸಹಸಂಚಾಲಕರಾಗಿರುವ 10 ಜನರ ಸಮಿತಿ ಆರಿಸಲಾಯಿತು.

## ಕೆಂಪುಚುಕ್ಕಿ

ಕಣ್ಣಾಗಸದ ಕನ್ನಡಿಯ ತುಂಬ
ರೆಕ್ಕೆ ಬಿಚ್ಚಿ ಹಾರಾಡಿದ
ಮುದ್ದು ಹಕ್ಕಿಯೇ
ಬಾನ ಬಣದ ನಡುವೆ
ಕೆಂಪು ಚುಕ್ಕಿಯಾಗಿ
ನಿಂತು ಬಿಟ್ಟೆಯಲ್ಲ
-ನೀಲಾ ಕೆ.

'ಖಾತ್ರಿ ಮಾಡಿಕೋ ನೀನು ಇದನ್ನು ಈ ಜಗತ್ತೇ ವಿದಾಯ ಹೇಳುವ ಮುನ್ನ: ಒಳ್ಳೆಯವನಾಗಿದ್ದರೆ ಸಾಲದು ನೀನು, ಬಿಟ್ಟು ಹೋಗು ಒಂದು ಒಳ್ಳೆ ಜಗತ್ತನ್ನು'

-ಬರ್ಟೋಲ್ಟ್ ಬ್ರೆಕ್ಟ್

## ಏಜೆನ್ಸಿದಾರರ ಚಂದಾದಾರರ ಗಮನಕ್ಕೆ

ಏಜೆನ್ಸಿ ಹಣದ ಬಗ್ಗೆ ನಮ್ಮ ಬಿಲ್‌ಗಳು, ಪತ್ರಿಕೆಗಳು ತಲುಪದಿರುವುದು ಅಥವಾ ಬೇರಾವುದೇ 'ಐಕ್ಯರಂಗ'ದ ನಿರ್ವಹಣೆಗೆ ಕುರಿತಾದ ದೂರುಗಳಿದ್ದರೆ ದಯವಿಟ್ಟು ತಕ್ಷಣ ಈ ಕೆಳಗಿನ ವಿಳಾಸಕ್ಕೆ ವೈಯಕ್ತಿಕವಾಗಿ ಬರೆಯಿರಿ. ಹಣ ಸಂದಾಯದ ಬಗ್ಗೆ ಇರುವ ದಾಖಲೆಗಳ ಯಾವುದೇ ಸಂಬಂಧಪಟ್ಟ ವಿವರಗಳನ್ನೂ ಜತೆಗೇ ಕಳುಹಿಸಿ.

ಜೆ.ಎನ್. ನಾಗರಾಜ್
'ಐಕ್ಯರಂಗ'
L-56, ಕೆ.ವಿ. ಟೆಂಪಲ್ ರಸ್ತೆ
ಸುಲ್ತಾನ ಪೇಟೆ, ಬೆಂಗಳೂರು - 560053

ದಾಗ ಕೂಡಾ ಯಾವುದೇ ಆರಾಧನಾ ಸ್ಥಳದ ಮೇಲೆ ಹಲ್ಲೆ ನಡೆಯಲಿಲ್ಲ. ಆದರೆ ಇಂದು ಅಲ್ಪಸಂಖ್ಯಾತ ಕೋಮಿನ ಜನಗಳಲ್ಲಿ ಅಭದ್ರತೆಯ ಭಾವನೆ ಬೆಳೆಯುತ್ತಿದೆ. ಕೆಲವರು ಆಗಲೇ ಹಳ್ಳಿಗಳಿಂದ ನಗರಗಳಿಗೆ ವಲಸೆಹೋಗಲಾರಂಭಿಸಿದ್ದಾರೆ. ಕೆಲವರು ಕಾಶ್ಮೀರವನ್ನೇ ಬಿಟ್ಟು ಹೋಗುವ ಬಗ್ಗೆ ಯೋಚಿಸುತ್ತಿದ್ದಾರೆ.

ಪಂಜಾಬ್ ಮತ್ತು ಕಾಶ್ಮೀರದ ಸ್ಥಿತಿಗಳಲ್ಲಿ ಸಾಮ್ಯವಿದ್ದರೂ ಇವೆರಡರ ನಡುವೆ ಒಂದು ಪ್ರಮುಖ ಭಿನ್ನತೆಯಿದೆ. ಪಂಜಾಬಿನಲ್ಲಿ ಪ್ರತ್ಯೇಕತಾವಾದದ ಘೋಷಣೆಗೆ ಜನಗಳ ಬೆಂಬಲವಿಲ್ಲ. ಆದರೆ ಕಾಶ್ಮೀರದಲ್ಲಿ ಇದನ್ನು ತಿರುಗಿದ ಮೂಲ ಜನತೆಯ ಈ ಹೆಚ್ಚುತ್ತಿರುವ ಅಸಂತೃಪ್ತಿಯೇ. ಆ ಕಾಲದ ಪೂರ್ಣ ಇತಿಹಾಸದ ಬಗ್ಗೆ ಚರ್ಚಿಸದೆ ಇಲ್ಲಿ ಇಷ್ಟನ್ನು ಮಾತ್ರ ಹೇಳಬಹುದು. 1953ರ (ಶೇಖ್ ಅಬ್ದುಲ್ಲಾರ ಬಂಧನಕ್ಕೆ ಹಾದಿ ಮಾಡಿದ) ಬಿಕ್ಕಟ್ಟಿನ ನಂತರ ಅತ್ಯಂತ ಅಲ್ಪ ಅವಧಿಯಲ್ಲೇ ಪರಿಸ್ಥಿತಿಯನ್ನು ಹತೋಟಿಗೆ ತರಲು ಸಾಧ್ಯವಾದದ್ದು ನ್ಯಾಶನಲ್ ಕಾನ್ಫರೆನ್ಸ್‌ನ ಹಳೆಯ ಮುಂದಾಳುಗಳು ಕಾಶ್ಮೀರವನ್ನು ಭಾರತದ ಒಂದು ಭಾಗವಾಗಿ ಉಳಿಸಿಕೊಳ್ಳುವುದನ್ನು ಬೆಂಬಲಿಸಿ ಒಂದು ದೃಢನಿಲುವು ತಳೆದುದರಿಂದಲೇ.

ಚುನಾವಣೆಗಳಲ್ಲಿ ಮೋಸಗಳು ನಡೆದಿರುತ್ತಿದ್ದರೆ ಅದು ಚುನಾವಣೆಗಳನ್ನು ಗೆಲ್ಲುತ್ತಿತ್ತು. ಆದರೆ ಈ ಕೂಟದ ಪರಿಣಾಮವಾಗಿ ಹೆಚ್ಚೆಚ್ಚು ಜನಗಳು, ಮುಖ್ಯವಾಗಿ ಯುವಕರು ಮತ್ತು ಬುದ್ಧಿಜೀವಿಗಳು ಪ್ರತ್ಯೇಕತಾವಾದಿಗಳ ಬೆನಹಿಂದೆ ನಡೆಯಲಾರಂಭಿಸಿದರು. ಪ್ರತ್ಯೇಕತಾವಾದಿಗಳು ತಮ್ಮ ಪ್ರಭಾವ ಬೆಳೆಸಲು ಗಂಭೀರ ಪ್ರಯತ್ನ ನಡೆಸುತ್ತಿದ್ದಂತೆ ಇತ್ತ ಹೊಸ ಸರಕಾರ ರಚಿಸಿದ ಸಮ್ಮಿಶ್ರ ಕೂಟದಲ್ಲಿ ಅಧಿಕಾರದ ರೊಟ್ಟಿ ತುಣುಕುಗಳಿಗಾಗಿ ಕಿತ್ತಾಟ ನಡೆಯುತ್ತಿತ್ತು. ಇದು ಜನಗಳನ್ನು ಮತ್ತಷ್ಟು ದೂರ ಸರಿಸಿತು ಪ್ರತ್ಯೇಕತಾ - ವಿರೋಧಿ ಜಾತ್ಯಾತೀತ ಶಕ್ತಿಗಳನ್ನು ನಿಷ್ಕ್ರಿಯಗೊಳಿಸಿತು.

ಯುವಜನತೆ ಮತ್ತಿತರ ವಿಭಾ ಹೀರೋ ಆಗುವಂತಹ ಮಟ್ಟದ ಪ ನಿರ್ಮಾಣವಾಗಿತ್ತು.

ದುರದೃಷ್ಟದ ಸಂಗತಿಯೆಂದರೆ ಸ್ಥಿತಿ ಎದುರಿಸಲು ನ್ಯಾಶನಲ್ ಕಾನ್ಫ ಆಗಲಿ, ಸರಕಾರದಲ್ಲಿ ಅದರ ಜತೆ ಕಾಂಗ್ರೆಸ್ (ಐ) ಏನೂ ಮಾಡ ಬದಲು ಯಾರು ಮಂತ್ರಿಗಳಾಗಬ ಎಂಬ ಬಗ್ಗೆಯೇ ಕಿತ್ತಾಟದಲ್ಲಿದ್ದರು ಫಾರುಕ್ ಅಬ್ದುಲ್ಲಾರ ಯೆಂಬುದೇ ಇಲ್ಲದಿದ್ದುದು ಪರಿ ಯನ್ನು ಮತ್ತಷ್ಟು ಹದಗೆಡಿಸಿತು.

ಪಂಜಾಬಿನ ಮತ್ತು ಜ ಕಾಶ್ಮೀರದ ಉಗ್ರಗಾಮಿಗಳು, ಪ್ರತ್ಯೇ ವಾದಿಗಳ ನಡುವೆ ಆರಂಭದಲ್ಲಿ ರೀತಿಯಲ್ಲಿದ್ದ ಶಾಮೀಲು ನ ಹೆಚ್ಚೆಚ್ಚು ಸುಯೋಜಿತ ಸ್ವರ ಪಡೆಯಲಾರಂಭಿಸಿತು.



## ಜಮ್ಮು-ಕಾಶ್ಮೀರದ ಸನ್ನಿವೇಶಕ್ಕೆ

# ಸಕಾರಾತ್ಮಕ ತಿರುವು ಈಗಲೂ ಸಾಧ್ಯ

ಹರ್ಕಿಶನ್ ಸಿಂಗ್ ಸುರ್ಜಿತ್

**ಪಂಜಾಬ್ ಮತ್ತು ಕಾಶ್ಮೀರದ ಸನ್ನಿವೇಶಗಳಲ್ಲಿ ಸಾಮ್ಯತೆಗಳಿವೆ, ಒಂದು ಪ್ರಮುಖ ಭಿನ್ನತೆಯೂ ಇದೆ. ಪ್ರತ್ಯೇಕತಾ ವಾದದ ಘೋಷಣೆಗೆ ಕಾಶ್ಮೀರದಲ್ಲಿ ಜನತೆಯ ನಡುವೆ ಬೆಂಬಲ ಸೃಷ್ಟಿಸು ವುದು ಪ್ರತ್ಯೇಕತಾವಾದಿಗಳಿಗೆ ಸಾಧ್ಯವಾಗಿದೆ. ಆದರೆ ಪರಿಸ್ಥಿತಿ ಪೂರ್ಣವಾಗಿ ಕೈಮೀರಿ ಹೋಗಿದೆ ಎನ್ನುವ ಹತಾಶೆ ಬೇಕಿಲ್ಲ. ರಾಷ್ಟ್ರೀಯ ಐಕ್ಯತೆ, ದೇಶಪ್ರೇಮ, ಜಾತ್ಯತೀತ ಮೌಲ್ಯಗಳ ವ್ಯಕ್ತಿಗಳು ಈಗಲೂ ಇದ್ದಾರೆ. ರಾಷ್ಟ್ರೀಯ ಐಕ್ಯತೆಯ ಪರ ಯಾರಿದ್ದಾರೆ, ವಿರುದ್ಧ ಯಾರಿದ್ದಾರೆ ಇವೆರಡರ ನಡುವೆ ಒಂದು ಸ್ಪಷ್ಟ ರೇಖೆ ಎಳೆಯಬೇಕು. ಇತರ ಭಿನ್ನಾಭಿಪ್ರಾಯ ಗಳನ್ನು ನಂತರ ಪರಿಹರಿಸಿಕೊಳ್ಳಬಹುದು ಎನ್ನುತ್ತಾರೆ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಸದಸ್ಯ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್ ಕಾಶ್ಮೀರ ಸಮಸ್ಯೆಯ ವರ್ತಮಾನ, ಇತಿಹಾಸದ ಸ್ಥೂಲ ವಿಶ್ಲೇಷಣೆ ನಡೆಸಿರುವ ಈ ಲೇಖನದಲ್ಲಿ.**

ಕಾಶ್ಮೀರದಲ್ಲಿ ಪರಿಸ್ಥಿತಿ ದಿನೇ-ದಿನೇ ಹದಗೆಡುತ್ತಿದೆ. ಕೆಲವು ದಿನಗಳ ಹಿಂದೆ ರಾಜ್ಯದಲ್ಲಿ ಮೊತ್ತಮೊದಲ ಬಾರಿಗೆ ಉಗ್ರಗಾಮಿಗಳು ಮತ್ತು ಸಶಸ್ತ್ರ ಪಡೆಗಳ ನಡುವೆ ಚಕಮಕಿ ನಡೆಯಿತು. ಕೇಂದ್ರ ಗೃಹ ಮಂತ್ರಿಯವರ ಮಗಳು ಡಾ.ರುಬೈಯಾರವನ್ನು 'ಕಾಶ್ಮೀರ ರಾಷ್ಟ್ರೀಯ ವಿಮೋಚನಾರಂಗ' ಎಂದು ಹೇಳಿಕೊಳ್ಳುವವರು ಅಪಹರಣ ಮಾಡಿದಾಗ ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂಬುದರತ್ತ ದೇಶದ ಗಮನ ಸೆಳೆಯಲ್ಪಟ್ಟಿದೆ. ದೇಶದೊಳಗೆ ಮುಸ್ಲಿಂ ಧಾರ್ಮಿಕ ಮುಖಂಡರೂ ಸೇರಿದಂತೆ ಪ್ರತಿಯೊಬ್ಬರೂ ಇದನ್ನು ಖಂಡಿಸಿದರೂ ವಿದೇಶಗಳಲ್ಲೂ ಇದರ ಖಂಡನೆಯಾದರೂ ಉಗ್ರಗಾಮಿಗಳ ಮೇಲೆ ಅದು ಪರಿಣಾಮ ಬೀರಲಿಲ್ಲ. ಸರಕಾರ ಐದು ಉಗ್ರಗಾಮಿಗಳ ಬಿಡುಗಡೆ ಮಾಡಿ ಭಾರಿ ಬೆಲೆ ತೆರಬೇಕಾಯಿತು. ಈ ಬಿಡುಗಡೆ ಶ್ರೀನಗರದಲ್ಲಿ ಸಂತಸದ ಭಾವನೆ ಮೂಡಿಸಿದ್ದನ್ನು ಭಾರತದ ಜನ ತಮ್ಮ ಟಿ.ವಿ ಪರದೆಗಳಲ್ಲಿ ಕಂಡರು.

ಇದಕ್ಕೆ ಮೊದಲು ತಿಂಗಳಾನುಗಟ್ಟಲೆ ಉಗ್ರಗಾಮಿಗಳ 'ಬಂದ್' ಕರೆಗೆ ಜನತೆ ಸಾಕಷ್ಟು ಬೆಂಬಲದಿಂದಲೋ ಅಥವಾ ಭಯದಿಂದಲೋ ಓಗೊಡುತ್ತಿದ್ದ ಸುದ್ದಿ ಕೇಳಿದ್ದೇವೆ. ನ್ಯಾಶನಲ್ ಕಾನ್ಫರೆನ್ಸ್‌ನ ಕಾರ್ಯಕರ್ತರನ್ನು ಉಗ್ರಗಾಮಿಗಳು ತಮ್ಮ ಹಲ್ಲೆಗಳ ಗುರಿಯನ್ನಾಗಿಸಿ ಕೊಂಡಂತಿದೆ. ಲೋಕಸಭಾ ಚುನಾವಣೆಗಳಲ್ಲಿ ಒಬ್ಬ ಅಭ್ಯರ್ಥಿ ಅವಿರೋಧ - ದೇಶದಲ್ಲಿ ಇಂತದ್ದು ಇದೊಂದೇ ಉದಾಹರಣೆ - ಆಯ್ಕೆಯಾಗಿದ್ದರೆ ಇನ್ನಿಬ್ಬರು ಕೇವಲ ಒಂದು ಶೇಕಡಾ ಮತದಾನದಿಂದ ಆಯ್ಕೆಯಾದರು. ಉಗ್ರಗಾಮಿಗಳ ಚುನಾವಣಾ ಬಹಿಷ್ಕಾರದ ಕರೆ ಎಷ್ಟು ಮಟ್ಟಿಗೆ ಕೆಲಸ ಮಾಡಿತು ಎಂಬುದನ್ನು ಇದು ತೋರಿಸುತ್ತದೆ. 1977, 1983 ಬಿಟ್ಟರೆ ಬೇರೆಂದೂ ರಾಜ್ಯದಲ್ಲಿ ನ್ಯಾಯ ಚುನಾವಣೆ ನಡೆಯದಿದ್ದರೂ ಈ ಚುನಾವಣೆಗಳಲ್ಲಿ ಪ್ರಜಾಪ್ರಭುತ್ವದ ಸೋಗು ಕೂಡಾ ಇರಲಿಲ್ಲ.

1953 ರಿಂದೀಚೆಗೆ ಕಾಶ್ಮೀರ ಹಲವು ಬದಲಾವಣೆಗಳನ್ನು ಬಿಕ್ಕಟ್ಟುಗಳನ್ನು ಎದುರಿಸಿದೆ. ಆದರೆ ಎಂದೂ ಎರಡು ಕೋಮುಗಳ ನಡುವಿನ ಸಂಬಂಧಗಳಿಗೆ ಧಕ್ಕೆ ಬಂದಿರಲಿಲ್ಲ. ಜನಮತ ಗಣನಾ ರಂಗ ಜನಗಳ ನಡುವೆ ಬೆಂಬಲ ಪಡೆದಿದ್ದು ಅದರ ಪ್ರಕ್ಷೋಭೆ ಶಿಬಿರಗಳಿ

ಸೃಷ್ಟಿಸಿಕೊಳ್ಳುವುದು ಉಗ್ರಗಾಮಿಗಳಿಗೆ ಸಾಧ್ಯವಾಗಿದೆ. ಲಡಾಖ್ ಮತ್ತು ಜಮ್ಮುವಿನಲ್ಲಿ ಇದಕ್ಕೆ ಪ್ರತಿಕ್ರಿಯೆಗಳೂ ಸೃಷ್ಟಿಯಾಗಿವೆ.

### ಜನರೇಕೆ ಬದಲಾದರು?

ಸ್ವಾತಂತ್ರದ ಸಮಯದಲ್ಲಿ ಮಹಿಳೆಯರು, ಪುರುಷರೆನ್ನದೆ ಕೈಯಲ್ಲಿ ಶಸ್ತ್ರ ಹಿಡಿದು ಪಾಕಿಸ್ತಾನ ದಾಳಿಕೋರರ ವಿರುದ್ಧ ಸ್ವಾತಂತ್ರದ ರಕ್ಷಣೆಗೆ ನಿಂತ, ಧಾರ್ಮಿಕ ಸಾಮರಸ್ಯತೆ ಕೂಡಾ ಹೋರಾಟದಿಂದ ವಿಚಲಿತಗೊಳಿಸದ ಅದೇ ಜನ ಇಂದೇಕೆ ಹೆಚ್ಚೆಚ್ಚು ಪ್ರತ್ಯೇಕತಾವಾದಿ ಘೋಷಣೆಗಳ ಹಿಂದೆ ನೆರೆಯುತ್ತಿದ್ದಾರೆ?

ಆ ಹೋರಾಟದ ಸಮಯದಲ್ಲಿ ಅವರಿಗೆ ಶೇಖ್ ಅಬ್ದುಲ್ಲಾ, ಎಂ.ಸಾದಿಕ್ ಮತ್ತಿತರರ ನೇತೃತ್ವವಿತ್ತು. ಇವರು ಡೋಗ್ರಾ ಆಳ್ವಿಕೆ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿ ಎರಡರ ವಿರುದ್ಧವೂ ಹೋರಾಟಗಳಲ್ಲಿ ನ್ಯಾಶನಲ್ ಕಾನ್ಫರೆನ್ಸ್‌ಗೆ ನೇತೃತ್ವ ನೀಡಿದ, ಈ ಸಂಘಟನೆಯ ಬಾವುಟದಡಿ ಕಾಶ್ಮೀರದ ಜನತೆಯ ಹೋರಾಟವನ್ನು ದೇಶದ ಇತರೆಡೆ ರಾಷ್ಟ್ರೀಯ ಕಾಂಗ್ರೆಸ್‌ನ ನೇತೃತ್ವದಲ್ಲಿ ನಡೆಯುತ್ತಿದ್ದ ಸ್ವಾತಂತ್ರದ ರಾಷ್ಟ್ರೀಯ ಆಂದೋಲನದೊಂದಿಗೆ ಬೆಸೆದ ಮುಂದಾಳುಗಳಾಗಿದ್ದರು. ಇಷ್ಟೇ ಅಲ್ಲ, 'ಕಾಶ್ಮೀರ ಬಿಟ್ಟು ತೊಲಗಿ' ಆಂದೋಲನ ಪಾಳೆಯಗಾರಿಕೆಯ ಸಾಮಾಜಿಕ ಆರ್ಥಿಕ ಆಧಾರವನ್ನೇ ಸಮೂಲ ನಾಶ ಮಾಡುವ ಉದ್ದೇಶಹೊಂದಿತ್ತು, ಕಾಶ್ಮೀರಿ ಜನತೆಗೆ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯ ಅನುಭವಿಸುವ ಒಂದು ಹೊಸ ಸಮಾಜದ ನೋಟ ನೀಡಿ ಸ್ಫೂರ್ತಿ ತುಂಬಿತ್ತು ಎಂಬುದು ಆ ಆಂದೋಲನದ ಕಾರ್ಯಕ್ರಮದ ಅಧ್ಯಯನದಿಂದ ಕಂಡುಬರುತ್ತದೆ.

ಈ ಬಗ್ಗೆ ಕೆಲವು ಪ್ರಾರಂಭಿಕ ಕ್ರಮಗಳನ್ನು ಕೈಗೊಳ್ಳಲಾಗಿತ್ತು ಕೂಡಾ. ಭೂಮಾಲಿಕತ್ವವನ್ನು ಪರಿಹಾರ ನೀಡದೆ ಅಂತ್ಯಗೊಳಿಸಲಾಯಿತು. ಹೀಗೆ ಮಾಡಿದ ರಾಜ್ಯ ಇಡೀ ದೇಶದಲ್ಲಿ ಇದೊಂದೇ. ಆದರೆ ನಂತರ ಜನಗಳ ಈ ಆಕಾಂಕ್ಷೆಗಳು ಈಡೇರಲಿಲ್ಲ. ಅಷ್ಟೇ ಅಲ್ಲ, ನಂತರದ ಅವಧಿ ಅತ್ಯಂತ ನಿರಾಸೆಯ ಅವಧಿ. ಶೇಖ್ ಅಬ್ದುಲ್ಲಾ ನಂತರ 'ಸ್ವತಂತ್ರ ಕಾಶ್ಮೀರ' ಘೋಷಣೆಯತ್ತ

### ಕಾಂಗ್ರೆಸ್‌ನ ಛಿದ್ರಕಾರಿ ತಂತ್ರದಿಂದಾಗಿ

ನಂತರ ಪರಿಸ್ಥಿತಿ ಹದಗೆಟ್ಟಿತು. ಮತ್ತೆ ಇಂದಿರಾಗಾಂಧಿ - ಶೇಖ್ ಅಬ್ದುಲ್ಲಾ ಒಪ್ಪಂದದಿಂದ ಸ್ವಲ್ಪ ಮಟ್ಟಿಗೆ ಮೊದಲಿನಂತಾಯಿತು. ಜನಗಳ ನಡುವೆ ಮತ್ತೆ ಹೊಸ ವಿಶ್ವಾಸ ಮೂಡಿತು. ಕೆಲವು ವರ್ಷಗಳ ನಂತರ ನ್ಯಾಶನಲ್ ಕಾನ್ಫರೆನ್ಸ್‌ನ ಪ್ರಭಾವ ರಾಜ್ಯದ್ಯಂತ ಇದ್ದರೂ ಶೇಖ್ ಅಬ್ದುಲ್ಲಾ ಹತಾಶ ವ್ಯಕ್ತಿಯಾಗಿ ಮರಣ ಹೊಂದಿದರು. ಜನತೆಯ ವಿಶ್ವಾಸ ಗೆಲ್ಲಲು ಸಾಧ್ಯವಾಗದ ಫಾರುಕ್ ಅಬ್ದುಲ್ಲಾ ನೇತೃತ್ವವಹಿಸಿಕೊಂಡರು. 1983 ರಲ್ಲಿ ಕಾಂಗ್ರೆಸ್ ಜತೆ ಬಿಟ್ಟು ಅದರ ವಿರುದ್ಧ ಹೋರಾಡಿದ ಮುಕ್ತ ನ್ಯಾಯ ಚುನಾವಣೆಯಲ್ಲಿ ಬಹುಪಾಲು ಜನರ ಬೆಂಬಲ ಪಡೆದರು. ಆದರೆ ಅಧಿಕಾರ ತನ್ನ ಕೈಗೆ ಪಡೆಯಲು ಕಾತುರದಿಂದಿದ್ದ ದೆಹಲಿಯಲ್ಲಿ ತನ್ನದೇ ಸರ್ಕಾರ ಹೊಂದಿದ್ದ ಕಾಂಗ್ರೆಸ್ (ಐ) ಯಶಸ್ವಿಯಾಗಿ ಷಡ್ಯಂತರಗಳನ್ನು ಏರ್ಪಡಿಸಿ ಫಾರುಕ್ ಅಬ್ದುಲ್ಲಾರ ಭಾವ ಜಿ.ಎಂ. ಶಹಾ ನೇತೃತ್ವದ ಈಗ 'ಷಡ್ಯಂತರಗಳ ಸರ್ಕಾರ' ಎಂದು ಕುಖ್ಯಾತವಾಗಿರುವ ಸರಕಾರ ಹೇರಿತು.

ಜನತೆಯ ತೀರ್ಪನ್ನು ಬದಿಗೆ ತಳ್ಳಿ ಪರೋಕ್ಷ ಆಳ್ವಿಕೆ ನಡೆಸುವ ಕಾಂಗ್ರೆಸ್ (ಐ) ನ ಈ ಪ್ರಯತ್ನ ಒಂದು ಸಂಕ್ರಮಣ ಘಟ್ಟ. ಜನಗಳಲ್ಲಿ ಹತಾಶೆ ತುಂಬಿ ಇದು ಪ್ರತ್ಯೇಕತಾವಾದಿಗಳ, ಉಗ್ರವಾದಿಗಳ ಚಟುವಟಿಕೆಗಳಿಗೆ ವಿಪರೀತ ಪ್ರೋತ್ಸಾಹ ನೀಡಿತು. ಜಮಾತ್ - ಎ-ಇಸ್ಲಾಮಿ, ಅಲ್ಲಾವಾಲೆ ಮತ್ತಿತರ ವಿವಿಧ ಗುಂಪುಗಳು ತುಂಬಾ ಸಕ್ರಿಯವಾದವು. 1987ರ ಚುನಾವಣೆಗಳಲ್ಲಿ ಪ್ರತ್ಯೇಕತಾವಾದಿಗಳು, ಮತ್ತಿತರ ಧಾರ್ಮಿಕ ಭಾವನೆ ಉದ್ರೇಕಿಸುವ ಶಕ್ತಿಗಳ ಮುಸ್ಲಿಂ ಸಂಯುಕ್ತ ರಂಗ ಅಸ್ತಿತ್ವಕ್ಕೆ ಬಂತು.

ಈ ರಂಗ ಜನರ ನಡುವೆ ಪ್ರವೇಶಿಸಲು ಸಾಧ್ಯವಾದರೂ ಕೂಡಾ ಕಾಶ್ಮೀರಿ ಜನತೆಯ ಪಾರಂಪರಿಕ ರಾಜಕೀಯ ಸಂಘಟನೆಯಾಗಿ ನ್ಯಾಶನಲ್ ಕಾನ್ಫರೆನ್ಸ್ ತನ್ನ ಬೆಂಬಲ ಕಾದುಕೊಂಡಿತು. ಕಾಂಗ್ರೆಸ್ (ಐ) ಅದರ ಮೇಲೆ ಹೇರಿದ್ದ ಮಿತ್ರಕೂಟವಿಲ್ಲದಿದ್ದರೆ,

ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಕಾಶ್ಮೀರದಲ್ಲಿ ದೊಡ್ಡ ಮೊತ್ತ ಸುರಿಯುತ್ತಿದ್ದರೂ ಜನಗಳ ತುರ್ತು ಸಮಸ್ಯೆಗಳಾದ ನಿರುದ್ಯೋಗ,ಬಡತನವನ್ನು ಎದುರಿಸುವಲ್ಲಿ ಗಂಭೀರ ಪ್ರಯತ್ನಗಳನ್ನು ನಡೆಸಲೇ ಇಲ್ಲ. ಇಂಜಿನಿಯರುಗಳಿಗೆ, ಡಾಕ್ಟರುಗಳಿಗೆ ಕೆಲಸ ಸಿಗದಾಯಿತು. ಪಾಕಿಸ್ತಾನಿ ಆಕ್ರಮಿತ ಕಾಶ್ಮೀರದ ಸಾವಿರಾರು ಮಂದಿಗೆ ಕೊಲ್ಲಿಯ ದೇಶಗಳಲ್ಲಿ ಉದ್ಯೋಗವಕಾಶ ದೊರೆತು ತಮ್ಮ ಸ್ಥಿತಿ ಸುಧಾರಿಸಿಕೊಳ್ಳುವುದು ಸಾಧ್ಯವಾದರೆ ಇಲ್ಲಿಯವರಿಗೆ ಆ ಅವಕಾಶ ಕೂಡಾ ಸಿಗುತ್ತಿರಲಿಲ್ಲ. ಇದು ಯುವಕರ ಮೇಲೆ ತನ್ನದೇ ಪ್ರಭಾವ ಬೀರಿತು.

### ಪಂಜಾಬ್ ಮತ್ತು ಕಾಶ್ಮೀರ

ವಿಮಾನ ಅಪಘಾತವೊಂದರಲ್ಲಿ ಜಿಯಾ ಉಲ್‌ಹಖ್‌ರ ಸಾವಿನ ನಂತರ ಪ್ರತ್ಯೇಕತಾವಾದಿ ಚಟುವಟಿಕೆಗಳಿಗೆ ಮತ್ತಷ್ಟು ಕುಮ್ಮಕ್ಕು ಸಿಗುವಂತಾಯಿತು. ಈ ಘಟನೆ ನಡೆದ ಕೂಡಲೇ ಕಾಶ್ಮೀರದಲ್ಲಿ ಬಾಂಬ್ ಸ್ಫೋಟ ಇತ್ಯಾದಿಗಳ ಒಂದು ಸರಣಿಯೇ ಸಂಭವಿಸಿತು. ಜನಗಳ ನಾಡಿ ತಿಳಿದ ಯಾರಿಗಾದರೂ ಜನವನ್ನು ಈ ಘಟನೆ ಎಷ್ಟೊಂದು ತಟ್ಟಿತೆಂಬುದು ತಿಳಿಯುತ್ತಿತ್ತು. ಸಿ.ಪಿ.ಐ. (ಎಂ) ಈ ಬಗ್ಗೆ ಮತ್ತೆ ಮತ್ತೆ ಎಚ್ಚರಿಸಿತು. ಪಂಜಾಬ್ ಸಮಸ್ಯೆ ಕಾಶ್ಮೀರಕ್ಕೆ ವಿಸ್ತರಿಸುತ್ತಿದೆ ಎಂದು ಆ ಸಮಯದಲ್ಲಿ ಶ್ರೀನಗರದಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ನಾನು ಹೇಳಿದ್ದೆ.

ಈಗ ಅದೇ ನಡೆಯುತ್ತಿದೆ.

ಪಾಕಿಸ್ತಾನದ ಜನತೆ ಯಾವ ಪ್ರಜಾಪ್ರಭುತ್ವದ ಮರು ಸ್ಥಾಪನೆಗಾಗಿ ಹೋರಾಡುತ್ತಿದ್ದರೋ, ಯಾವ ಹೋರಾಟದಲ್ಲಿ ಅವರಿಗೆ ಬೆನಜೀರ್ ಭುಟ್ಟೋ ಸರಕಾರದ ರೂಪದಲ್ಲಿ ವಿಜಯ ದೊರೆಯಿತೋ ಅದನ್ನು ಭಾರತದ ಜನತೆ ಸ್ವಾಗತಿಸಿದರು. ಆದರೆ ಕಾಶ್ಮೀರದ ಜನತೆಯ ಮೇಲೆ ಇದರ ಪರಿಣಾಮ ಕಾಣಲಿಲ್ಲ. ಇದಕ್ಕೆ ಹೊರಗಿನ ಚಟುವಟಿಕೆಗಳ ಪ್ರಭಾವಗಳಷ್ಟೇ ಕಾರಣವಲ್ಲ, ಸ್ವತಃ ತಾವೇ ಪ್ರಜಾಪ್ರಭುತ್ವ ಪಡೆದಿರದಿದ್ದು ಕೂಡಾ ಒಂದು ಕಾರಣ. ಜಿಯಾನಂತಹ ಒಬ್ಬ ಮಿಲಿಟರಿ ಸರ್ವಾಧಿಕಾರಿ ಕಾಶ್ಮೀರಿ

ಕಾಶ್ಮೀರದಲ್ಲಿ ಗಡಿಯ ಮ ಖಾಲಿಸ್ತಾನಿ ಗಳಿಗೆ ಶಸ್ತ್ರಾಸ್ತ್ರ, ಜನಗ ನುಗ್ಗಿಸಲು ಪ್ರಯತ್ನಿಸುತ್ತಿದ್ದು ನಂತರ ಪಾಕಿಸ್ತಾನೀ ಆಕ್ರಮಿತ ಕಾಶ್ಮೀರ ಸಿಖ್ ಉಗ್ರಗಾಮಿ ಗಳ ಜತೆಗೆ ಇವರ ತರಬೇತಿ ಕೇಂದ್ರಗಳನ್ನು ತೆರೆಯ ಮಟ್ಟಕ್ಕೆ ಹೋಯಿತು.

ಬೆನಜೀರ್ ಸರಕಾರ ಬಂದ ಮ ಗಡಿಯಾಚೆಯಿಂದ ಉಗ್ರಗಾಮಿಗ ಬೆಂಬಲ ದೊರಕಲಿಕ್ಕಿಲ್ಲ ಎಂಬ ಭಾ ಸರಕಾರದ ನಿರೀಕ್ಷೆ ಪೂರ್ಣ ಹ ಯಾಯಿತು. ಪಾಕಿಸ್ತಾನಿ ಪ್ರಧಾನ ಮ ಭಾರತದೊಡನೆ ಸಂಬಂಧಗಳ ಸುಧಾರಿಸ ಬಯಸಿದರೂ ಎಲ್ಲ ಆಕೆಯ ಕೈಗಳಲ್ಲಿಲ್ಲ ಎಂಬುದ ಭಾರತ ಸರಕಾರ ಬಹುಶಃ ಅ ಮಾಡಿಕೊಳ್ಳಲಿಲ್ಲ. ಪಾಕಿಸ್ತಾನದ ಪಂಜಾ ಕಾಶ್ಮೀರ ಭಾಗ ಗಳಲ್ಲಿ ಸರಕಾರಗಳು ಇ ಜಿಯಾ ಪರವಾದ ವ್ಯಕ್ತಿಗಳ ಕೈಯಲ ಇತ್ತು. ಪಾಕಿಸ್ತಾನಿ ಸೇನೆಗೆ ಇಲ್ಲಿ ಇ ದೊಡ್ಡ ಪಾತ್ರವಿತ್ತು. ಜತೆಗೇ ಕಾಶ್ ಪ್ರಶ್ನೆಯಲ್ಲಿ ಮೊದಲಿಂದಲೂ ಅಮೆರಿಕನ್ನರ ಸಕ್ರಿಯ ಪಾತ್ರ ಇ ಬಲಗೊಳ್ಳುತ್ತಿತ್ತು. ನಮ್ಮ ದೇಶದ ಈ ಸರಕಾರದಲ್ಲಿ ಕೂಡಾ ಕಾಶ್ಮೀರದ ಕ ಸನ್ನಿವೇಶವನ್ನು ಅದರ ರಾಷ್ಟ್ರೀ ಅಂತರಾಷ್ಟ್ರೀಯ ಪರಿಣಾಮಗಳ ಸರಿಯಾಗಿ ಅರಿಯ ಲಾ ಜನಗಳಿದ್ದಾರೆ. ಅವರು ಹಿಂ ಅನುಭವಗಳಿಂದ ಸರಿಯಾದ ಪ ಕಲಿಯಬೇಕು.


1986 ರ ನಂತರ ಪರಿಸ್ಥಿತಿ ಹದಗ ವಲ್ಲಿ ರಾಜೀವ್ ಗಾಂಧಿ ನೇತೃತ್ವದ ಸರ ಒಂದು ದೊಡ್ಡ ಜವಾಬ್ದಾರಿ. ಇದ ಅವರು ಸ್ವೀಕರಿಸಬೇಕು. ಈಗ ನ ಕಾಶ್ಮೀರದಲ್ಲಿ ಕಾಣುತ್ತಿರುವುದು ಕಾಂಗ್ (ಐ) ನ ಕಾಶ್ಮೀರ ನೀತಿಯ ತಾ ಫಲವನ್ನಷ್ಟೇ. ಹೀಗಿದ್ದರೂ ಸಂವಿಧಾ 370 ನೇ ಕಲಮಿನ ಅಗತ್ಯವನ್ನು ಅ ಐತಿಹಾಸಿಕ ಹಿನ್ನೆಲೆಯನ್ನು ಅ ಕೊಳ್ಳದೇನೇ ಈಗಲೂ ಪ್ರಶ್ನಿಸುವ ಶಕ್ತಿ ನಮ್ಮ ದೇಶದಲ್ಲಿವೆ. ಇವು ನ ತಿಳಿದಿರಬೇಕು.

ಭಾರತದಲ್ಲಿ ಇತರ ಭಾಗಗಳ ಅಲ್ಪಸಂಖ್ಯಾತರನ್ನು ತಟ್ಟುವ ಘಟನೆ ಕಾಶ್ಮೀರದಲ್ಲೂ ಅಂತಹುದೇ ಪ್ರತಿಕ್ರಿ ಹೊಂದಿರುವುದಿಲ್ಲ ಎಂಬುದು ಗಮ ಬೇಕಾದ ಇನ್ನೊಂದು ಅಂಶ. ಸ್ವಾತಂ ಮೊದಲು ಪಾಕಿಸ್ತಾನದ ಪ್ರತ್ಯೇಕತಾವ ಘೋಷಣೆ ಸುಮಾರಾಗಿ ಎ ಅಲ್ಪಸಂಖ್ಯಾತರನ್ನು ತಟ್ಟಿದ್ದಾಗ ಕಾಶ್ಮೀ ಜನತೆ ನಿರಂತರವಾಗಿ ತಮ್ಮ ಅದೃಷ್ಟ

(ಪುಟ 6 ಕ್ಕೆ)

# ಮೀಸಲಾತಿ - ವಿರೋಧಿ ಚಳುವಳಿ ನ್ಯಾಯವೇ?

**ಕಾಂ. ಹರ್ಕಿಶನ್‌ಸಿಂಗ್ ಸುರ್ಜಿತ್ ಪರಿಶೀಲಿಸುತ್ತಾ ಈ ಸಮಸ್ಯೆಯನ್ನು ಎದುರಿಸುವಾಗ ಗುರುತಿಸಬೇಕಾದ ನಾಲ್ಕು ಅಂಶಗಳ ಬಗ್ಗೆ ಹೇಳುತ್ತಾರೆ.**



ಸಂಸತ್ತಿಗೆ ಮತ್ತು ಕೆಲವು ರಾಜ್ಯಗಳ ವಿಧಾನ ಸಭೆಗೆ ಚುನಾವಣೆಗಳ ನಂತರ ಉತ್ತರಪ್ರದೇಶದಲ್ಲಿ ಹರಿಜನ ಗಿರಿಜನರಿಗೆ ಮೀಸಲಾತಿಯ ಮೂಲಭೂತ ಅಂಶವನ್ನೇ ಪ್ರಶ್ನಿಸುವ ಒಂದು ಚಳುವಳಿ ನಡೆಯಿತು. ನಂತರ ಇದು ಆಂಧ್ರಪ್ರದೇಶ, ಗುಜರಾತ್, ಮಧ್ಯಪ್ರದೇಶ ಮತ್ತಿತರ ರಾಜ್ಯಗಳಿಗೆ ಹರಡಿತು.

ಮೀಸಲಾತಿಯ ವಿರುದ್ಧ ಚಳುವಳಿಗಳು ಹೊಸದೇನಲ್ಲ. 1970ರ ದಶಕದಲ್ಲಿ ಬಿಹಾರದಲ್ಲಿ 1980 ಹಾಗೂ 1985 ರಲ್ಲಿ ಗುಜರಾತಿನಲ್ಲಿ ಇತ್ಯಾದಿ. ಆದರೆ ಇಂತಹ ಬಹುಪಾಲು ಚಳುವಳಿಗಳ ಕೇಂದ್ರ ವಿಷಯವಾಗಿದ್ದದ್ದು ಇತರ ಹಿಂದುಳಿದ ಜಾತಿಗಳಿಗೆ ಮೀಸಲಾತಿಯ ಪ್ರಶ್ನೆ.

ಈ ಪ್ರಶ್ನೆ ಸ್ವಾತಂತ್ರ್ಯದ ಮೊದಲ ದಶಕದಲ್ಲೇ ಕಾಕಾ ಕಾಲೇಲ್‌ಕರ್ ಸಮಿತಿ 1955ರಲ್ಲಿ ನೀಡಿದ ತನ್ನ ವರದಿಯಲ್ಲಿ ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು 25 ರಿಂದ 33 ಶೇಕಡಾಕ್ಕೆ ಏರಿಸಬೇಕೆಂದು ಶಿಫಾರಸು ಮಾಡಿತು. ಇದು 23 ವರ್ಷಗಳ ಕಾಲ ಜಾರಿಗೇ ಬರಲಿಲ್ಲ. 1978ರಲ್ಲಿ ನೇಮಿಸಲ್ಪಟ್ಟ ಮಂಡಲ್ ಆಯೋಗ ಹಿಂದುಳಿದ ಜಾತಿಗಳ ಉದ್ಧಾರ ಹಾಗೂ ರಕ್ಷಣೆಗೆ ವಿಶೇಷ ಕ್ರಮಗಳು ಬೇಕೆಂದು ಅಭಿಪ್ರಾಯ ಪಡುತ್ತಾ ಜಾತಿಯನ್ನು ಆಧಾರವಾಗಿಸಿ 3743 ಹಿಂದುಳಿದ ಜಾತಿಗಳನ್ನು ಗುರುತಿಸಿ ಇವಕ್ಕೆ 27 ಶೇಕಡಾ ಮೀಸಲಾತಿ ನೀಡಬೇಕೆಂದು ಶಿಫಾರಸು ಮಾಡಿತು.

ಅಂದರೆ ನಮ್ಮ ಜನಗಳಲ್ಲಿ ಮುಕ್ಕಾಲು ಪಾಲು ಇನ್ನೂ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ ಎಂದಂತಾಯಿತು. ಸ್ವಾತಂತ್ರ್ಯಾನಂತರ ನಮ್ಮ ಬೂರ್ಜ್ವಾ-ಭೂಮಾಲಕ ಆಳರಸರು ಹಿಡಿದ ಬಂಡವಾಳಶಾಹಿ ದಾರಿ ಈ ಸಮಸ್ಯೆಯನ್ನು ಮತ್ತಷ್ಟು ವಿಪರೀತಗೊಳಿಸಿತು. ವಿದ್ಯಾವಂತ ಯುವಕರನ್ನೂ ಇದು ತಟ್ಟಲಾರಂಭಿಸಿತು. ಆಡಳಿತ ಯಂತ್ರ ವಿಸ್ತಾರಗೊಂಡರೂ ಎಲ್ಲಾ ಉದ್ಯೋಗಾರ್ಥಿಗಳಿಗೆ ಕೆಲಸ ಕೊಡಿಸುವುದು ಸಾಧ್ಯವಾಗಲಿಲ್ಲ. ಇದನ್ನು ಕೆಲವು ಪಟ್ಟಭದ್ರ ರಾಜಕಾರಣಿಗಳು ಮೇಲ್ಜಾತಿಗಳ ಯುವ ಜನಗಳನ್ನು ಹರಿಜನ-ಗಿರಿಜನರ ವಿರುದ್ಧ ಎತ್ತಿಕಟ್ಟಲು ಬಳಸಲಾರಂಭಿಸಿದರು.

ರಾಮನರೇಶ್ ಯಾದವ್ ನೇತೃತ್ವದ ಉತ್ತರಪ್ರದೇಶ ಸರಕಾರ ಇತರ ಹಿಂದುಳಿದ ಜಾತಿಗಳಿಗೆ 50 ಶೇಕಡಾ ಮೀಸಲಾತಿ ನಿರ್ಧರಿಸಿತು. ಹಿಂದುಳಿದ ಜಾತಿಗಳನ್ನು ಸರಿಯಾಗಿ ನಿರ್ವಚಿಸಿಲ್ಲ ಎಂಬ ಕಾರಣಕ್ಕೆ ಸುಪ್ರೀಂ ಕೋರ್ಟ್ ಇದನ್ನು ರದ್ದುಮಾಡಿ ಮೀಸಲಾತಿಯ ಮೇಲೆ 50% ಮಿತಿ ಹಾಕಿತು. ಇದರ ನಂತರ ಜನತಾ ಸರಕಾರ ಈ ಮಿತಿಯೊಳಗೆ ಇತರ ಹಿಂದುಳಿದ ಜಾತಿಗಳಿಗೆ ಸೌಲಭ್ಯ ವಿಸ್ತರಿಸುವುದು ಸಾಧ್ಯವಾಯಿತು.

ಸಮಸ್ಯೆ ಎಷ್ಟು ಜಟಿಲವಾಗಿದೆಯೆಂದು ತೋರಿಸುವುದಕ್ಕೆ ಇಷ್ಟೆಲ್ಲಾವನ್ನು ಹೇಳಿದ್ದೇವೆ. ಇದಕ್ಕೆ ಸರಳ ಪರಿಹಾರ ವಿಲ್ಲ. ಆದರೆ ಮೀಸಲಾತಿಯ ಪ್ರಶ್ನೆ ಪರಿಶೀಲಿಸುವಾಗ ನಾವು ಹರಿಜನ-ಗಿರಿಜನರಿಗೆ ಮೀಸಲಾತಿ ಹಾಗೂ ಇತರ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಇವೆರಡರಲ್ಲಿ ಸ್ಪಷ್ಟ ವ್ಯತ್ಯಾಸ ಕಾಣಬೇಕು.

ಈ ವ್ಯತ್ಯಾಸದ ಒಂದು ಅತೀ ಮುಖ್ಯ ಅಂಶವೆಂದರೆ ಹರಿಜನ-ಗಿರಿಜನರು ಶತಮಾನಗಳಿಂದ ಆರ್ಥಿಕವಾಗಿ ಮಾತ್ರವಲ್ಲ, ಸಾಮಾಜಿಕವಾಗಿ ಕೂಡಾ ತೀವ್ರ ಶೋಷಣೆಗೊಳಗಾದ ಬಹುಪಾಲು ಗ್ರಾಮೀಣ ಜನಗಳು. ಈ ಜನಗಳು ಎಂತಹ ಭಯಾನಕ ಪರಿಸ್ಥಿತಿಯಲ್ಲಿ ಬದುಕುತ್ತಿದ್ದರು, ಈಗಲೂ ಬದುಕುತ್ತಿದ್ದಾರೆ ಎಂಬುದು ಹರಿಜನ-ಗಿರಿಜನ ಆಯುಕ್ತರ ಕಳೆದ ಎರಡು ದಶಕಗಳ ವಾರ್ಷಿಕ ವರದಿಗಳನ್ನು ಕಂಡರೆ ಸ್ಪಷ್ಟವಾಗುತ್ತದೆ. 1988 ಒಂದರಲ್ಲೇ 50ಸಾವಿರ ಅತ್ಯಾಚಾರಗಳು ಈ ಜನ ವಿಭಾಗಗಳ ವಿರುದ್ಧ ನಡೆದಿದೆ. (ಇವುಗಳಲ್ಲಿ ಮುಕ್ಕಾಲುಪಾಲು ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ಮತ್ತು ರಾಜಸ್ತಾನಗಳಲ್ಲಿ).

ಇದು ನಮ್ಮ ದೇಶದ ರಾಷ್ಟ್ರೀಯ ಆಂದೋಲನದಲ್ಲಿ ಮೂಡಿಬಂದ ಒಂದು ಪ್ರಮುಖ ಪ್ರಶ್ನೆ ಕೂಡಾ. ಆದ್ದರಿಂದಲೇ ನಮ್ಮ ಸಂವಿಧಾನ ಕರ್ತರು ಮೀಸಲಾತಿಯ ಅವಕಾಶ ನೀಡಿದರು. ಉತ್ತಮ ಅವಕಾಶ ಹಾಗೂ ಶಿಕ್ಷಣ ಪಡೆದ ಮೇಲ್ಜಾತಿಗಳಿಂದ ತೀವ್ರ ಪೈಪೋಟಿಯಿಂದಾಗಿ ಈ ಜನವಿಭಾಗಗಳು ಸರಕಾರೀ ಉದ್ಯೋಗ ಹಾಗೂ ಶಿಕ್ಷಣ ಸಂಸ್ಥೆಗಳನ್ನು ಪ್ರವೇಶಿಸುವುದೇ ಸಾಧ್ಯವಾಗುವುದಿಲ್ಲವಾದ್ದರಿಂದ ಈ ಮೀಸಲಾತಿ ಅಗತ್ಯ ಎಂದು ಮನಗಾಣಲಾಯಿತು.

ಈ ಮೀಸಲಾತಿಯಿಂದ ಪ್ರಯೋಜನವಾಗಿರುವುದು ಈ ಜನವಿಭಾಗಗಳ ಅಲ್ಪ ಭಾಗವೊಂದಕ್ಕೆ ಮಾತ್ರ ಎಂದು ಕೆಲವರು ತೋರಿಸಿಕೊಡುತ್ತಾ, ಅದನ್ನು ಮೀಸಲಾತಿ ನಿರುಪಯೋಗಿ ಎಂದು ವಾದಿಸಲು ಬಳಸಿಕೊಳ್ಳುತ್ತಾರೆ. ಆದರೆ ವಾಸ್ತವವಾಗಿ ಇದು ಮೀಸಲಾತಿಯ ನಿರರ್ಥಕತೆಯನ್ನು ತೋರಿಸುವುದಿಲ್ಲ. ಬದಲಾಗಿ ಇದರ ಪೂರ್ಣ ಅನುಷ್ಠಾನವಾಗುವಂತೆ ಮಾಡುವಷ್ಟು ಪ್ರಜಾಪ್ರಭುತ್ವ ಆಂದೋಲನ ಬಲಗೊಳ್ಳಬೇಕು ಎಂಬುದನ್ನು ಹೇಳುತ್ತದೆ. ಹಳ್ಳಿಗಳಲ್ಲಿ ಪಾಳೆಯಗಾರಿ ವ್ಯವಸ್ಥೆ ಮುರಿಯುವವರೆಗೆ, ಸಾಮಾಜಿಕ ದಮನ ನಿರ್ಮೂಲನವಾಗುವವರೆಗೆ ಮೀಸಲಾತಿಯ ಅನುಷ್ಠಾನದಲ್ಲಿ ಈ ಮಿತಿ ಮುಂದುವರಿಯುತ್ತದೆ. ಆದ್ದರಿಂದ ಹರಿಜನ-ಗಿರಿಜನರಿಗೆ ಮೀಸಲಾತಿಯನ್ನು ವಿರೋಧಿಸುವುದು ಪೂರ್ಣವಾಗಿ ಅನ್ಯಾಯದ ಸಂಗತಿ. ಇತರ ವಿಭಾಗಗಳ ಸಮಮಟ್ಟಕ್ಕೆ ಬರುವವರೆಗೆ ಈ ಮೀಸಲಾತಿ ಮುಂದುವರಿಯಲೇ ಬೇಕು.

ಇತರ ಹಿಂದುಳಿದ ಜಾತಿಗಳಿಗೆ ಮೀಸಲಾತಿಯ ಪ್ರಶ್ನೆ ಮಾತ್ರ ಇಷ್ಟು ಸರಳವಲ್ಲ. ಯಾಕೆಂದರೆ ಹರಿಜನ-ಗಿರಿಜನರಂತೆ ಈ ಎಲ್ಲಾ 3743 ಒಂದೇ ರೀತಿಯಲ್ಲಿ ಸಾಮಾಜಿಕ ದಮನಕ್ಕೆ ಬಲಿಯಾದ ಜಾತಿಗಳಲ್ಲ. ವಾಸ್ತವವಾಗಿ ಇವುಗಳಲ್ಲಿ ಕೆಲವು ಕೆಲವೆಡೆ ಭೂ ಮಾಲಕ ವರ್ಗಕ್ಕೆ ಸೇರಿದ ಜಾತಿಗಳೂ ಇವೆ. ಅವು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಹಿಂದುಳಿದಿವೆಯಷ್ಟೆ.

> "ಉತ್ಪಾದನಾ ಸಾಧನಗಳ ಮೇಲೆ ತಮ್ಮ ಗುತ್ತೇದಾರಿಕೆಯ ಮೂಲಕ ಮೇಲ್ಜಾತಿಗಳಿಗೆ ತಮ್ಮ ಸ್ವಂತ ಹಿತಾಸಕ್ತಿಗಳ ವಿರುದ್ಧವೇ ಹಿಂದುಳಿದ ವರ್ಗಗಳು ವರ್ತಿಸುವಂತೆ ಬಲಾತ್ಕರಿಸುವುದು ಸಾಧ್ಯವಾಗಿದೆ. ಆದ್ದರಿಂದ ತೀವ್ರ ಭೂಸುಧಾರಣೆಗಳ ಮೂಲಕ ಸದ್ಯದ ಉತ್ಪಾದನಾ ಸಂಬಂಧಗಳ ಯಮ ಹಿಡಿತವನ್ನು ಬದಲಿಸದಿದ್ದರೆ ಪ್ರಬಲ ಮೇಲ್ಜಾತಿಗಳ ಮೇಲೆ ದುರ್ಬಲ ವರ್ಗಗಳ ಹೀನ ಅವಲಂಬನೆ ನಿರಂತರವಾಗಿ ಮುಂದುವರಿಯುತ್ತದೆ"
>
> \- ಮಂಡಲ್ ಆಯೋಗದ ವರದಿ

ಆದ್ದರಿಂದ ಜಾತಿಯ ಆಧಾರವೊಂದರಿಂದಲೇ ಇತರ ಹಿಂದುಳಿದ ಜಾತಿಗಳಿಗೆ ಮೀಸಲಾತಿಯ ಸೌಲಭ್ಯ ವಿಸ್ತರಿಸುವುದು ವಾಸ್ತವತೆಗೆ ಹೊಂದುವ ವಿಚಾರವಲ್ಲ. ಆದ್ದರಿಂದ ಆರ್ಥಿಕ ಆಧಾರವನ್ನೂ ಮೀಸಲಾತಿ ನಿರ್ಣಯಿಸುವಲ್ಲಿ ಪರಿಶೀಲಿಸಬೇಕು. ಅಂದರೆ ಒಂದು ನಿರ್ದಿಷ್ಟ ಜಾತಿಯ ಹಿಂದುಳಿಕೆ, ಅಥವಾ ಆ ಜಾತಿಯಲ್ಲಿ ಒಂದು ನಿರ್ದಿಷ್ಟ ಕುಟುಂಬದ ಹಿಂದುಳಿಕೆ ನಿರ್ಣಯಿಸಲು ಆರ್ಥಿಕ ಅಳತೆಗೋಲು ಕೂಡಾ ಅಗತ್ಯ. ಇದರಿಂದ ಮೀಸಲಾತಿಯ ಸೌಲಭ್ಯ ಈ ಜಾತಿಗಳ ಅರ್ಹರಿಗೆ ಮಾತ್ರ ಸಿಗುವಂತಾಗುತ್ತದೆ.

ಒಟ್ಟಾರೆಯಾಗಿ ಮೀಸಲಾತಿಯ ಪ್ರಶ್ನೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸುವಾಗ ಈ ಕೆಳಗಿನ ಅಂಶಗಳನ್ನು ಗುರುತಿಸಬೇಕು.

ಮೊದಲನೆಯದಾಗಿ ಹರಿಜನಗಿರಿಜನರು ಇತರರ ಸಮಮಟ್ಟಕ್ಕೆ ಬರುವವರೆಗೆ ಅವರಿಗೆ ಮೀಸಲಾತಿ ಯಾವುದೇ ಇತರ ಶರತ್ತುಗಳಿಲ್ಲದೆ ಮುಂದುವರಿಯುವುದೆಂದು ದೃಢಪಡಿಸಬೇಕು. ಈ ಜನ ವಿಭಾಗಗಳಿಗೆ ಒಂದು ಕನಿಷ್ಟ ರಕ್ಷಣೆ ನೀಡಲು ಇದು ಅನಿವಾರ್ಯ. ಇದಿಲ್ಲದೆ ಇತರರೊಂದಿಗೆ ಅವರು ಸ್ಪರ್ಧಿಸುವುದು ಸಾಧ್ಯವೇ ಇಲ್ಲ.

ಎರಡನೆಯದಾಗಿ, ಹಿಂದೂ ಸಮಾಜದಲ್ಲಿ ತಮ್ಮ ಹೀನಸ್ಥಿತಿಯಿಂದ ಬೇಸತ್ತು ಇತರ ಧರ್ಮಗಳಿಗೆ ಮತಾಂತರ ಹೊಂದಿದ ಹರಿಜನ-ಗಿರಿಜನರಿಗೂ ಈ ಸೌಲಭ್ಯವನ್ನು ವಿಸ್ತರಿಸಬೇಕು. ಈಗಿರುವಂತೆ ಹಿಂದೂ ಸಮಾಜದೊಳಗೆ ಉಳಿದಿರುವ ಹರಿಜನ-ಗಿರಿಜನರಿಗೆ ಮಾತ್ರ ಈ ಸೌಲಭ್ಯ ನೀಡುವುದು ಅನ್ಯಾಯದ, ವಾಸ್ತವತೆಗೆ ಕುರುಡಾಗಿರುವ ಸಂಗತಿ. ಉದಾಹರಣೆಗೆ, ಬೌದ್ಧರಾದ ಕೂಡಲೇ ಹರಿಜನ-ಗಿರಿಜನರ ಸ್ಥಾನಮಾನ ವ್ಯತ್ಯಾಸಗೊಳ್ಳುವುದಿಲ್ಲ.

ಮೂರನೆಯದಾಗಿ, ಇತರ ಹಿಂದುಳಿದ ಜಾತಿಗಳಲ್ಲಿ ನಿಜವಾಗಿ ಹಿಂದುಳಿದವರನ್ನು ಗುರುತಿಸಲು ಕ್ರಮ ಕೈಗೊಳ್ಳಬೇಕು. ಒಂದಂಶದ ಧೋರಣೆ ಇಲ್ಲಿ ಸೂಕ್ತವಲ್ಲ. ಆರ್ಥಿಕ ಅಳತೆ ಗೋಲು ಕೂಡಾ ಅಗತ್ಯ. ಕಾಲಕಾಲಕ್ಕೆ ಇದರ ಮರುಪರಿಶೀಲನೆ ಕೂಡಾ ನಡೆಯುತ್ತಿರಬೇಕು. ಇಸ್ಲಾಮ್ ಮತ ಅನುಸರಿಸುತ್ತಿರುವ ಕೆಲವು ಕೋಮುಗಳನ್ನು ಕೂಡಾ ಈ ಇತರ ಹಿಂದುಳಿದ ಜಾತಿಗಳ ಗುಂಪಿಗೆ ಸೇರಿಸುವುದು ಅಗತ್ಯ. ಯಾಕೆಂದರೆ ಇದಕ್ಕೆ ಅಸ್ಪೃಶ್ಯತೆಯ ಕಳಂಕವೊಂದು ಇಲ್ಲವಷ್ಟೆ. ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಇವು ಹಿಂದುಳಿದಿವೆ.

ನಾಲ್ಕನೆಯದಾಗಿ, ಸಮಾಜದ ಎಲ್ಲಾ ಕೆಡಕುಗಳಿಗೆ ಮೀಸಲಾತಿ ಒಂದು ರಾಮಬಾಣವಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಲೇಬೇಕು. ಹಿಂದಿನ ಆಳುವ ಪಕ್ಷ ವಂಚಿತ ಜನಸಮೂಹಗಳನ್ನು ಎಡ-ಪ್ರಜಾಪ್ರಭುತ್ವ ಆಂದೋಲನದಿಂದ ದೂರ ವಿಟ್ಟು ಕೇವಲ ತನ್ನ ಮೇಲಷ್ಟೆ ಅವಲಂಬಿಸಿರಬೇಕೆಂದು ಮೀಸಲಾತಿಯನ್ನು ಸಮಯ ಸಾಧಕತನದಿಂದ ಬಳಸಿತು ಎಂಬ ಸಂಗತಿಯನ್ನು ಬದಿಗಿಟ್ಟು ಮೀಸಲಾತಿ ಕೇವಲ ಒಂದು ಸೀಮಿತ ಹಾಗೂ ತಾತ್ಕಾಲಿಕ ಕ್ರಮ ಎಂಬ ಬಗ್ಗೆ ನಮಗೆ ಸ್ಪಷ್ಟತೆಯಿರಬೇಕು. ತೀವ್ರ ಭೂಸುಧಾರಣೆಗೆ ಸೂಕ್ತ ಪರ್ಯಾಯ ಬೇರೊಂದಿಲ್ಲ. ಇದರಿಂದ ಮಾತ್ರವೇ ಗ್ರಾಮೀಣ ಜೀವನದ ಮೇಲೆ ಪಾಳೆಯಗಾರೀ ಪ್ರಾಬಲ್ಯವನ್ನು ಅಂತ್ಯಗೊಳಿಸಿ ಕೋಟಿ ಗಟ್ಟಲೆ ಗ್ರಾಮೀಣ ಬಡಜನರಿಗೆ ಒಂದು ಬಾಳಿಕೆಯ ಆಸ್ತಿ ಒದಗಿಸಿ ಸಮಾಜದಲ್ಲಿ ಒಂದು ಘನತೆಯ ಸ್ಥಾನ ನೀಡಲು ಸಾಧ್ಯ. ಗ್ರಾಮೀಣ ಭಾರತವನ್ನು ಬದಲಿಸಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಮಾತ್ರವೇ ಸಾಧ್ಯ. ಆದ್ದರಿಂದ ಈ ಆಂದೋಲನ ಸೇರಿದಾಗ ಮಾತ್ರವೇ ತಮ್ಮ ಭವಿಷ್ಯ ಭದ್ರ ಎಂಬುದನ್ನು ಹರಿಜನ-ಗಿರಿಜನರು ಸ್ಪಷ್ಟವಾಗಿ ಮನಗಾಣಬೇಕು.

ಪಶ್ಚಿಮ ಬಂಗಾಳದಲ್ಲಿ ಸಾಮಾಜಿಕ ಅತ್ಯಾಚಾರಗಳು ಸುಮಾರಾಗಿ ಇಲ್ಲದಿರುವುದು ಕೇವಲ ಆಕಸ್ಮಿಕವಲ್ಲ. ಅದರ ಗುಟ್ಟು ಅಡಗಿರುವುದು ಎಡರಂಗ ಆಳ್ವಿಕೆಯಡಿ ಜಾರಿಗೆ ಬಂದ ಭೂಸುಧಾರಣೆಗಳಲ್ಲಿ. ಭೂಸುಧಾರಣೆಗೆ, ಜತೆಗೆ ಕೈಗಾರಿಕಾ ಮತ್ತು ಇತರ ಧೋರಣೆಗಳಲ್ಲಿ ಜನಪರ ಬದಲಾವಣೆ ಉದ್ಯೋಗಾವಕಾಶ ನಿರ್ಮಿಸುವುದರಲ್ಲಿ ಬಹಳ ನೆರವಾಗಬಲ್ಲದು. ಇಂತಹ ಉದ್ಯೋಗಾವಕಾಶಗಳ ಅಭಾವವೇ ಈಗಿನ ಹಾಗೂ ಹಿಂದಿನ ಮೀಸಲಾತಿ ವಿರೋಧಿ ಚಳುವಳಿಗಳ ಮೂಲ.

ಯುವಜನರು, ವಿದ್ಯಾರ್ಥಿಗಳಲ್ಲಿರುವ ಪ್ರಾಮಾಣಿಕ ಅಸಂತೃಪ್ತಿಯನ್ನು ಬಳಸಿಕೊಂಡು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಕೆಲವು ರಾಜಕೀಯ ಶಕ್ತಿಗಳು, ಪಕ್ಷಗಳು ಪ್ರಯತ್ನಿಸುತ್ತಿವೆ. ಈಗಿನ ಮೀಸಲಾತಿ ವಿರೋಧಿ ಚಳುವಳಿ ಇಂತಹ ಒಂದು ದೇಶವಿರೋಧಿ ಕ್ರಮದ ಒಂದು ರೂಪ ಆದ್ದರಿಂದಲೇ ಮೀಸಲಾತಿಗೆ ಬೆಂಬಲ ಸೂಚಿಸುತ್ತಾ, ಮೀಸಲಾತಿ ವಿರೋಧಿ ಚಳವಳಿಗಳ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾ ವಿದ್ಯಾರ್ಥಿಗಳು ಪಟ್ಟಭದ್ರ ರಾಜಕೀಯ ಹಿತಾಸಕ್ತಿಗಳು ಎತ್ತಿರುವ ಛಿದ್ರಕಾರಿ ಘೋಷಣೆಗಳಿಗೆ ಮಾರುಹೋಗಬಾರದೆಂದು ವಿನಂತಿಸಿಕೊಳ್ಳುತ್ತೇವೆ. ತಾವು ಎದುರಿಸುತ್ತಿರುವ ಸಮಸ್ಯೆಗಳ ಮೂಲ ಮೀಸಲಾತಿಯ ನೀತಿಯಲ್ಲ, ಸರಕಾರದ ಬಳಿಯಿರುವ ಸೀಮಿತ ಉದ್ಯೋಗವಕಾಶಗಳು ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸಲಾರದು ಎಂಬುದನ್ನು ವಿದ್ಯಾರ್ಥಿಗಳು ಅರಿಯಬೇಕು. ಅದೇ ವೇಳೆಗೆ ಮೀಸಲಾತಿಯೊಂದರಿಂದಲೇ ಎಲ್ಲಾ ಸಮಸ್ಯೆಗಳು ಪರಿಹಾರವಾಗುವುದಿಲ್ಲ ಎಂಬುದನ್ನು ಹರಿಜನ, ಗಿರಿಜನರು ಮತ್ತು ಇತರ ಹಿಂದುಳಿದ ಜಾತಿಗಳ ವಿದ್ಯಾರ್ಥಿಗಳು ಅರಿತುಕೊಳ್ಳಬೇಕು.


ನಿರುದ್ಯೋಗ, ಸಾಮಾಜಿಕ ಅಸಮಾನತೆಗಳು ಹಾಗೂ ಅನ್ಯಾಯಗಳ ನಿವಾರಣೆಗೆ ನಮ್ಮ ಸಮಾಜದ ಸಾಮಾಜಿಕ-ಆರ್ಥಿಕ ಸಂರಚನೆಯಲ್ಲಿ ಮೂಲಭೂತ ಬದಲಾವಣೆ ಅಗತ್ಯ. ಇಂತಹ ಬದಲಾವಣೆಯತ್ತ ಸಾಗಲು ಎಲ್ಲಾ ಜನವಿಭಾಗಗಳ, ಕೋಮುಗಳ ಐಕ್ಯ ಪ್ರಯತ್ನ, ಪ್ರಜಾಸತ್ತಾತ್ಮಕ ಐಕ್ಯತೆ ಅಗತ್ಯ. ನಮ್ಮ ಸಮಾಜದ ಸಾಮಾಜಿಕ ಹಾಗೂ ಆರ್ಥಿಕವಾಗಿ ದುರ್ಬಲವಾಗಿರುವ ವಿಭಾಗಗಳಿಗೆ ಪೂರ್ಣ ರಕ್ಷಣೆಯ ಭರವಸೆ ನೀಡುತ್ತಾ ಈ ಐಕ್ಯತೆಯನ್ನು ಬಲಪಡಿಸಬೇಕೆಂದು ನಾವು ಇನ್ನೊಮ್ಮೆ ಎಲ್ಲಾ ಜನ ವಿಭಾಗಗಳನ್ನು ವಿನಂತಿಸಿಕೊಳ್ಳುತ್ತೇವೆ. •

> ಮೂರು ದಶಕಗಳ ನಂತರವೂ ಉನ್ನತ ಸರಕಾರೀ ಹುದ್ದೆಗಳು ಮೇಲ್ಜಾತಿಗಳ ಹಿಡಿತದಲ್ಲೇ ಇವೆ. ಉದಾಹರಣೆಗೆ, ಉತ್ತರಪ್ರದೇಶದಲ್ಲಿ 1980ರಲ್ಲಿ ಸುಮಾರು 70 ಶೇಕಡಾ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳು ಮೇಲ್ಜಾತಿಗಳಿಗೆ ಸೇರಿದವರಾಗಿದ್ದರು. ಪ್ರಾಂತೀಯ ಅಧಿಕಾರಿಗಳಲ್ಲೂ ಅವರ ಪಾಲು 52 ಶೇಕಡಾ ತದ್ವಿರುದ್ಧವಾಗಿ 18% ಮೀಸಲಾತಿಯಿದ್ದರೂ 1ನೇ ಮತ್ತು 2 ನೇ ದರ್ಜೆಯ ಅಧಿಕಾರಿಗಳಲ್ಲಿ ಹರಿಜನ-ಗಿರಿಜನರ ಸಂಖ್ಯೆ ಕ್ರಮವಾಗಿ 5.8 ಮತ್ತು 6.2 ಶೇಕಡಾ ಇತರ ಹಿಂದುಳಿದ ಜಾತಿಗಳ ಸ್ಥಿತಿಯೂ ಹೀಗೆ ಇತ್ತು. ಈ ಹಿನ್ನೆಲೆಯಲ್ಲಿ ರಾಮನರೇಶ್ ಯಾದವ್ ನೇತೃತ್ವದ ಜನತಾ ಸರ್ಕಾರ ಇತರ ಹಿಂದುಳಿದ ಜಾತಿಗಳಿಗೆ 50 ಶೇಕಡಾ ಮೀಸಲಾತಿ ನಿರ್ಣಯಿಸಿತು.

> ಮೀಸಲಾತಿಯ ಪ್ರಯೋಜನ ಹರಿಜನ ಗಿರಿಜನರಲ್ಲಿ ಕೆಲವರಿಗಷ್ಟೇ ದೊರಕಿದೆಯೆಂಬ ಕಾರಣಕ್ಕಾಗಿ ಮೀಸಲಾತಿ ನಿರರ್ಥಕ ಎಂದು ವಾದಿಸುವುದು ತಪ್ಪು, ಬದಲಾಗಿ ಇದು ಪೂರ್ಣವಾಗಿ ಪರಿಣಾಮಕಾರಿಯಾಗಿ ಜಾರಿಗೊಳ್ಳುವಂತೆ ಮಾಡಲು ಪ್ರಜಾಪ್ರಭುತ್ವ ಆಂದೋಲನ ಬಲಗೊಳ್ಳಬೇಕಾಗಿದೆ ಎಂಬುದನ್ನು ಇದು ತೋರಿಸುತ್ತದಷ್ಟೆ. ಏಕೆಂದರೆ ಹಳ್ಳಿಗಳಲ್ಲಿ ಹಳೆಯ ಪಾಳೆಯಗಾರಿ ವ್ಯವಸ್ಥೆ ಮುರಿದು ಹಾಕುವವರೆಗೆ ಈ ದೌರ್ಬಲ್ಯ ನಿವಾರಣೆ ಸಾಧ್ಯವಿಲ್ಲ.

# "ಮೊಣಕಾಲೂರಿ ಜೀವಿಸುವುದಕ್ಕಿಂತ ಕಾಲಮೇಲೆ ನಿಂತು ಸಾಯುವುದು ಲೇಸು"

## 'ಲಾ ಪಾಸಾ ನಾರಿಯ'ಗೆ ಶ್ರದ್ಧಾಂಜಲಿ



ಈ ಶಬ್ದಗಳು 30-40ರ ದಶಕಗಳಲ್ಲಿ ಫ್ಯಾಸಿಸ್ಟ್ - ವಿರೋಧಿ ಸ್ವಾತಂತ್ರ ಪ್ರಿಯರ ರಣಕಹಳೆಯಾಯಿತು. ಈ ಶಬ್ದಗಳನ್ನಾಡಿದ್ದು ಜಗತ್ತಿನಾದ್ಯಂತ ಫ್ಯಾಸಿಸ್ಟ್ - ವಿರೋಧಿ ಹೋರಾಟ ಮೊದಲ ಹಂತವಾದ ಸ್ಪಾನಿಷ್ ಅಂತರ್ಯುದ್ಧದ ಸಂದರ್ಭದಲ್ಲಿ. ಇದನ್ನಾಡಿದವರು ಆಗಿನ ಸ್ಪಾನಿಷ್ ಕಮ್ಯುನಿಸ್ಟ್ ಪಕ್ಷದ ಜನಪ್ರಿಯ ನಾಯಕಿ ದೊಲೊರೆಸ್ ಇಬಾರ್ರುರಿ ಇವರು ತಮ್ಮ 93ವರ್ಷಗಳ ತುಂಬು ಕ್ರಾಂತಿಕಾರಿ ಜೀವನದ ನಂತರ ಸ್ಪೇನಿನ ಮ್ಯಾಡ್ರಿಡ್‌ನಲ್ಲಿ ಆಸ್ಪತ್ರೆಯೊಂದರಲ್ಲಿ ನಿಧನರಾದರು. ಇವರೊಂದಿಗೆ ಕೊನೆ ಗೊಳ್ಳುತ್ತದೆ ಅಮೋಘ ಕಮ್ಯುನಿಸ್ಟ್ ಕ್ರಾಂತಿ ಕಾರಿ ಚಳುವಳಿಯ ಆದ್ಯ ಪ್ರವರ್ತಕ ರಲ್ಲೊಬ್ಬರ ಜೀವನ. ಬರ್ಬರ ಫಾಸಿಸ್ಟ್ ದಮನವನ್ನು ಎದುರಿಸಿ ಹೋರಾಡಿದ ಕಮ್ಯುನಿಸ್ಟರ ಪೀಳಿಗೆಯೊಂದು.

ಕಳೆದ ಶತಮಾನದಲ್ಲಿ 1895ಡಿಸೆಂಬರ್ 5ರಂದು ಸ್ಪೇನಿನ ಗಲ್ಲಾತ್ರ ಎಂಬಲ್ಲಿ, ಬಡ ಗಣಿಕಾರ್ಮಿಕ ಕುಟುಂಬದಲ್ಲಿ ಹುಟ್ಟಿದ ಕಾಮ್ರೇಡ್ ದೊಲೊರೆಸ್ ಅತ್ಯಂತ ಪ್ರಸಿದ್ಧ ಕಮ್ಯುನಿಸ್ಟ್ ನಾಯಕಿಯಾಗಿ ಬೆಳೆದ ಕಥೆ ಅತ್ಯಪೂರ್ವ ವೀರಗಾಥೆ. ಸ್ವತಃ ಕಾರ್ಮಿಕ ಳಾಗಿ ದುಡಿದು ಅತ್ಯಂತ ಕಿರಿಯ ವಯಸ್ಸಿನಲ್ಲೇ ಕಾರ್ಮಿಕ ಚಳುವಳಿಗೆ ಧುಮುಕಿ, ದೊಲೊರೆಸ್ 1917ರಲ್ಲೇ ಸ್ಪಾನಿಷ್ ಸಮಾಜವಾದಿ ಪಕ್ಷ ಸೇರಿದರು. ಸೂಕ್ಷ್ಮಮತಿಯ ಮತ್ತು ಅಧ್ಯಯನದಲ್ಲಿ ಆಸಕ್ತಿ ಇದ್ದ ಅವರು ಮಾರ್ಕ್ಸ್‌ವಾದದ ಕಡೆಗೆ ಶೀಘ್ರವೇ ಆಕರ್ಷಿತರಾದರು. 1920ರಲ್ಲಿ ಅದು ಸ್ಥಾಪಿತವಾದಾಗಲೇ ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. ಅಂದಿನಿಂದ ಈ ವರ್ಷದ ನವೆಂಬರ್ ರವರೆಗಿನ ಅವರ ತುಂಬು ಕ್ರಾಂತಿಕಾರಿ ಜೀವನ ಸಾಟಿಇಲ್ಲದ್ದು. ಅವರ ಸತತ ಅಭ್ಯಾಸ, ಸಂಘಟನಾ ಚಾತುರ್ಯ, ಹೋರಾಟಗಳಲ್ಲಿ ಪ್ರತ್ಯಕ್ಷ ನಾಯಕತ್ವ (ಮುಖ್ಯವಾಗಿ ಗಣಿಕಾರ್ಮಿಕರ ಹೋರಾಟ ಗಳಲ್ಲಿ), ಕಮ್ಯುನಿಸ್ಟ್ ಧೋರಣೆಗಳನ್ನು ಪ್ರಚಾರ ಮಾಡುವಲ್ಲಿ ಅವರ ಶ್ರಮ ದಿಂದಾಗಿ ಅವರು 1930ರಲ್ಲೇ ಕೇಂದ್ರ ಸಮಿತಿಗೆ ಚುನಾಯಿತರಾದರು.

ಹೆಚ್ಚುತ್ತಾ ಹೋದ ರಾಜಕೀಯ ಕೆಲಸದ ಜತೆ, ಅವರು ಕಡುಬಡತನದ ಜತೆ ಸಹ ಹೋರಾಡಬೇಕಾಯಿತು. ಅವರ ಒಬ್ಬಳೇ ಮಗಳು ಆಹಾರದ ಅಭಾವ ದಿಂದ ಸತ್ತಳು. ಆಕೆ ಸತ್ತಾಗ, ಆವಳ ಶವ ಪೆಟ್ಟಿಗೆಗೂ ದೊಲೊರೆಸ್ ಸಾಲ ಮಾಡ ಬೇಕಾಗಿದ್ದ ದಾರುಣ ಪರಿಸ್ಥಿತಿಯಿತ್ತು.

1930ರಲ್ಲಿ ರಾಜತನ, ರದ್ದಾದಾಗ, ಕಮ್ಯುನಿಸ್ಟ್ ಚಳುವಳಿ ರಭಸದಿಂದ ಬೆಳೆಯಿತು. ಭಾರಿದಮನಕಾರಿ ಪರಿಸ್ಥಿತಿ ಯಲ್ಲಿ ದೊಡ್ಡ ಮುಷ್ಕರ ಹೋರಾಟಗಳ ನಾಯಕತ್ವ ವಹಿಸಿ, ಗಂಟೆಗಟ್ಟಲೆ ಜನ ಆಸಕ್ತಿಯಿಂದ ಕೇಳುವಂತೆ ಮಾತಾಡಬಲ್ಲ ಅದ್ಭುತ ಭಾಷಣಕಾರ್ತಿಯಾಗಿ, ಪಕ್ಷದ ಪತ್ರಿಕೆಯ ಸಂಪಾದಕೀಯ ಜವಾಬ್ದಾರಿ ಹೊತ್ತು ಆಕೆ ಪಕ್ಷದ ಪ್ರಮುಖ ನಾಯಕಿ ಯಾಗಿ ಮುಂದೆ ಬಂದರು.

ಈ ಹೋರಾಟಗಳಲ್ಲಿ ಬಂಧಿಸಲ್ಪಟ್ಟು, ಚಿತ್ರಹಿಂಸೆಗೊಳಗಾದಾಗ ಉಳಿದ ಕಮ್ಯು ನಿಸ್ಟ್ ಕೈದಿಗಳೊಂದಿಗೆ ಸುಧಾರಣೆಗಳಿಗಾಗಿ ಉಪವಾಸ ಸತ್ಯಾಗ್ರಹ ಹೂಡಿ ಭಾಗಶಃಸಫಲ ರಾದರು. ಜೈಲಿನಿಂದ ಬಿಡುಗಡೆ ಯಾದ ನಂತರ ಯುದ್ಧ ವಿರುದ್ಧ ಮಹಿಳಾ' ಚಳುವಳಿಯನ್ನು ಸಂಘಟಿಸಿದರು.

ಆಕೆ "ಯುದ್ಧ ಮತ್ತು ಫ್ಯಾಸಿಸಂನ ವಿರುದ್ಧ ಮಹಿಳೆಯರು' ಪ್ರಥಮ ಅಂತರ್ರಾಷ್ಟ್ರೀಯ ಅಧಿವೇಶನದಲ್ಲಿ (1934) ಭಾಗವಹಿಸಿದರು.

1935ರಲ್ಲಿ ಜಾರ್ಜ್ ದಿಮಿತ್ರೋವ್‌ರ ಫ್ಯಾಸಿಸ್ಟ್ - ವಿರೋಧಿ ಜನಪ್ರಿಯ ರಂಗ ವನ್ನು ಕಟ್ಟುವ ಕರ್ತವ್ಯ ಅಂಗೀಕರಿಸಿದ, 7ನೇ ಕಮ್ಯುನಿಸ್ಟ್ ಅಂತರಾಷ್ಟ್ರೀಯ ಮಹಾಧಿವೇಶನದಲೂ ಆಕೆ ಭಾಗವಹಿಸಿ ದರು. ಅವರ ನಾಯಕತ್ವದಲ್ಲಿ ಸ್ಪೇನ್‌ನಲ್ಲಿ ಮೊದಲ ಬಾರಿಗೆ ಇಂತಹ ಒಂದು ಜನಪ್ರಿಯರಂಗ ಅಸ್ತಿತ್ವಕ್ಕೆ ಬಂದದ್ದು ಮಾತ್ರವಲ್ಲ, ಅದು ಚುನಾವಣೆಗಳನ್ನು ಗೆದ್ದು ಅಧಿಕಾರಕ್ಕೂ ಬಂದಿತು. ರಂಗದಲ್ಲಿ ಕಮ್ಯುನಿಸ್ಟ್ ಪಕ್ಷದ ಜತೆಗೆ ಸೋಷಲಿಸ್ಟ್ ಪಕ್ಷ, ರಿಪಬ್ಲಿಕನ್ ಪಕ್ಷಗಳು ಇದ್ದವು. ಇದು ಒಮ್ಮೆಗೆ ಆಗಲೇ ಯುರೋಪಿನಲ್ಲಿ ಬಲಗೊಳ್ಳುತ್ತಿದ್ದ ಫ್ಯಾಸಿಸ್ಟ್ ಶಕ್ತಿಗಳನ್ನು ಹಾಗು ಬೂರ್ಜ್ವಾ ಶಕ್ತಿಗಳ ಜಂಘಾಬಲ ವನ್ನಡಗಿಸಿತು. ದೊಲೆರೆಸ್ ಕುಮ್ಯುನಿಸ್ಟ್ ಪಕ್ಷದ ಪಾರ್ಲಿಮೆಂಟ್ ಸದಸ್ಯಳಾಗಿ ಚುನಾಯಿತರಾದರು. ಆದರೆ ಸ್ಪಾನಿಷ್ ಗಣತಂತ್ರದ ವಿರುದ್ಧ ಆದರದ್ದೇ ಸೈನ್ಯದ ಜನರಲ್ ಫ್ರಾಂಕೋ ಪಿತೂರಿ, ಪ್ರತಿಕ್ರಾಂತಿಗೆ ಅಣಿಯಾಯಿತು. ಈ ಫ್ಯಾಸಿಸ್ಟ್ ಸೈನ್ಯಗಳು ಸ್ಪಾನಿಷ್ ಕ್ರಾಂತಿ ಯನ್ನು ಸೋಲಿಸಿದವು.

### 'ಅವರನ್ನುಹೋಗಗೊಡೆವು'

ಸ್ಪೇನಿನಲ್ಲಿ ನಡೆದ ಫ್ಯಾಸಿಸ್ಟ್ -ವಿರೋಧಿ ಹೋರಾಟ ಆ ಮೇಲೆ ಜಗತಿಕ ಮಟ್ಟದಲ್ಲಿ ನಡೆದ ಹೋರಾಟದ 'ರಿಹರ್ಸಲ್' ನಂತಿತ್ತು. ಈ ಫ್ಯಾಸಿಸ್ಟ್ - ವಿರೋಧಿ ರಕ್ತಸಿಕ್ತ ಹೋರಾಟದಲ್ಲಿ ಕಾಮ್ರೇಡ್ ದೊಲೊರೆಸ್‌ರ ವೀರ ಪಾತ್ರಕ್ಕೆ ಮುಖ್ಯವಾಗಿ ಅತ್ಯಂತ ಪ್ರಸಿದ್ಧರಾದದ್ದು. ಅವರ ಧೈರ್ಯ, ರಾಜಕೀಯ ಜಾಣ್ಮೆ, ಜನಪ್ರಿಯತೆಗೆ - ಈ ಹಂತದಲ್ಲಿ ಪುಟ ವಿಟ್ಟಂತಾಗಿತ್ತು.

ಸ್ಪಾನಿಷ್ ಸರಕಾರದಲ್ಲಿದ ಉಳಿದ ಪಕ್ಷ ಗಳು ಫ್ಯಾಸಿಸ್ಟ್ ಪ್ರತಿಕ್ರಾಂತಿಯ ವಿರು ಹೋರಾಟದಲ್ಲಿ, ದುಮಕಲು ಹಿಂ ಮುಂದೆ ನೋಡುತ್ತಿದ್ದ ಸಂದಭದಲ್ಲಿ ಆ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷ ಣೊಂದರ ತುಣುಕು ಫ್ಯಾನಿಸ್ಟ್-ವಿರೋ ಹೋರಾಟದ ರಣಕಹಳೆಯಾಯಿತ 'ಅವರನ್ನು ಹೋಗಗೊಡೆವು(No pasara ರಿಪಬ್ಲಿಕನ್ ಸರ್ಕಾರಕ್ಕೆ ನಿಷ್ಠವಾದ ಸೈನ್ಯ ಜೊತೆ ಸೇರಿ, ಜನತಾ ಹೋರಾಟಗ ಫ್ಯಾಸಿಸ್ಟ್ ಪಡೆಗಳನ್ನು ಸ್ಪೇನಿನ ಮೂ 'ಹೋಗಗೊಡೆವು' ಎಂಬ ರಣಕಹ ಯಿಂದಾಗಿ ಆಕೆಗೆ 'ಹೋಗಗೊಡ ಮಹಿಳೆ ('ಲಾ ಪಾಸನಾರಿಯ') ಎಂ ಹೆಸರು ಬಂತು. ಇಂದಿಗೂ ಆಕೆ 'ಲ ಪಾಸನಾರಿಯಾ' ಎಂಬ ಹೆಸರಿನ ಸುಪ್ರಸಿದ್ಧರಾಗಿದ್ದಾರೆ. ಪಾರ್ಲಿಮೆಂಟ್‌ನ ರೇಡಿಯೋಗಳಲ್ಲಿ ಆಕೆಯ ಭಾಷಣಗಳ ಲೇಖನಗಳು ಸ್ಪಾನಿಷ್ ಜನತೆಗೆ ವಿದ್ಯು ಸಂಚಾರ ಮಾಡಿದವು, ಅಲ್ಲದೆ ಈ ಪವಿ ಹೋರಾಟದಲ್ಲಿ ಇತರ ದೇಶಗಳ ಫ್ಯಾಸಿಸ ವಿರೋಧಿ ಹೋರಾಟಗಾರರು. ಅಂ ರಾಷ್ಟ್ರೀಯ ಬ್ರಿಗೇಡುಗಳು ಮಾ ಕೊಂಡು ಸ್ಪೇನಿಗೆ ಹೋರಾಡಲು 'ಲ ಪಾಸನಾರಿಯ ಸ್ಫೂರ್ತಿ ಮುಖ್ಯ ಕಾರಣ

ಸ್ಪಾನಿಷ್ ರಿಪಬ್ಲಿಕನ್ ಸೈನ್ಯದ ಸೋಲಿ ನಂತರ ಮಾಸ್ಕೋಗೆ ಗಡಿಪಾರಾಗಬೇಕಾ ಪರಿಸ್ಥಿತಿ ಬಂತು. ಜನರಲ್ ಫ್ರಾಂಕೊ ಮರಣಾನಂತರ ಸ್ಪೇನ್ ಪ್ರಜಾಪ್ರಭುತ್ವ ಹಿಂತಿರುಗುವವರೆಗೆ (1977ರಲ್ಲಿ) ಆ ತನ್ನ ಪ್ರಿಯ ಸ್ಪೇನ್‌ದೇಶದಿಂದ ದೂರವಿ ಬೇಕಾಯಿತು - ಸುಮಾರು 40ವರ್ಷಗ ವರೆಗೆ. 1942ರಲ್ಲಿ ಆಕೆ ಸ್ಪಾನಿಷ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾಯ ದರ್ಶಿಯಾಗಿ ಚುನಾಯಿತರಾದರು.

1977ರಲ್ಲಿ ಸ್ಪೇನಿಗೆ ಮರಳಿ ತ ಅವಿರತ ಕಾರ್ಮಿಕ, ಕಮ್ಯುನಿಸ ಚಳುವಳಿಯ ಕೆಲಸದಲ್ಲಿ ಮಗ್ನರಾದರು.

ಅವರ ವೀರ ಕ್ರಾಂತಿಕಾರಿ ಜೀವನ ಶಾಂತಿ, ಪ್ರಜಾಪ್ರಭುತ್ವ, ಸಮಾಜವಾ ಮತ್ತು ಸ್ವಾತಂತ್ರಕ್ಕಾಗಿ ಹೋರಾಡುತ್ತಿರು ಜಗತ್ತಿನ ಕ್ರಾಂತಿಕಾರಿಗಳಿಗೆಲ್ಲ ಸ್ಫೂ ದಾಯಕವಾಗಿದೆ. ದೊಲೆರೆಸ್ ಇಬಾರ್ರು ನಿಧನ ಹೊಂದಿದ್ದಾರೆ!

ಆದರೆ 'ಲಾ ಪಾಸನಾರಿಯ ಅಮರರಾಗಲಿ!

'ಲಾ ಪಾಸನಾರಿಯಾ' ಚಿರಾಯುವಾಗಲಿ'

## ಜಮ್ಮು-ಕಾಶ್ಮೀರದ ಸನ್ನಿವೇಶ .... ಪುಟ 4ರಿಂದ

ಪ್ರಜ್ಞಾಪೂರ್ವಕವಾಗಿಯೇ ಭಾರತದ ಜನತೆಯೊಂದಿಗೆ ಬೆಸೆದುಕೊಂಡರು. ಆದ್ದರಿಂದ ಭಾರತದಲ್ಲಿ ಅಲ್ಪಸಂಖ್ಯಾತರ ಹೆಸರಿನಲ್ಲಿ ಮಾಡಬಹುದಾದ ಯಾವುದೇ ಮನವಿ ಕಾಶ್ಮೀರದ ಮೇಲೆ ಪ್ರಭಾವ ಬೀರಲಾರದು.

ಹಾಗಾದರೆ ಈಗ ಮಾಡುವುದೇನು? ಈ ಪ್ರಶ್ನೆ ನಮ್ಮ ಮುಂದಿದೆ.

ಮೊದಲನೆಯದಾಗಿ, ಕಾಶ್ಮೀರದಲ್ಲಿ ಜನತೆ ಸುಮಾರಾಗಿ ಪ್ರತ್ಯೇಕತಾವಾದಿಗಳನ್ನು ಬೆಂಬಲಿಸುವುದರಿಂದ ಪರಿಸ್ಥಿತಿ ಸಂಪೂರ್ಣವಾಗಿ ನಮ್ಮ ಕೈಬಿಟ್ಟು ಹೋಗಿದೆ ಎಂದು ಕೆಲವರಿಗೆ ಅನ್ನಿಸಬಹುದು ಆದರೆ ಸ್ಥಿತಿ ಹಾಗಿಲ್ಲ. ಬಹುಪಾಲು ಜನವಿಭಾಗ ಗಳನ್ನು ಪ್ರತ್ಯೇಕತಾವಾದಿ ಶಕ್ತಿಗಳು ದಾರಿತಪ್ಪಿಸಿದ್ದರೂ ರಾಷ್ಟ್ರೀಯ ಐಕ್ಯತೆಗೆ ಬದ್ಧವಾಗಿರುವ ಶಕ್ತಿಗಳು ಇನ್ನೂ ಗಮನಾರ್ಹ ಸಂಖ್ಯೆಯಲ್ಲಿವೆ. ಆದರೆ ರಾಜ್ಯದಲ್ಲಿ ರಾಜಕೀಯ ಶಕ್ತಿಗಳ ನಿಷ್ಕ್ರಿಯತೆಯಿಂದಾಗಿ ಉಗ್ರಗಾಮಿಗಳ ಕರೆಗಳಿಗೆ ಭಯದಿಂದ ತಲೆಬಾಗಬೇಕಾಗಿ ಬಂದಿದೆ. ಧಾರ್ಮಿಕ ಭಾವನೆಗಳಿಗೆ ಮೊರೆಹೊಕ್ಕಿದ್ದರೂ ಪ್ರತ್ಯೇಕತಾವಾದವನ್ನು ಬೆಂಬಲಿಸದ ಕೆಲವು ರಾಜಕೀಯ ಶಕ್ತಿಗಳೂ ಇವೆ.

ಆದ್ದರಿಂದ ಒಂದೊಮ್ಮೆ ಜಮ್ಮು-ಕಾಶ್ಮೀರದ ನಿರ್ವಿವಾದ ಮುಖಂಡ ನಾಗಿದ್ದು ಈಗಲೂ ರಾಜ್ಯದ ಅತಿ ದೊಡ್ಡ ಸಂಘಟನೆಯಾಗಿರುವ ನ್ಯಾಶನಲ್ ಕಾನ್ಫರೆನ್ಸ್, ನಂತರ ಬರುವ ಕಾಂಗ್ರೆಸ್ (ಐ) ಜನತಾದಳದ ಬೆಂಬಲಿಗರು, ಸಿ.ಪಿ.ಐ. (ಎಂ), ಸಿ.ಪಿ.ಐ. ಹೊಂದಿರುವ ಸ್ವಲ್ಪ ಪ್ರಭಾವ ಈ ಎಲ್ಲಾ ಪ್ರತ್ಯೇಕತಾವಾದ ವಿರೋಧಿ ಶಕ್ತಿಗಳನ್ನು ಅಣಿನೆರೆಸಿ ಸಕ್ರಿಯ ಗೊಳಿಸಬೇಕು.

ಎರಡನೆಯದಾಗಿ ನಿರುದ್ಯೋಗ ಮತ್ತು ಬಡತನದ ತುರ್ತು ಸಮಸ್ಯೆ ಗಳನ್ನು ಎದುರಿಸಲು ಸರ್ವಪ್ರಯತ್ನ ನಡೆಸಬೇಕು. ವಿಶೇಷ ಯೋಜನೆಗಳನ್ನು ರೂಪಿಸಬೇಕು. ಹೀಗೆ ಮಾಡುವಾಗ ಕಾಶ್ಮೀರದ ಘಟನೆಗಳು ಜಮ್ಮು ಮತ್ತು ಲಡಾಕಿನಲ್ಲಿ ಪ್ರತಿಕ್ರಿಯೆ ಪಡೆಯುತ್ತವೆ. ಪ್ರತಿಗಾಮಿಗಳು ಇದರ ದುರ್ಲಾಭ ಪಡೆಯದಂತೆ ಜಾಗರೂಕತೆ ವಹಿಸ ಬೇಕಾದುದರ ಅಗತ್ಯವನ್ನು ಗಮನ ದಲ್ಲಿಟ್ಟುಕೊಳ್ಳಬೇಕು.

ಮೂರನೆಯದಾಗಿ, ರಾಜ್ಯದ ಆಡಳಿತವನ್ನು ಆಮೂಲಾಗ್ರವಾಗಿ ಸರಿಪಡಿಸ ಬೇಕು. ಒಂದೆಡೆ ರಾಷ್ಟ್ರೀಯ ಐಕ್ಯತೆಗೆ ಸವಾಲು ಹಾಕುವ ಶಕ್ತಿಗಳನ್ನು ದೃಢವಾಗಿ ಎದುರಿಸುತ್ತಾ ಇನ್ನೊಂದೆಡೆ ಜನತೆಯಲ್ಲಿ ವಿಶ್ವಾಸ ಮೂಡಿಸಬಲ್ಲ. ಅವರ ಪ್ರಾಮಾಣಿಕ ದೂರುಗಳಿಗೆ ಸ್ಪಂದಿಸುವ ಆಡಳಿತ ಏರ್ಪಡಬೇಕು.

ಅಂತಿಮವಾಗಿ, ಆಡಳಿತ ನಿರ್ವಹಿಸ ಲಾಗದ ಫಾರುಕ್ ಸರಕಾರದ ವಜಾ ಕಾಶ್ಮೀರ ಸ್ಥಿತಿ ಎದುರಿಸಲು ಅತ್ಯಗತ್ಯ ಎಂಬ ಭಾವನೆಯ ಬಗ್ಗೆ. ಇದು ಜನತೆ ಮತ್ತು ಸರಕಾರದ ನಡುವೆ ಇದ್ದ ಅಲ್ಪ ಸ್ವಲ್ಪ ಸಂಬಂಧವನ್ನು ಕೂಡಾ ಮುರಿಯ ಬಹುದಾದ ಕ್ರಮ. ನ್ಯಾಶನಲ್ ಕಾನ್ಫರೆನ್ಸ್‌ನ ಕಾರ್ಯಕರ್ತರನ್ನು ಮುಖ್ಯ ಪ್ರವಾಹದಿಂದ ದೂರಸರಿಸಿ, ಪ್ರತ್ಯೇಕತಾವಾದಿಗಳ ಕೈಗಳನ್ನು ಮತ್ತಷ್ಟು ಬಲಪಡಿಸುವ ಕ್ರಮ. ಈಗಲೂ ನ್ಯಾಷನಲ್ ಕಾನ್ಫರೆನ್ಸ್ ಕಣಿವೆಯ ಅತ್ಯಂತ ದೊಡ್ಡ ಸಂಘಟಿತ ಶಕ್ತಿ. ಕಾಶ್ಮೀರ ಪರಿಸ್ಥಿತಿಯನ್ನು ಕೇಂದ್ರದ ಒಂದು ರಾಜಕೀಯ ಪಕ್ಷದ ಸಂಕುಚಿತ ರಾಜಕೀಯ ಉದ್ದೇಶಕ್ಕೆ ಬಳಸಲು ಪ್ರಯತ್ನಿಸಬಾರದು.

ರಾಷ್ಟ್ರೀಯ ಐಕ್ಯತೆಯ ಪರ, ಪ್ರತ್ಯೇಕತಾವಾದದ ವಿರುದ್ಧ ಯಾರಿದ್ದಾರೆ, ಈ ಶಕ್ತಿಗಳ ಪರ ಯಾರಿದ್ದಾರೆ. ಇವೆರಡರ ನಡುವೆ ಒಂದು ಸ್ಪಷ್ಟ ರೇಖೆ ಎಳೆಯ ಬೇಕು. ಇತರ ಭಿನ್ನಾಭಿಪ್ರಾಯಗಳನ್ನು ನಂತರ ಪರಿಹರಿಸಿಕೊಳ್ಳಬಹುದು. ರಾಷ್ಟ್ರೀಯ ಐಕ್ಯತೆ, ದೇಶಪ್ರೇಮ ಮತ್ತು ಜಾತ್ಯತೀತ ಮೌಲ್ಯಗಳ ವ್ಯಕ್ತಿಗಳು ಈಗಲೂ ಇದ್ದಾರೆ.

ಆದ್ದರಿಂದ ಜಮ್ಮು ಕಾಶ್ಮೀರದಲ್ಲಿ ಎಲ್ಲವೂ ಕಳೆದುಹೋಗಿದೆ ಎಂಬ ಹತಾಶೆಗೆ ಅಗತ್ಯವಿಲ್ಲ. ಪರಿಸ್ಥಿತಿಗೆ ಒಂದು ಸಕಾರಾತ್ಮಕ ತಿರುವು ಕೊಡುವುದು ಸಾಧ್ಯ. ಅದು ಫಲಕಾರಿಯಾಗಲು ಸಮಯ ತಗಲಬಹುದಷ್ಟೆ.

ಕಾಶ್ಮೀರಕ್ಕೆ ಶಾಂತಿ ತರಲು ಮುಖ್ಯ ಮಂತ್ರಿ ಪದವಿ ತ್ಯಜಿಸಿದಂತಹ ಮಿರ್ ಕಾಸಿಂ ರಂತಹ ವ್ಯಕ್ತಿಗಳು, ಹಿಂದೆ ಡೆಮಾಕ್ರೆಡಿಕ್ ನ್ಯಾಷನಲ್ ಕಾನ್ಫರೆನ್ಸ್‌ಗೆ ಸೇರಿದ್ದ ಈಗ ವಿವಿಧ ರಾಜಕೀಯ ಪಕ್ಷಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತರು ಸಾಕಷ್ಟು ಸಂಖ್ಯೆಯಲ್ಲಿ ದ್ದಾರೆ. ಇವರು ಈಗಲೂ ಕೂಡಾ ಅತ್ಯಂತ ಪ್ರಜಾಪ್ರಭುತ್ವವಾದಿ ಕಾರ್ಯಕರ್ತರು ಇವರನ್ನು ಸಕ್ರಿಯಗೊಳಿಸಬೇಕು, ಉತ್ಸಾಹ ತುಂಬಬೇಕು.

ದೇಶದ ಎಲ್ಲಾ ದೇಶಪ್ರೇಮಿ, ಪ್ರಜಾಪ್ರಭುತ್ವವಾದಿ ಶಕ್ತಿಗಳು ಕಾಶ್ಮೀರ ಸಮಸ್ಯೆಯನ್ನು ಒಂದು ರಾಷ್ಟ್ರೀಯ ಪ್ರಶ್ನೆಯಾಗಿ ಕಾಣಬೇಕು. ಒಂದು ರಾಷ್ಟ್ರೀಯ ಸರ್ವಸಮ್ಮತಿ ವಿಕಾಸಗೊಳಿಸ ಬೇಕು. ಕಾಶ್ಮೀರ ಸಮಸ್ಯೆಯನ್ನು ಯಶಸ್ವಿ ಯಾಗಿ ಎದುರಿಸಲು, ನಂತರ ಅದನ್ನು ಸಾಮಾನ್ಯಗೊಳಿಸಲು ಇಂತಹ ನಿಲುವು ಬಹಳ ನೆರವಾಗುತ್ತದೆ.

# ಪಂಜಾಬಿನಲ್ಲಿ ಆಶಾದಾಯಕ ಹೊಸ ತಿರುವು

ಕಾಂಗ್ರೆ ಮತ್ತು ಅಕಾಲಿದಳ (ಮಾನ್ ಗುಂಪು) ಭಾಗವಹಿಸಿದ್ದರೂ ಲೂಧಿಯಾನಾ ಸರ್ವಪಕ್ಷ ರ್‍ಯಾಲಿ ಪಂಜಾಬಿನ ರಾಜಕೀಯ ಪರಿಸ್ಥಿತಿಗೆ ಆಶಾದಾಯಕ ಹೊಸ ತಿರುವು ಕೊಟ್ಟಿದೆ. ಜನತೆ ರ್‍ಯಾಲಿಗೆ ಪ್ರತಿಕ್ರಿಯಿಸಿದ ರೀತಿ-ಇತ್ತೀಚೆಗೆ ಜನತೆ ಲೋಕಸಭಾ ಚುನಾವಣೆಯಲ್ಲಿ ಇತ್ತ ತೀರ್ಪು (ಅಕಾಲಿದಳ - ಮಾನ್ ಗುಂಪಿಗೆ ಬಹುಮತ ನೀಡುವ ಮೂಲಕ) ಹಿಂದಿನ ಸರ್ಕಾರದ ವಿರುದ್ಧ ಕೋಪದ ಪ್ರತಿಕ್ರಿಯೆ, ಇದು ಖಲಿಸ್ತಾನ, ಅನಂದಪುರ ಸಾಹಿಬ್ ನಿರ್ಣಯ ಮತ್ತು ಉಗ್ರಗಾಮಿಗಳ ಪರವಾಗಿ ನೀಡಿದ ತೀರ್ಪು ಅಲ್ಲ ಎಂದು ಖಚಿತವಾಗುತ್ತದೆ. ನಮಗೆ ಶಾಂತಿಬೇಕು ಎಂದು ಪಂಜಾಬಿಗಳು ಒಕ್ಕೊರಲಿನಿಂದ ಕೇಳುತ್ತಿದ್ದಾರೆ.

ಪ್ರಧಾನ ಮಂತ್ರಿಗಳನ್ನು ಎಸ್.ಎಸ್. ಮಾನ್ ಮತ್ತು ಅವರ ಸಹೋದ್ಯೋಗಿಗಳು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದ್ದು ಹಾಗೂ ಬೀಳ್ಕೊಟ್ಟದ್ದು ಅವರು ರಾಷ್ಟ್ರೀಯ ಮುಖ್ಯಧಾರೆಯಲ್ಲಿ ಸೇರ ಬಯಸುತ್ತಾರೆ ಆದರೆ ಉಗ್ರಗಾಮಿಗಳ ಒತ್ತಡದಿಂದ ರ್‍ಯಾಲಿಯಲ್ಲಿ ಭಾಗವಹಿಸಲು ಹಿಂದೇಟು ಹಾಕಿದರು ಎಂದು ತಿಳಿಯುತ್ತದೆ..

ಆದರೆ, ಜನತೆಯ ಶಾಂತಿ ಪ್ರಿಯತೆಯ ಅಭಿವ್ಯಕ್ತಿಯಿಂದ ಪಂಜಾಬಿನ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಬಹುದು ಎಂದು ತಿಳಿಯುವುದು ತಪ್ಪಾಗುತ್ತದೆ. ಐಕ್ಯತೆಯ ಮಾತನಾಡುತ್ತಲೇ ಅಕಾಲಿದಳದ ಗುಂಪುಗಳು ತಮ್ಮೊಳಗೆ ಕಿತ್ತಾಡುತ್ತಿವೆ. ಚುನಾವಣೆಯ ನಂತರ ಮಾನ್ ಗುಂಪು ಇತರ ಅಕಾಲಿದಳ ಗುಂಪು ಪ್ರಾಮುಖ್ಯತೆ ಕಳೆದುಕೊಂಡಿದೆ ಎಂದು ಭಾವಿಸುತ್ತದೆ. ಮಾನ್ ಗುಂಪಿನ ನಾಯಕರು ಇತರ ಗುಂಪುಗಳ ನಾಯಕರನ್ನು ಯಾವಾಗಲು ತಮ್ಮ ಭಾಷಣಗಳಲ್ಲಿ ಪ್ರಮುಖವಾಗಿ ಟೀಕಿಸುತ್ತಾರೆ. ತೋಹ್ರಾ - ಬಾದಲ್ ಗುಂಪು ಮತ್ತು ಮಾನ್ ಗುಂಪಿನ ಕಾರ್ಯಕರ್ತರ ನಡುವೆ ಘರ್ಷಣೆಗಳೂ ನಡೆದಿವೆ. ಬರ್ನಾಲಾ ಗುಂಪು ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆ ಮಾಡಿದಾಗಿನಿಂದ ಪ್ರಾಮುಖ್ಯತೆ ಕಳೆದುಕೊಂಡಿದೆ, ಎಂದು ತೋಹ್ರಾ - ಬಾದಲ್ ಗುಂಪು ಭಾವಿಸುತ್ತದೆ.

ಮಾನ್ ಗುಂಪು ಸದ್ಯದಲ್ಲಿ ಜನಪ್ರಿಯತೆಗಳಿಸಿದ್ದರೂ ಅದಕ್ಕೆ ತನ್ನದೇ ಆದ ಸಂಘಟನೆ ಇಲ್ಲ. ಅದರ ಚುನಾವಣಾ ಪ್ರಚಾರವನ್ನು AISSF ಮತ್ತು ದಮ್‌ದಮ್ಮಿ ತಕ್ಸಲ್ ನಂತಹ ಉಗ್ರಗಾಮಿ ಸಂಘಟನೆಗಳು ಸಂಘಟಿಸಿದ್ದವು. ಆದ್ದರಿಂದ ಮಾನ್ ಗುಂಪಿನ ಮೇಲೆ ಇವು ಪ್ರಭಾವ ಬೀರುತ್ತವೆ. ಲೂಧಿಯಾನ ರ್‍ಯಾಲಿಯಲ್ಲಿ ಭಾಗವಹಿಸುವ ವಿಷಯದಲ್ಲಿ ಮಾನ್ ತೋರಿದ ಅನಿಶ್ಚಿತತೆ ಅವರ ಜನಪ್ರಿಯತೆಯ ಮೇಲೆ ಪರಿಣಾಮ ಬೀರದೆ ಹೋಗಿಲ್ಲ. AISSF ಒಳಗೂ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ.

ಜನವರಿ 10 ರಂದು ದಂದಮಿ ತಕ್ಸಲ್ ನೀಡಿದ ಹೇಳಿಕೆ ಒಂದು ಮುಖ್ಯ ನಕಾರಾತ್ಮಕ ಬೆಳವಣಿಗೆ. ಈ ಹೇಳಿಕೆಯಲ್ಲಿ ಜನತೆಯ ಲೂಟಿ ಅಮಾಯಕರ ಕೊಲೆ, ಮಕ್ಕಳನ್ನು ಅಪಹರಿಸುವುದು, ಮತ್ತು ದುಡ್ಡಿಗಾಗಿ ಭಯೋತ್ಪಾದನೆ ಮಾಡುವುದು-ಸಿಖ್ ತತ್ವಗಳಿಗೆ ವಿರುದ್ಧವಾದದ್ದು ಎಂದು ಹೇಳಲಾಗಿದೆ. ಈ ಹೇಳಿಕೆ ಬರಿಯ ತಂತ್ರವಲ್ಲದಿದ್ದರೆ ಭಯೋತ್ಪಾದಕರನ್ನು ಮೂಲೆಗುಂಪು ಮಾಡಲು ಮುಖ್ಯ ಪಾತ್ರವಹಿಸಬಹುದು.

ಅಕಾಲಿದಳದ ಎಲ್ಲಾ ಗುಂಪುಗಳು ಮತ್ತು ಇತರ ಸಿಖ್ ಸಂಘಟನೆಗಳಿಗೆ ಉಗ್ರಗಾಮಿ ಮತ್ತು ಪ್ರತ್ಯೇಕತಾವಾದ ಪಂಜಾಬ್ ಮತ್ತು ಸಿಕ್ಖರಿಗೆ ಮಾಡಿದ ಹಾನಿಯ ಅಂದಾಜು ಪೂರ್ಣವಾಗಿ ಮನದಟ್ಟಾದಂತಿಲ್ಲ. ಎಲ್ಲಾ ಅಕಾಲಿ, ಸಿಖ್ ಗುಂಪುಗಳು ಸರಕಾರಿ ಭಯೋತ್ಪಾದನೆ ಮತ್ತು ಮುಖಾಮುಖಿ ಕೊಲೆಗಳನ್ನು ಖಂಡಿಸುತ್ತವೆ, ದಿನ ಬೆಳಗಾದರೇ. ಆದರೆ ಇನ್ನೂ ಭಯೋತ್ಪಾದಕರ ಹೀನ, ಹೇಯ ಕೃತ್ಯಗಳ ಬಗ್ಗೆ ಚಕಾರವೆತ್ತುವ ಧೈರ್ಯ ತೋರಿಲ್ಲ. ಮಾನ್ ಗುಂಪು ಇವು ಕಾಂಗ್ರೆಯ ದುಷ್ಕೃತ್ಯಗಳು ಎನ್ನುತ್ತದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಕೆಲವು ಕೇಂದ್ರ ಗುಪ್ತಚರ ಸಂಘಟನೆಗಳು ಇಂತಹ ಕೃತ್ಯಗಳಿಗೆ ಪ್ರೇರೇಪಣೆ ನೀಡಿದ್ದು ನಿಜವೂ ಹೌದು. ಆದರೆ ಎಲ್ಲಾ ಭಯೋತ್ಪಾದಕ ಕೃತ್ಯಗಳು ಕಾಂಗ್ರೆ-ಕೇಂದ್ರದಿಂದ ಪ್ರೇರಿತವಾಗಿದ್ದವು ಎಂಬುದು ನಿಜಸ್ಥಿತಿಗೆ ಕುರುಡಾದಂತೆ. ಸಂತ ಲೋಂಗೋವಾಲ್, ಮಾಸ್ಟರ್ ತಾರಾ ಸಿಂಗ್ ಮಗಳು, ನೂರಾರು ಕಮ್ಯುನಿಸ್ಟರು ಮತ್ತು ಇತರ ರಾಜಕೀಯ ಪಕ್ಷಗಳ ನಾಯಕರು, ಜನವರಿ 15 ರಂದು 13 ಜನರು ಇವರೆಲ್ಲರ ಹತ್ಯೆ ಕಾಂಗ್ರೆ ಪ್ರೇರಿತವೇ? ಪಾರ್ಲಿಮೆಂಟ್ ಹತ್ತಿರ ಬಾಂಬ್ ಸ್ಫೋಟ ಕಾಂಗ್ರೆ ಪ್ರೇರಿತವೇ? ಇಂತಹ ಅರ್ಥಹೀನ ಹೇಳಿಕೆಗಳಿಂದ ಮಾನ್ ಗುಂಪು ಜನರ ದೃಷ್ಟಿಯಲ್ಲಿ ಗೌರವ ಕಳೆದುಕೊಳ್ಳುತ್ತಿದೆ.

> ಲೂಧಿಯಾನ ರ್‍ಯಾಲಿಯಲ್ಲಿ ಕಾಂಗ್ರೆ ಭಾಗವಹಿಸುವ ಬಗ್ಗೆ ಕೇಂದ್ರ ಸರ್ಕಾರ, ಜನತಾದಳ ಅನುಸರಿಸುವ ನೀತಿ ಬಗ್ಗೆ ಒಂದು ಎಚ್ಚರಿಕೆ ಮಾತು. ನಿಜವಾದ ರಾಷ್ಟ್ರೀಯ ಸರ್ವಾನುಮತ ರೂಪಿಸುವುದರಲ್ಲಿ ಅಕಾಲಿದಳದ ಗುಂಪುಗಳನ್ನು ತೊಡಗಿಸುವುದು ಅಷ್ಟೇ ಮುಖ್ಯ.

ಎಲ್ಲಾ ಅಕಾಲಿ ಗುಂಪುಗಳು ಅನಂದಪುರ ಸಾಹಿಬ್ ನಿರ್ಣಯದ ಬಗ್ಗೆ ಮಾತನಾಡುತ್ತಿವೆ. ಈ ನಿರ್ಣಯದ ಸಾರವಾದ ಧರ್ಮ-ಆಧಾರಿತ ರಾಜ್ಯದ ಪರಿಕಲ್ಪನೆಯನ್ನು, ದೇಶದ ಐಕ್ಯತೆ ಸಮಗ್ರತೆ ಬಯಸುವ ಯಾವ ದೇಶಪ್ರೇಮಿಯೂ ಒಪ್ಪಲಾರ. ಹಲವು ರಾಷ್ಟ್ರೀಯತೆಗಳ ಧರ್ಮಗಳ ಮೇಲೆ ಆಧಾರಿತವಾಗಿ ರಚಿತವಾದ ಪಾಕಿಸ್ತಾನ ಸಹ ಇಬ್ಭಾಗವಾಗಿ ಒಡೆಯಿತು. ಇನ್ನೂ ರಾಷ್ಟ್ರೀಯತೆಯ ಸಮಸ್ಯೆಯನ್ನು ಬಗೆಹರಿಸಿಲ್ಲ.

ಆದ್ದರಿಂದ ಈ ಬಗ್ಗೆ ಎಲ್ಲಾ ಅಕಾಲಿದಳದ ಗುಂಪುಗಳು ಗಂಭೀರವಾಗಿ ಪುನರಾಲೋಚನೆ ಮಾಡಬೇಕಾದ ಅಗತ್ಯವಿದೆ. 1983 ರಲ್ಲಿ ಶ್ರೀ ನಗರದಲ್ಲಿ ನಡೆದ ಎಲ್ಲಾ ವಿರೋಧ ಪಕ್ಷಗಳ ಕೂಟದಲ್ಲಿ ಒಪ್ಪಿದಂತೆ (ಇದರಲ್ಲಿ ಅಕಾಲಿದಳ ಸಹ ಭಾಗಿಯಾಗಿತ್ತು) ಕೇಂದ್ರ - ರಾಜ್ಯ ಸಂಬಂಧಗಳನ್ನು ಪುನರ್ರೂಪಿಸುವ ಕೆಲಸಕ್ಕೆ ಉಳಿದ ಪಕ್ಷಗಳ ಜತೆ ಮುಂದಾಗಬೇಕು. ಈ ಆಧಾರವಲ್ಲದೆ ಪಂಜಾಬ್ ಸಮಸ್ಯೆಯನ್ನು ಬಗೆಹರಿಸುವುದು ಸಾಧ್ಯವಿಲ್ಲ. ಯಾವುದೇ ಧಾರ್ಮಿಕ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಕಾಪಾಡುವುದು ಸಾಧ್ಯವಿಲ್ಲ.

ಅಕಾಲಿಗಳ ದೇಶಪ್ರೇಮಿ ಸಂಪ್ರದಾಯದ ಬಗ್ಗೆ (ಇದು ಸರಿಕೂಡಾ) ಹೆಮ್ಮೆಯಿಂದ ಮಾತನಾಡುವ ಯಾವ ಅಕಾಲಿದಳದ ಗುಂಪುಗಳೂ ಖಲಿಸ್ತಾನ ಪ್ರತ್ಯೇಕತಾವಾದದ ಬಗ್ಗೆ ಮುಕ್ತವಾಗಿ ಮಾತನಾಡುತ್ತಾ ನರಮೇಧದಲ್ಲಿ ತೊಡಗಿರುವ ಉಗ್ರಗಾಮಿ ಭಯೋತ್ಪಾದಕರನ್ನು ಖಂಡಿಸುವ ಧೈರ್ಯ ತೋರಿಲ್ಲ. ಈ ಧೈರ್ಯ ತೋರಿಸದೆ ಪಂಜಾಬ್, ಸಿಖ್ ಸಮಸ್ಯೆಗೆ ಯಾವುದೇ ಪರಿಹಾರವಿಲ್ಲ. ಈ ಗುಂಪುಗಳು ಪಾಕಿಸ್ತಾನ ಮತ್ತು ಅಮೇರಿಕನ್ ಸಾಮ್ರಾಜ್ಯಶಾಹಿ ಧನ, ಶಸ್ತ್ರಾಸ್ತ್ರ ಸಹಾಯ ಮತ್ತು ಕುಮ್ಮಕ್ಕಿನಿಂದ ಲಾಹೋರ್‌ದಲ್ಲಿ 'ಪಾಂಥಿಕ ಸಮಿತಿ'ಯ ನಿರ್ದೇಶನದಲ್ಲಿ ಈ ಹೇಯ ಕೃತ್ಯದಲ್ಲಿ ತೊಡಗಿವೆ. ದೊಡ್ಡ ಸಂಖ್ಯೆಯಲ್ಲಿರುವ ಈ ಗುಂಪುಗಳು ಯಾವುದೇ ಅಕಾಲಿ ಗುಂಪಿನ ನಿಯಂತ್ರಣದಲ್ಲಿಲ್ಲ. ಆದರೂ ಈ ಗುಂಪುಗಳನ್ನು ಬಲವಾಗಿ ಖಂಡಿಸದೆ, ಜನತೆಯಿಂದ ಇವರನ್ನು ಪ್ರತ್ಯೇಕಿಸದೆ ಇದ್ದರೆ ಪಂಜಾಬ್, ಸಿಖ್ ಸಮಸ್ಯೆ ಗಂಭೀರವಾಗುತ್ತಾ ಹೋಗುತ್ತದೆ.

ಇದು ದೊಡ್ಡ ಗಂಭೀರ ಹೋರಾಟ. ಈ ಹೋರಾಟವನ್ನು ದೊಡ್ಡ ಪ್ರಮಾಣದಲ್ಲಿ ಜನತೆಯ ಬಳಿ ಒಯ್ಯಬೇಕು ಇದರಲ್ಲಿ ಅಕಾಲಿದಳದ ಎಲ್ಲಾ ಗುಂಪುಗಳಿಗೂ ಮತ್ತು ಕಾಂಗ್ರೆಸ್ (ಐ) ಗೂ ದೊಡ್ಡ ಪಾತ್ರವಿದೆ. ಕಳೆದ ಎಂಟು ವರ್ಷಗಳ ಈ ಅನುಭವದ ಆಧಾರದ ಮೇಲೆ ಈ ಕೆಲಸಕ್ಕೆ ಅಕಾಲಿದಳ ಮುಂದಾಗದಿದ್ದರೆ. ಅದು. ತನ್ನ ರಾಜಕೀಯ ನಂಬಿಕೆಗೆ ಅರ್ಹವಾಗಿ ಉಳಿಯಲಾರದು.

ಲೂಧಿಯಾನ ರ್‍ಯಾಲಿಯಲ್ಲಿ ಕಾಂಗ್ರೆ ಭಾಗವಹಿಸುವ ಬಗ್ಗೆ ಕೇಂದ್ರ ಸರ್ಕಾರ, ಜನತಾದಳ ಅನುಸರಿಸುವ ನೀತಿ ಬಗ್ಗೆ ಒಂದು ಎಚ್ಚರಿಕೆ ಮಾತು. ನಿಜವಾದ ರಾಷ್ಟ್ರೀಯ ಸರ್ವಾನುಮತ ರೂಪಿಸುವುದರಲ್ಲಿ ಅಕಾಲಿದಳದ ಗುಂಪುಗಳನ್ನು ತೊಡಗಿಸುವುದು ಅಷ್ಟೇ ಮುಖ್ಯ. ಇದರ ಬಗ್ಗೆ ಏಕಪಕ್ಷೀಯ ನೀತಿ ಸಲ್ಲ. ಕಾಂಗ್ರೆಗೆ ಪಂಜಾಬಿನಲ್ಲೇ ಶೇಕಡಾ 40 ಜನತೆಯ ಬೆಂಬಲ ಇದೆ ಎಂದು ಮರೆತು ಬಿಡಬಾರದು.

ಜನತೆಯಿಂದ ಉಗ್ರಗಾಮಿಗಳನ್ನು ಪ್ರತ್ಯೇಕಿಸಲು ಪ್ರಯತ್ನಗಳ ಜತೆ, ಉಗ್ರಗಾಮಿ ಮತ್ತು ಭಯೋತ್ಪಾದಕರ ವಿರುದ್ಧ ಕಟುಕ್ರಮಗಳು ಅಗತ್ಯ. ಇದು ರಾಜ್ಯದ ಅಲ್ಪಸಂಖ್ಯಾತರ ಪ್ರಾಣ ಆಸ್ತಿಪಾಸ್ತಿ ಸುರಕ್ಷತೆ ಬಗ್ಗೆ ಭರವಸೆ ಮೂಡಿಸಲು ಅತ್ಯಗತ್ಯ.

ಕೇಂದ್ರ ಸರ್ಕಾರ ಈ ಸರ್ವಪಕ್ಷ ರ್‍ಯಾಲಿಯ ಮೂಲಕ , ಪಂಜಾಬ್ ಸಮಸ್ಯೆ ಪರಿಹಾರದತ್ತ ಸಾಮೂಹಿಕ ತೊಡಗಿಸುವಿಕೆಯ ಸರಿಯಾದ ಹೆಜ್ಜೆ ಹಾಕಿದೆ. ಇದು ಇನ್ನೂ ಚುರುಕಿನಿಂದ ಮುಂದೆ ಸಾಗಬೇಕು. ಇನ್ನೂ ಹತ್ತು ಹಲವು ಇಂತಹ ರ್‍ಯಾಲಿಗಳು ನಡೆಯಬೇಕು. ಜನತೆಯಲ್ಲಿ ಈ ಸಮಸ್ಯೆ ಪರಿಹಾರ ಸಾಧ್ಯವಿದೆ ಎಂಬ ಸ್ಫೂರ್ತಿ ತುಂಬಬೇಕು. ಅವರು ಭಯೋತ್ಪಾದನೆ ಮತ್ತು ಪ್ರತ್ಯೇಕತಾವಾದದ ವಿರುದ್ಧ ಸಕ್ರಿಯ ಭಾಗವಹಿಸುವಂತೆ ಆಗಬೇಕು. ಇದರಿಂದ ಅಕಾಲಿದಳದ ಗುಂಪುಗಳ ಮೇಲೆ ಸಾರ್ವಜನಿಕ ಒತ್ತಡ ಹೆಚ್ಚಾಗುತ್ತದೆ. ಏಕೆಂದರೆ ಅಕಾಲಿದಳದ ಗುಂಪುಗಳ ಸಹಕಾರವಿಲ್ಲದೆ ಪಂಜಾಬ್ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ.

(ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯ)

> ರಾಜ್ಯದ ಸುಮಾರು ಶೇಕಡಾ 40 ರಷ್ಟು ಜನರ ಬೆಂಬಲ ಹೊಂದಿರುವ ಕಾಂಗ್ರೆ, ಪಂಜಾಬ್ ಸಮಸ್ಯೆ ಬಗೆಹರಿಸುವುದರಲ್ಲಿ ಅದಕ್ಕೆ ಆಸಕ್ತಿ ಇಲ್ಲ ಎಂಬ ಭಾವನೆ ಬರುವಂತೆ ವರ್ತಿಸುತ್ತಾ ಹೋದರೆ - ಅದು ಪಂಜಾಬಿನಲ್ಲೂ ಇತರ ಕಡೆಯೂ ಜನರ ಬೆಂಬಲ ವಿಶ್ವಾಸ ಕಳೆದುಕೊಳ್ಳುತ್ತದೆ ಎಂದು ಇನ್ನಾದರೂ ತಿಳಿದು ಕೊಳ್ಳಬೇಕು.

# ನೇಪಾಳದಲ್ಲಿ ಮಹತ್ವಪೂರ್ಣ ಬೆಳವಣಿಗೆ
## ರಾಜಪ್ರಭುತ್ವಕ್ಕೆ ಸವಾಲೆಸೆಯಲು ಸಿದ್ಧತೆ


ನಮ್ಮ ನೆರೆಯ ದೇಶ ನೇಪಾಳ ಚಾರಿತ್ರಿಕ ಬೆಳವಣಿಗೆಗಳನ್ನು ಕಾಣುತ್ತಿದೆ. ಜನವರಿ 14 ರಂದು ಘೋಷಿತವಾದ 'ಸಂಯುಕ್ತ ಎಡರಂಗ' ಒಂದು ಕನಿಷ್ಠ ಕಾರ್ಯಕ್ರಮದ ಆಧಾರದ ಮೇಲೆ ಎಲ್ಲಾ ನೇಪಾಳೀ ಕಮ್ಯುನಿಸ್ಟರನ್ನು ಒಟ್ಟಿಗೆ ತಂದಿದೆ. ಶ್ರೀಮತಿ ಸಹನಾ ಪ್ರಧಾನ್ ಈ ರಂಗದ ಅಧ್ಯಕ್ಷರಾಗಿರುತ್ತಾರೆ. ನಾಲ್ಕು ದಿನಗಳ ನಂತರ, ಜನವರಿ 18 ರಂದು ಪ್ರತಿಬಂಧಿತ ನೇಪಾಳೀ ಕಾಂಗ್ರೆಸ್ ತನ್ನ ಸಮ್ಮೇಳನ ನಡೆಸಿತು. ಫೆಬ್ರುವರಿ 18ರಿಂದ ಒಂದು ಶಕ್ತಿಶಾಲೀ ಸಾಮೂಹಿಕ ಆಂದೋಲನ ಆರಂಭಿಸಲು ಈ ಸಮ್ಮೇಳನ ಕರೆ ನೀಡಿತು. ಈ ಸಮ್ಮೇಳನಕ್ಕೆ ಸೌಹಾರ್ದ ಪ್ರತಿನಿಧಿಗಳಾಗಿ ಬಂದಿದ್ದ, ಸಂಯುಕ್ತ ಎಡರಂಗದ ನಾಯಕರುಗಳ ಪರವಾಗಿ ನೇಪಾಳ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಅಧಿಕಾರಿ ಈ ಜನತಾ ಹೋರಾಟಕ್ಕೆ ಪಕ್ಷದ ಸಂಪೂರ್ಣ ಬೆಂಬಲದ, ಸಕ್ರಿಯ ಪಾತ್ರದ ಭರವಸೆ ನೀಡಿದರು.

ನೇಪಾಳದ ರಾಜಪ್ರಭುತ್ವ ಸರ್ವ ಪ್ರಯತ್ನ ನಡೆಸಿದರೂ ಎಡ ಪಕ್ಷಗಳ ಒಕ್ಕೂಟಗಳೂ ಸಾಕಷ್ಟಿದ್ದ 8000ಕ್ಕೂ ಹೆಚ್ಚು ಮಂದಿಯನ್ನು ಬಹಿರಂಗ ಸಭೆಗೆ ಬರದಂತೆ ತಡೆಯಲು ಆಗಲಿಲ್ಲ. ಪ್ರಜಾಪ್ರಭುತ್ವದ ಮರುಸ್ಥಾಪನೆಯ ನೇಪಾಳೀ ಜನತೆಯ ಈ ಹೋರಾಟಕ್ಕೆ ಸೌಹಾರ್ದ ವ್ಯಕ್ತಪಡಿಸಲು ಭಾರತದ ಹಲವು ಪಕ್ಷಗಳ ಮುಖಂಡರು ಈ ಸಮ್ಮೇಳನದಲ್ಲಿ ಹಾಜರಾದದ್ದು ಇನ್ನೊಂದು ಗಮನಾರ್ಹ ಅಂಶ. ಚಂದ್ರಶೇಖರ ಜನತಾದಳ ಪ್ರತಿನಿಧಿ ಮಂಡಲಿಯ ನೇತೃತ್ವ ವಹಿಸಿದ್ದರು. ಸಿ.ಪಿ.ಐ. (ಎಂ) ಪರವಾಗಿ ಹರ್ಕಿಶನ್ ಸಿಂಗ್ ಸುರ್ಜಿತ್, ಸಿ.ಪಿ.ಐ. ಪರವಾಗಿ ಎಂ.ಫಾರುಕಿ ಹಾಗೂ ಎಂ.ಜೆ. ಅಕ್ಬರ್ ನೇತೃತ್ವದಲ್ಲಿ ಕಾಂಗ್ರೆಸ್ (ಐ) ಪ್ರತಿನಿಧಿಗಳು ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು.

ಭಾರತದ 'ಸಂಪೂರ್ಣ ಸ್ವಾತಂತ್ರ್ಯ'ದ ಘೋಷಣೆ ನೀಡಿದ 1930 ರ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಲಾಹೋರ್ ಅಧಿವೇಶನವನ್ನು ಈ ಸಮ್ಮೇಳನದ ವಾತಾವರಣ ನೆನಪಿಸುತ್ತಿದೆ ಎಂದು ನುಡಿದ ಕಾಂ. ಸುರ್ಜಿತ್ ಪ್ರತಿನಿಧಿಗಳ ಭಾವನೆಗಳನ್ನು ನೋಡಿದಾಗ 1945 ರಲ್ಲಿ ಗೂರ್ಖಾ ರೆಜಿಮೆಂಟ್‌ನಿಂದ ದೊಡ್ಡ ವಿಭಾಗಗಳು ಅಝಾದ ಹಿಂದ್ ಸೇನೆ ಸೇರಿ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಹುರುಪು ತುಂಬಿದ್ದು ನೆನಪಾಗುತ್ತದೆ ಎಂದರು. ನೇಪಾಳ ವಸಾಹತುಶಾಹಿಯಿಂದ ಮುಕ್ತವಾಗಿದೆ. ಆದರೆ ಎಲ್ಲಾ ನೇಪಾಳಿಗಳ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಾಗೂ ಘನತೆಯನ್ನು ಎತ್ತಿಹಿಡಿಯಲು ಇದನ್ನು ಆರ್ಥಿಕ ಸ್ವಾತಂತ್ರ್ಯವಾಗಿ ಕೂಡಾ ಪರಿವರ್ತಿಸಬೇಕು ಎಂದರು. ನೇಪಾಳದಲ್ಲಿ ಪ್ರಜಾಪ್ರಭುತ್ವ ಮತ್ತು ಮಾನವ ಘನತೆಯ ಹೋರಾಟ ಸಾಮ್ರಾಜ್ಯಶಾಹಿ ತಂತ್ರಗಳ ವಿರುದ್ಧ ಇಡೀ ಉಪಖಂಡದ ಜನಗಳ ಹೋರಾಟದೊಂದಿಗೆ ಬೆಸೆದಿದೆ ಎಂದರು.

ಡಿಸೆಂಬರ್ 15,1960 ರಂದು ನೇಪಾಳ ರಾಜ ಎಲ್ಲಾ ರಾಜಕೀಯ ಪಕ್ಷಗಳನ್ನು ಪ್ರತಿಬಂಧಿಸಿ ಪಕ್ಷರಹಿತ ಪಂಚಾಯತು ವ್ಯವಸ್ಥೆ ಎಂಬುದನ್ನು ಹೇರಿದ ಕಳೆದ ಮೂರು ದಶಕಗಳಲ್ಲಿ ಜನತೆಗೆ ಸಾಮಾನ್ಯ ನಾಗರೀಕ ಸ್ವಾತಂತ್ರ್ಯಗಳೂ ನಿರಾಕರಿಸಲ್ಪಟ್ಟಿವೆ. ಆರ್ಥಿಕ ಸ್ಥಿತಿ ಹದಗೆಟ್ಟು, ದೇಶದ ಅರ್ಧದಷ್ಟು ಬಡತನದ ರೇಖೆಯ ಕೆಳಗಿದ್ದಾರೆ. 70% ನಿರಕ್ಷರಿಗಳು. ಇತ್ತೀಚಿನ ಈ ಬೆಳವಣಿಗೆಗಳು ಈ ಪರಿಸ್ಥಿತಿಗೆ ಸವಾಲೆಸೆಯಲು ಜನತೆಯನ್ನು ಅಣಿನೆರೆಸುವ ಚಾರಿತ್ರಿಕ ಸಂದರ್ಭವನ್ನು ಸೃಷ್ಟಿಸಿದೆ. ದಮನಕಾರಿ ಸರ್ವಾಧಿಕಾರಿ ರಾಜಪ್ರಭುತ್ವದ ವಿರುದ್ಧ ನೇಪಾಳಿಗಳು ತಮ್ಮ ಅಂತಿಮ ಹೋರಾಟಕ್ಕೆ ಅಣಿಗೊಳ್ಳುತ್ತಿರುವಾಗ ಭಾರತದ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲ ಅತ್ಯಗತ್ಯ.

### ಕರಿಯರ ಹಾಡು



KRNW / BGS-312 MAG(2) PRB DECR 319-78/79

ಮುಖ್ಯವಾಗಿ ವೈಜ್ಞಾನಿಕ ಸಮಾಜವಾದದ ನೀತಿಗಳನ್ನು ವಿಕೃತಿಗೊಳಿಸಿದುದರಿಂದಾಗಿ, ಅದರಿಂದ ದಾರಿ ತಪ್ಪಿದುದರಿಂದಾಗಿ ನಡೆದಿರುವ, ಅದನ್ನು ಸಾಮ್ರಾಜ್ಯಶಾಹಿ ಮತ್ತು ಆಂತರಿಕ ಪ್ರತಿಗಾಮಿ ಶಕ್ತಿಗಳು ಸಂಪೂರ್ಣವಾಗಿ ಉಪಯೋಗಿಸಿರುವ ಬೆಳವಣಿಗೆಗಳು ಇವು. ಮಾರ್ಕ್ಸ್‌ವಾದ-ಲೆನಿನ್‌ವಾದವನ್ನಾಗಲಿ, ಸಮಾಜವಾದವನ್ನಾಗಲಿ ತಿರಸ್ಕರಿಸಿದ ಘಟನೆಗಳಲ್ಲ. ಬದಲಾಗಿ ಇಂತಹ ವಿಕೃತಿಗಳು ಮತ್ತು ಸೂಕ್ತ ಸಮಯದಲ್ಲಿ ಮಧ್ಯಪ್ರವೇಶಿಸಿ ಸರಿಪಡಿಸದಿರುವುದು ಇದರಿಂದ ಎಂತಹ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ತೋರಿಸಿಕೊಟ್ಟಿರುವ ಬೆಳವಣಿಗೆಗಳು.

# ವಿಶ್ವ ಸಮಾಜವಾದಕ್ಕೊಂದು ಪ್ರಮುಖ ಹಿನ್ನಡೆ

ಪುಟ 1 ರಿಂದ

ಬದ್ಧತೆಯ ಉಲ್ಲಂಘನೆಗಳಿಂದಾಗಿ ಜನ ಹೆಚ್ಚೆಚ್ಚು ಭಾಗವಹಿಸುವಂತಾಗುವ ಬದಲು ಜನ ದೂರಸರಿಯುವ ಒಂದು ಪ್ರಕ್ರಿಯೆಗೆ ಹಾದಿ ಮಾಡಿಕೊಟ್ಟಿತು.

ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವದ ಲೆನಿನ್‌ವಾದಿ ನೀತಿಗಳ ಉಲ್ಲಂಘನೆಗಳು, ಪರಿಣಾಮವಾಗಿ ಅಧಿಕಾರಿಶಾಹಿಯ ಬೆಳವಣಿಗೆ ಜತೆಗೆ ಸೈದ್ಧಾಂತಿಕ ಸಮೇತ ಮತ್ತು ಕೆಲವು ದೇಶಗಳಲ್ಲಿ ಪಕ್ಷದೊಳಗೇ ಸಮಯಸಾಧಕ ಭ್ರಷ್ಟ ಪ್ರಭಾವ ಜನತೆ ಪಕ್ಷದಿಂದ ದೂರ ಸರಿಯಲು ಕಾರಣವಾದವು.

ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಸಮಾಜವಾದ ಅದುವರೆಗೆ ದಾಸ್ಯದಲ್ಲಿದ್ದ ಶ್ರಮ ಜೀವಿ ಜನಗಳನ್ನು ಶೋಷಣೆಯಿಂದ ಮುಕ್ತಗೊಳಿಸಿ ಅತ್ಯಲ್ಪ ಸಮಯದಲ್ಲೇ ಈ ಹಿಂದುಳಿದ ಆರ್ಥಿಕ ವ್ಯವಸ್ಥೆಗಳನ್ನು ಪರಿವರ್ತಿಸಿದರೂ, ಈ ದೇಶಗಳ ಆಳುವ ಕಮ್ಯುನಿಸ್ಟ್ ಪಕ್ಷಗಳು ಜನತೆಯ ಸದಾ ಹೆಚ್ಚುತ್ತಲೇ ಬರುತ್ತಿದ್ದ ಆರ್ಥಿಕ, ರಾಜಕೀಯ ನಿರೀಕ್ಷೆಗಳೊಟ್ಟಿಗೆ ಹೆಜ್ಜೆ ಹಾಕಲಾರದಾದವು.

ಸಮಾಜವಾದಿ ಆರ್ಥಿಕವನ್ನು ಸಂಘಟಿಸುವ ವಿಧಾನದಲ್ಲೂ ವಿಕೃತಿಗಳು ಮಾರ್ಗಚ್ಯುತಿಗಳು ಸಂಭವಿಸಿವೆ ಎಂಬುದೂ ಸ್ಪಷ್ಟ. ಇದರಿಂದಾಗಿ ಆರ್ಥಿಕ ಬೆಳವಣಿಗೆಯ ಮಟ್ಟಗಳಲ್ಲಿ ಖಂಡಿತವಾಗಿಯೂ ಇವು ಹಿಂದುಳಿಯುವಂತಾಯಿತು. ಸಮಾಜವಾದದ ಉತ್ಪಾದನಾ ಶಕ್ತಿಗಳು ತ್ವರಿತವಾಗಿ ಬೆಳೆಯುತ್ತಿದ್ದಂತೆ ಆರ್ಥಿಕ ನಿರ್ವಹಣೆಯ ವಿಧಾನಗಳೂ ಅದಕ್ಕನುಗುಣವಾಗಿ ಬದಲಾಗಬೇಕು ಸೂಕ್ತ ಸಮಯದಲ್ಲಿ ಇಂತಹ ಬದಲಾವಣೆಗಳನ್ನು ತರದೆ ಆರ್ಥಿಕ ಬೆಳವಣಿಗೆಯಲ್ಲಿ, ಸಾಧ್ಯವಿದ್ದುದಕ್ಕಿಂತ ಕೆಳಗಿನ ಮಟ್ಟದಲ್ಲೇ ನಿಲ್ಲಬೇಕಾಗಿ ಬಂತು. ಪ್ರಭುತ್ವದ ಅಧಿಕಾರಶಾಹಿಯ ಒಳಗಿಂದಲೇ ಕೊರೆಯುವ ಪರಿಣಾಮಗಳಿಂದಾಗಿ ವೈಜ್ಞಾನಿಕ ಮತ್ತು ತಾಂತ್ರಿಕ ಕ್ರಾಂತಿಯ ಸಾಧನೆಗಳನ್ನು ಆರ್ಥಿಕ ಉತ್ಪಾದನೆಯಲ್ಲಿ ಒಳಗೊಳ್ಳುವುದು ಸಾಧ್ಯವಾಗಲಿಲ್ಲ. ಇದರಿಂದ ಆರ್ಥಿಕ ಬೆಳವಣಿಗೆಯ ಅಂತರ ಇನ್ನೂ ಹೆಚ್ಚಿತು. ಫಲವಾಗಿ ಜನರಲ್ಲಿ ಮೂಡಿದ ಅಸಂತೃಪ್ತಿ ಅವರನ್ನು ಸರಕಾರಗಳಿಂದ, ಪಕ್ಷದಿಂದ ದೂರ ಸರಿಸುವ ಪ್ರಕ್ರಿಯೆಯನ್ನು ಮತ್ತಷ್ಟು ಬಲಗೊಳಿಸಿತು.

## ಆಂತರಿಕ ಪ್ರತಿಗಾಮಿಗಳಿಗೆ ಅವಕಾಶ

ಈ ವಿಕೃತಿಗಳ ಜತೆಗೆ, ಜನ ಸಮೂಹಗಳ ನಡುವೆ ಸೈದ್ಧಾಂತಿಕ, ತಾತ್ವಿಕ ಕೆಲಸವನ್ನು, ಮಾನವ ಸಮಾಜದ ಒಂದು ಉನ್ನತ ಸ್ವರೂಪವನ್ನು ಸೃಷ್ಟಿಸುವಲ್ಲಿ ಜನರು ಅಪಾರ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಮಾಜವಾದಿ ಪ್ರಜ್ಞೆಯನ್ನು ಎತ್ತರಿಸುವ ಕೆಲಸವನ್ನು ಕಡೆಗಣಿಸಿದ್ದರಿಂದ ಕಮ್ಯುನಿಸ್ಟ್-ವಿರೋಧಿ ಶಕ್ತಿಗಳ ಬೆಳವಣಿಗೆಗೆ ಅವಕಾಶ ಕಲ್ಪಿಸಿದಂತಾಯಿತು.

ಸಮಾಜವಾದದ ನೀತಿಗಳಿಂದ ಈ ಮಾರ್ಗಚ್ಯುತಿ, ವಿಕೃತಿಗಳಿಂದಾಗಿ, ಅನುಭವದಿಂದ ಪಾಠ ಕಲಿತು ಸೂಕ್ತ ಸಮಯದಲ್ಲಿ ಸಮಾಜವಾದಿ ಚೌಕಟ್ಟಿನೊಳಗೆ ಅಗತ್ಯ ಬದಲಾವಣೆಗೆ ತರುವಲ್ಲಿನ ವಿಫಲತೆಗಳಿಂದಾಗಿ ಸಮಾಜವಾದವನ್ನು ವಿರೋಧಿಸುವ ಶಕ್ತಿಗಳು ಜನತೆಯ ನಡುವಿನ ಅಸಂತೃಪ್ತಿಯನ್ನು ಬಳಸಿ ಬೂರ್ಜ್ವಾ ಪ್ರಜಾಪ್ರಭುತ್ವ ಸಮಾಜವಾದಿ ಪ್ರಜಾಪ್ರಭುತ್ವಕ್ಕೊಂದು ಪರ್ಯಾಯ ಎಂದು ಹೇಳಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸಮಾಜವಾದವನ್ನು ಸುಧಾರಿಸುವ ವೇಷ ತೊಟ್ಟು, 'ಸಾಮಾಜಿಕ ಪ್ರಜಾಪ್ರಭುತ್ವ'ದ ಘೋಷಣೆಯಡಿ ಇವು ಈ ದೇಶಗಳಲ್ಲಿ ಬಂಡವಾಳಶಾಹಿಯನ್ನು ಮತ್ತೆ ಸ್ಥಾಪಿಸ ಬಯಸುತ್ತಿವೆ.

ಈ ಶಕ್ತಿಗಳು, ಸಾಮ್ರಾಜ್ಯಶಾಹಿಯ ನೆರವು ಬೆಂಬಲದೊಂದಿಗೆ ಪೂರ್ವ ಯುರೋಪಿನ ಜನತೆ ತಮ್ಮ ಇತಿಹಾಸವನ್ನು, ಅದರ ಸಾಧನೆಗಳನ್ನು ಕಮ್ಯುನಿಸ್ಟ್ ಪಕ್ಷಗಳ ನೇತೃತ್ವದಲ್ಲಿ ಫ್ಯಾಸಿಸಂ ವಿರುದ್ಧ ವೀರಾವೇಶದ, ಮಹಾನ್ ಹೋರಾಟಗಳನ್ನು ತ್ಯಜಿಸುವಂತೆ ಕುಮ್ಮಕ್ಕು ನೀಡುತ್ತಿವೆ.

ಮಾನವ ಕುಲವನ್ನು ಫ್ಯಾಸಿಸ್ಟ್ ದಾಸ್ಯದಿಂದ ರಕ್ಷಿಸಿದ ಕ್ರಾಂತಿಕಾರಿ ಭಾವನೆಗಳಿಂದ ಪ್ರೇರಿತ ಅಪಾರ ತ್ಯಾಗ-ಬಲಿದಾನಗಳನ್ನು ಮರೆತು ಬಿಡಿ ಎಂದು ಜನಗಳಿಗೆ ಈ ಶಕ್ತಿಗಳು ಹೇಳುತ್ತಿದ್ದಾರೆ. ಸಮಾಜವಾದ ಮಾತ್ರವೇ ದುಡಿಮೆಯ ಹಕ್ಕಿನ, ಶಿಕ್ಷಣ, ವಸತಿ, ಆರೋಗ್ಯ ಮತ್ತು ಸರ್ವತೋಮುಖ ಬೆಳವಣಿಗೆಯ ಹಕ್ಕಿನ ಭರವಸೆ ನೀಡಬಲ್ಲದು ಎಂಬ ನಿಜಸಂಗತಿಯನ್ನು ಉಪೇಕ್ಷಿಸಿ ಎಂದು ಹೇಳುತ್ತಿದ್ದಾರೆ. ಸಮಾಜವಾದಿ ದಾರಿಯನ್ನೇ ನಕಾರಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಈ ಮೂಲಕ ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಆಂದೋಲನವನ್ನು ತನ್ನ ಐತಿಹಾಸಿಕ ಅನುಭವಗಳಿಂದ ಪ್ರತ್ಯೇಕಗೊಳಿಸಲು, ಅದರ ಭವಿಷ್ಯದ ಕ್ರಾಂತಿಕಾರಿ ಸಾಮರ್ಥ್ಯವನ್ನು ಹೊಸಕಿ ಹಾಕಲು ಪ್ರಯತ್ನಿಸುತ್ತಿದ್ದಾರೆ.

## ಸಾಮ್ರಾಜ್ಯಶಾಹಿಯ ಪ್ರಚಾರ

ವೈಜ್ಞಾನಿಕ ಮತ್ತು ತಾಂತ್ರಿಕ ಕ್ರಾಂತಿಯ ಲಾಭಗಳನ್ನು ಹಂಚಿಕೊಳ್ಳುವ ವಚನ ನೀಡುತ್ತಾ ಸಾಮ್ರಾಜ್ಯಶಾಹಿ ಪೂರ್ವ ಯುರೋಪಿನ ಹೊಸ ಆಳ್ವಿಕೆಗಳಿಗೆ ಆರ್ಥಿಕ ಪಾಲುದಾರಿಕೆಯ ಆಹ್ವಾನ ನೀಡುತ್ತಿದೆ. ಆದರೆ ನಿಜವಾದ ಉದ್ದೇಶ ಈ ದೇಶಗಳಲ್ಲಿ ಬಂಡವಾಳಶಾಹಿಯನ್ನು ಮತ್ತೆ ಸ್ಥಾಪಿಸುವುದು. ವೈಜ್ಞಾನಿಕ ಮತ್ತು ತಾಂತ್ರಿಕ ಕ್ರಾಂತಿ ವಿಶ್ವದ ಮೊಗವನ್ನೇ ಬದಲಿಸಿದೆಯೆಂಬುದು ನಿಸ್ಸಂಶಯ. ಆದರೆ ಮುಂದುವರಿದ ಬಂಡವಾಳಶಾಹಿ ದೇಶಗಳ ಈ ಮುನ್ನಡೆಯ ಆಧಾರ ತೃತೀಯ ಜಗತ್ತಿನ ಕೋಟಿಗಟ್ಟಲೆ ಜನರ ಅಮಾನವೀಯ ಶೋಷಣೆ ಮತ್ತು ಪರಿಣಾಮವಾಗಿ ಅವರ ದರಿದ್ರೀಕರಣ. ಮೂರನೇ ಜಗತ್ತಿನ ಹೆಚ್ಚುತ್ತಿರುವ ಸಾಲ ಮತ್ತು ಮಿಲಿಯಾಂತರ ಮಂದಿ ಕಡು ಬಡತನದಲ್ಲಿರುವ ಸ್ಥಿತಿ ಪ್ರಜಾಪ್ರಭುತ್ವ ಮತ್ತು ಮಾನವೀಯತೆಯ ಬಗ್ಗೆ ಸಾಮ್ರಾಜ್ಯಶಾಹಿಯ ಮೊಸಳೆ ಕಣ್ಣೀರಿನ ಮೇಲೆ ನೀಡಿರುವ ತೀರ್ಪು.

ಅಂತರಾಷ್ಟ್ರೀಯ ಸಂಬಂಧಗಳಲ್ಲಿ ತತ್ವಗಳ, ಸಿದ್ಧಾಂತಗಳ ಪ್ರಶ್ನೆ ಈಗ ಇಲ್ಲವಾಗುತ್ತಿದೆ ಎಂಬ ಮಾತುಗಳೇನೇ ಇರಲಿ, ಸಾಮ್ರಾಜ್ಯಶಾಹಿಯ ನಿಜ ಸ್ವರೂಪವಂತೂ ಮತ್ತೊಮ್ಮೆ ಪ್ರಕಟವಾಗಿದೆ- ಪುಟ್ಟ ಪನಾಮಾದ ಮೇಲೆ ನಗ್ನ ಆಕ್ರಮಣದ ಮೂಲಕ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಮತ್ತು ಸಾಮ್ರಾಜ್ಯಶಾಹಿಯ ನಡುವಿನ ವೈರುಧ್ಯ ತೀವ್ರಗೊಳ್ಳುತ್ತಿದೆ. ನಮೀಬಿಯಾದಲ್ಲಿ ಸ್ವಾಪೋದ ವಿಜಯ ಚಿಲಿಯಲ್ಲಿ ಅಮೆರಿಕಾ ಬೆಂಬಲದ ಸರ್ವಾಧಿಕಾರೀ ಆಳ್ವಿಕೆಯನ್ನು ಕಿತ್ತೆಸೆದ ಜನತೆಯ ಉತ್ಕ್ರಾಂತಿ ಸಾಮ್ರಾಜ್ಯಶಾಹಿಯ ವಿರುದ್ಧ ಜನತೆಯ ಹೋರಾಟಗಳು ಹೆಚ್ಚುತ್ತಿರುವುದನ್ನು ಬಿಂಬಿಸುತ್ತಿವೆ.

ಸಮಾಜವಾದದ ಅಸ್ತಿತ್ವವನ್ನು ಸಾಮ್ರಾಜ್ಯಶಾಹಿ ಎಂದೂ ಒಪ್ಪಿಕೊಳ್ಳಲು ಸಾಧ್ಯವಾಗಿರಲಿಲ್ಲ. 1917 ರ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯಾದಂದಿನಿಂದ ಅದರ ಮುನ್ನಡೆಯನ್ನು ತಡೆಯಲು ಅಲ್ಲದಿದ್ದರೂ ಸಮಾಜವಾದವನ್ನು ನಾಶ ಮಾಡಲು ಅದು ಸದಾ ಪ್ರಯತ್ನಿಸಿದೆ. ಸಮಾಜವಾದದ ವಿರುದ್ಧ ಯುದ್ಧವೆಸಗುವ ಪ್ರಯತ್ನಗಳಿಂದ ಆರಂಭಿಸಿ ಸಾಮ್ರಾಜ್ಯಶಾಹಿ ನೇರ ಸಂಘರ್ಷದಿಂದ ಹಿಡಿದು ಯುದ್ಧ ಹಡಗುಗಳಿಂದ ಬೆದರಿಸುವ ಕೂಟನೀತಿ, ಸಮಾಜವಾದಿ ದೇಶಗಳ ಆಂತರಿಕ ಬುಡಮೇಲು ಮಾಡುವವರೆಗೆ ಹಲವು ವಿಧಾನಗಳನ್ನು ಪ್ರಯತ್ನಿಸಿದೆ. ಇಂದು ಅದು ಸಮಾಜವಾದಿ ದೇಶಗಳನ್ನು ಆಂತರಿಕವಾಗಿ ಬುಡಮೇಲು ಮಾಡುವ ಪ್ರಯತ್ನಗಳನ್ನು ತೀವ್ರಗೊಳಿಸುತ್ತಿದೆ. ಕಮ್ಯುನಿಸ್ಟ್ ವಿರೋಧಿ ಭಾವೋದ್ರೇಕ ವಿಶ್ವ ಸಾಮ್ರಾಜ್ಯಶಾಹಿ ಸ್ವಭಾವದ ಒಂದು ಅಂಗ. ಈ ಭಾವೋದ್ರೇಕದೊಂದಿಗೆ ಅದರ ಪತ್ರಿಕಾರಂಗ "ಸಮಾಜವಾದದ ಮರಣ"ವನ್ನು "ಬಂಡವಾಳಶಾಹಿಯ ವಿಜಯ"ವನ್ನು ಆಚರಿಸುತ್ತಿದೆ.

ಕಳೆದ 40 ವರ್ಷಗಳಲ್ಲಿ ಸಮಾಜವಾದ ದಡಿ ಬಂಡವಾಳಶಾಹಿ ನಿರಂತರ ಗೋಳಿಸುವ. ಕಷ್ಟಕಾರ್ಪಣ್ಯಗಳನ್ನು ನಿರ್ಮೂಲ ಮಾಡಿದ ಪೂರ್ವ ಯುರೋಪಿನ ಜನಗಳು ತಮ್ಮ ಸ್ವಂತ ಅನುಭವದಿಂದಲೇ ಬಂಡವಾಳಶಾಹಿಯನ್ನು ಮರುಸ್ಥಾಪಿಸುವ ಎಲ್ಲಾ ಪ್ರಯತ್ನಗಳನ್ನು ಪ್ರತಿರೋಧಿಸುತ್ತಾರೆ ಎಂಬುದು ಸಿ.ಪಿ.ಐ. (ಎಂ) ನ ವಿಶ್ವಾಸ.

ಪೂರ್ವ ಯುರೋಪಿನ ಈ ಬೆಳವಣಿಗೆಗಳು ಮುಖ್ಯವಾಗಿ ವೈಜ್ಞಾನಿಕ ಸಮಾಜವಾದದ ನೀತಿಗಳನ್ನು ವಿಕೃತಗೊಳಿಸಿದುದರಿಂದಾಗಿ, ಅದರಿಂದ ದಾರಿತಪ್ಪಿದುದರಿಂದಾಗಿ ನಡೆದಿರುವ, ಅದನ್ನು ಸಾಮ್ರಾಜ್ಯಶಾಹಿ ಮತ್ತು ಆಂತರಿಕ ಪ್ರತಿಗಾಮಿ ಶಕ್ತಿಗಳು ಸಂಪೂರ್ಣವಾಗಿ ಉಪಯೋಗಿಸಿರುವ ಬೆಳವಣಿಗೆಗಳು. ಇವು ಮಾರ್ಕ್ಸ್‌ವಾದ-ಲೆನಿನ್‌ವಾದವನ್ನಾಗಲಿ ಸಮಾಜವಾದವನ್ನಾಗಲಿ ತಿರಸ್ಕರಿಸಿರುವ ಬೆಳವಣಿಗೆಗಳಲ್ಲ ಎಂದು ಸಿ.ಪಿ.ಐ. (ಎಂ) ದೃಢವಾಗಿ ಹೇಳುತ್ತಿದೆ. ತದ್ವಿರುದ್ಧವಾಗಿ, ವಿಕೃತಿಗಳು ಹಾಗೂ ಸೂಕ್ತ ಸಮಯದಲ್ಲಿ ಮಧ್ಯಪ್ರವೇಶಿಸಿ, ಅವನ್ನು ಸರಿಪಡಿಸದಿರುವುದು - ಇವುಗಳಿಂದ ಹೇಗೆ ಇಂತಹ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಈ ಬೆಳವಣಿಗೆಗಳು ತೋರಿಸಿಕೊಟ್ಟಿವೆ.

ಅಂತಿಮವಾಗಿ, ಇತಿಹಾಸದ ನಿರ್ಣಾಯಕ ಅಂಶ ಜನತೆಯೇ. ಕೋಟಿಗಟ್ಟಲೆ ಜನ ಇಂದು ಸಾಮ್ರಾಜ್ಯಶಾಹಿ ಶೋಷಣೆ
ಮತ್ತು ಪ್ರಾಬಲ್ಯದ ವಿರುದ್ಧ ಅಪಾ
ಧೈರ್ಯ, ತ್ಯಾಗ ಬಲಿದಾನಗಳಿಂ
ಮನುಷ್ಯನಿಂದ ಮನುಷ್ಯನ ಶೋಷ
ಯಿಂದ ಮುಕ್ತವಾದ ವಿಶ್ವವ
ಸಾಧಿಸಲು, ವಿಶ್ವಶಾಂತಿ, ಪ್ರಜಾಪ್ರಭು
ಮತ್ತು ಸಮಾಜವಾದ ಸಾಧಿಸಲ
ಮುನ್ನಡೆಯುತ್ತಿದ್ದಾರೆ. ಕಮ್ಯುನಿಸ
ಪಕ್ಷಗಳು ಈ ಹೋರಾಟಗಳ ಮಂಚೂ
ಯಲ್ಲಿವೆ. ಮಾರ್ಕ್ಸ್‌ವಾದ ಲೆನಿನ್‌ವಾ
ಹಾಗೂ ಕಾರ್ಮಿಕ ವರ್ಗದ ಅಂ
ರಾಷ್ಟ್ರೀಯತೆಗೆ ದೃಢ ಬದ್ಧತೆಯೊಂದಿ
ಸಮಾಜವಾದದ ಹೋರಾಟವನ್ನು ಬ
ಯುತಗೊಳಿಸುವ ತನ್ನ ಬದ್ಧತೆಯನ
ಪುನರುಚ್ಚರಿಸುತ್ತಾ ಸಿ.ಪಿ.ಐ. (ಎ
ವಿಶ್ವಾದ್ಯಂತ ಪ್ರತಿಗಾಮಿ ಶಕ್ತಿಗಳ ವಿರು
ಸಮರವನ್ನು ಮುಂದುವರಿಸುತ್ತದೆ.

ಸೋವಿಯತ್ ಒಕ್ಕೂಟದೊಳ
ಜನಾಂಗಗಳ ನಡುವಿನ ಸಂಘರ್ಷಣೆಗ
ಕಳವಳಕಾರಿ ತಿರುವು ಪಡೆಯುತ್ತಿ
ವುದರ ಬಗ್ಗೆ ಪಾಲಿಟ್‌ಬ್ಯುರೋ ತನ್ನ ತೀ
ಆತಂಕ ವ್ಯಕ್ತಪಡಿಸುತ್ತದೆ.

ಸಮಾಜವಾದಿ ದೇಶಗಳ ಇತ್ತೀಚ
ಬೆಳವಣಿಗೆಗಳ ಬಗ್ಗೆ ಪೂರ್ಣ ವಿಶ್ಲೇಷ
ನಡೆಸಲು, ಇವುಗಳ ಸಮಗ್ರ ಅಧ್ಯಯ
ನಡೆಸಿ, ಒಂದು ದಸ್ತಾವೇಜು ತಯಾರಿ
ಏಪ್ರಿಲ್ 1990 ರಲ್ಲಿ ಕೇಂದ್ರ ಸಮಿ
ಯಲ್ಲಿ ಮಂಡಿಸಬೇಕೆಂದು ಪಾಲಿಟ
ಬ್ಯುರೋ ನಿರ್ಧರಿಸಿದೆ.

## ಸಂಪಾದಕೀಯ.... ಪುಟ 1 ರಿಂದ

ಇದೊಂದು ಜನತೆಯ ಮತ್ತು ಎಲ್ಲಾ ಪಕ್ಷಗಳ ಮುಂದಿರುವ ಪ್ರಶ್ನೆ. ಮಾರ್ಕ್ಸ್‌ವಾದಿ ಕಮ್ಯುನಿಷ್ಟ್ ಪಕ್ಷ ಮತ್ತು ಇತರ ಎಡ ಪಕ್ಷಗಳು ಈ ಬಗ್ಗೆ ತಮ್ಮ ನಿಲುವೆಯನ್ನು ಸ್ಪಷ್ಟಪಡಿಸಿವೆ. ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಪಕ್ಷಗಳು ಈಗಲೂ ಈ ಕುರಿತು ಸಂದರ್ಭವಾದಿ ನಿಲುಮೆ ತೆಗೆದುಕೊಳ್ಳುತ್ತಿವೆ ಎಂಬುದು ನಮ್ಮ ಅಭಿಪ್ರಾಯ. ಈ ಚುನಾವಣೆಗಳಲ್ಲಿ ಅವು ಇನ್ನೂ ಸ್ಪಷ್ಟವಾದ, ಲೋಕಸಭಾ ಚುನಾವಣೆಗಳಲ್ಲಿ ತೆಗೆದು ಕೊಂಡುದಕ್ಕಿಂತ ಸ್ಪಷ್ಟವಾಗಿ ನಿಲುಮೆಯನ್ನು ಕೈಗೊಂಡರೆ ಈ ಚುನಾವಣೆಗಳಲ್ಲಿ ಅಲ್ಪ ಸಂಖ್ಯಾತರು ಇನ್ನೂ ದೃಢವಾಗಿ ಕಾಂಗ್ರೆಸ್(ಐ) ವಿರುದ್ಧ ನಿಲುಮೆ ತೆಗೆದುಕೊಳ್ಳಲು ಸಾಧ್ಯವಾಗುವುದು.

ಹಾಗೆಯೇ ಹರಿಜನ, ಗಿರಿಜನ ಮತ್ತಿತರ ಕೆಳಸ್ತರಗಳ ಜನತೆಯು ಕೂಡಾ ದೃಢವಾಗಿ ಕಾಂಗ್ರೆಸ್(ಐ) ವಿರುದ್ಧ ನಿಲುಮೆ ತೆಗೆದುಕೊಳ್ಳುವಂತೆ ಎಡಪಕ್ಷಗಳೂ, ಜಾತ್ಯತೀತ ಪ್ರಜಾಪ್ರಭುತ್ವ ಪಕ್ಷಗಳೂ ಸಹಾಯ ಮಾಡಬೇಕು. ಇದು ಹೇಗೆ ಸಾಧ್ಯ? ಪ್ರಾಯೋಗಿಕವಾಗಿ, ಈ ವಿಭಾಗಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅವಶ್ಯಕವಾದ ಎಲ್ಲಾ ಪ್ರಶ್ನೆಗಳನ್ನು ಎತ್ತಿಕೊಂಡು ಹೋರಾಟ ನಡೆಸುವ ಮೂಲಕ ಇದನ್ನು ಸಾಧಿಸಬಹುದು.

ವ್ಯಾಪಕವಾಗಿ ಅವರ ಮಧ್ಯೆ ಅಕ್ಷರತೆ ಮತ್ತು ವಿದ್ಯಾಭ್ಯಾಸ ಹರಡುವುದು ಒಂದು ಅವಶ್ಯಕ ಕ್ರಮವಾದರೆ ಇನ್ನೊಂದು, ಅವರ ಉದ್ಯೋಗಕ್ಕಾಗಿ ಹೋರಾಡಬೇಕು.

ಜನತಾದಳವೇನೋ ಇಂದು ಈ ದಿಸೆಯಲ್ಲಿ ಒಂದು ಘೋಷಣೆಯನ್ನು ಕೊಟ್ಟಿದೆ. ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿ ಮಾಡುತ್ತೇವೆಂದು. ಇದು ಘೋಷಣೆಯಾಗಿಯೇ ಉಳಿಯಬಾರದು. ಇದನ್ನು ಕಾರ್ಯಗತ ಮಾಡಲು ಜನತಾದಳ ಸರಕಾರದ ಮೇಲೆ ಸಾಕಷ್ಟು ಒತ್ತಾಯವನ್ನು ತರಬೇಕು. ಹೇಗೆ ಅದನ್ನು ಸಾಧಿಸಬೇಕು ಎಂಬುದಕ್ಕೆ ಸಲಹೆಗಳನ್ನು ಕೊಡಬೇಕು.

ಅಲ್ಲದೆ ಭೂಮಿಯ ಪ್ರಶ್ನೆ, ಬಡ ವಿಭಾಗಗಳ ಜನರ ಸಾಲದ ಬಗ್ಗೆ ಈ ಕುರಿತು ವಿಶಾಲ ಪ್ರಮಾಣದ ಪ್ರಚಾರ ಮತ್ತು ಹೋರಾಟಗಳನ್ನು ಸಂಘಟಿಸುವುದಕ್ಕೆ ಈ ಪಕ್ಷಗಳು ಮುಂದಾಗಬೇಕು.

ನಮ್ಮ ರಾಜ್ಯದಲ್ಲಿ ನಡೆಯುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರಾಷ್ಟ್ರೀಯ ರಾಜಕೀಯದ ಭಾಗವಾಗಿ, ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಹೆಚ್ಚೆಚ್ಚು ಹಣವಿನಿಯೋಗಿಸುವುದಕ್ಕೆ ಒತ್ತಾಯ ತರುವ ಪ್ರತಿನಿಧಿಗಳನ್ನು ಆರಿಸಿ ತರುವಂತೆ ಜನತೆಯನ್ನು ಒಲಿಸಬೇಕು.

ಈ ದಿಸೆಯಲ್ಲಿ ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸ್‌ವಾದಿ) ದೇಶದಲ್ಲೂ, ರಾಜ್ಯದಲ್ಲೂ ಚುನಾವಣೆಗಳಲ್ಲಿ ಜವಾಬ್ದಾರಿಯುತ ರಾಷ್ಟ್ರೀಯ ಪಕ್ಷವಾಗಿ ದುಡಿಯಲು ಮುಂದಾಗುವುದು.

## ವಿ.ಹೆಚ್.ಪಿ. ನಿರ್ಧಾರ
# ಎಡಪಕ್ಷಗಳ ಖಂಡನೆ

ವಿಶ್ವಹಿಂದೂ ಪರಿಷತ್ತಿನ ಕೇಂದ್ರ ಮಾರ್ಗದರ್ಶಕ ಮಂಡಲ ನವಂಬರಿನಲ್ಲಿ ನಿಲ್ಲಿಸಿದ ರಾಮಜನ್ಮಭೂಮಿ ಮಂದಿರದ ನಿರ್ಮಾಣ ಕೆಲಸವನ್ನು ಫೆಬ್ರುವರಿ 14 ರಂದು ಮತ್ತೆ ಅದೇ ವಿವಾದಗ್ರಸ್ತ ಸ್ಥಳದಲ್ಲಿ ಮುಂದುವರಿಸಲು ಕೈಗೊಂಡ ನಿರ್ಧಾರವನ್ನು ಎಡಪಕ್ಷಗಳು ತೀವ್ರವಾಗಿ ಖಂಡಿಸಿವೆ.

"ವಿ.ಹೆಚ್.ಪಿ.ಯ ಇಂತಹ ಯಾವುದೇ ಚಟುವಟಿಕೆ ಕೋಮು ಸ್ಥಿತಿಯನ್ನು ಉಲ್ಬಣಗೊಳಿಸುವ ತಂತ್ರ ಹೊಂದಿದ್ದು, ಈ ನಿರ್ಣಯ ದೇಶವನ್ನು ಅಸ್ಥಿರಗೊಳಿಸುವ ಸಾಮ್ರಾಜ್ಯಶಾಹಿಗಳ ಪಿತೂರಿಗಳಿಗೆ ನೇರವಾಗಿ ಸಹಾಯಮಾಡುತ್ತದೆ" ಎಂದು ಸಿ.ಪಿ.ಐ. (ಎಂ) ಪಾಲಿಟ್‌ಬ್ಯುರೋ ಒಂದು ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದೆ. ವಿವಾದಗ್ರಸ್ತ ಸ್ಥಳದಲ್ಲಿ ನಿರ್ಮಾಣಗೊಳಿಸಲು ಕೇಂದ್ರ ಸರ್ಕಾರ ಮತ್ತು ಪ್ರಯತ್ನವನ್ನು ವಿಫಲಗೊಳಿಸಲು ಕೇಂದ್ರ ಸರ್ಕಾರ ಮತ್ತು ಉತ್ತರ ಪ್ರದೇಶ ಸರಕಾರ ದೃಢ ಕ್ರಮ ಕೈಗೊಳ್ಳಬೇಕೆಂದು ಪಾಲಿಟ್‌ಬ್ಯುರೋ ಒತ್ತಾಯಿಸಿದೆ.

ವಿ.ಹೆಚ್.ಪಿ.ಯ ನಿರ್ಧಾರ ದೇಶದಲ್ಲಿ ಗಂಭೀರ ಪರಿಣಾಮಗಳನ್ನು ಉಂಟುಮಾಡುವ ಕ್ರಮವೆಂದು ಟೀಕಿಸಿರುವ ಸಿ.ಪಿ.ಐ. ಪ್ರಧಾನ ಕಾರ್ಯದರ್ಶಿ ರಾಜೇಶ್ವರ್ ರಾವ್ ತಕ್ಷಣ ಎಲ್ಲಾ ರಾಜಕೀಯ ಪಕ್ಷಗಳ ಒಂದುಸಭೆಯನ್ನು ಕರೆಯಬೇಕೆಂದು ಪ್ರಧಾನ ಮಂತ್ರಿಗಳನ್ನು ಒತ್ತಾಯಿಸಿದ್ದಾರೆ.



Printed and published by P.Ramachandra Rao on behalf of Communist party of India (Marxist), Karnataka State Committee L-56, K.V.Temple Street, Sultanpet, Bangalore - 560 053. Phone No. 75331. Editor: P.RAMACHANDRA RAO Managerial Office: C/o Kriya Prakashana, Shobha Lodge Complex, 5th main Road, Gandhinagar, Bangalore - 560 009